ಸಂಪುಟ: 33
ಸಂಚಿಕೆ: 20
ಬೆಲೆ ರೂ. 8.00
ಮಂಗಳೂರು

ಸಜ್ಜನರ ಸಂಗಾತಿ
www.sanmarga.com
# ಸನ್ಮಾರ್ಗ
ವಾರಪತ್ರಿಕೆ

2010 ಆಗಸ್ಟ್ 01 – 07
1431 ಶಅಬಾನ್ 18 – 24




# ಗುಜರಾತ್ 'ಅಭಿವೃದ್ಧಿಯ' ಅಸಲಿ ಮುಖ

■ ಸಮೀರ್ ಎ. ■

ಮೋದಿಯ ಮಹಾ ಸಾಮ್ರಾಜ್ಯದ ಗೂಂಡಾ ವಿಕೆಟೊಂದು ಕಾನೂನಿನ ಮುಂದೆ ಪತನವಾಗಿದೆ. 2 ತಿಂಗಳಿಂದ ಸೊಹ್ರಾಬುದ್ದೀನ್ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಸಿಬಿಐ ಅಧಿಕಾರಿಗಳು ಕಣ್ಣಿಗೆ ಎಣ್ಣೆ ಹಾಕಿ ಹುಡುಕಿದರೂ ಪತ್ತೆಯಾಗದ ಗುಜರಾತ್‌ನ ಗೃಹ ಸಹಾಯಕ ಸಚಿವ ಅಮಿತ್ ಶಾ ಅನಿವಾರ್ಯವಾಗಿ ಗಾಂಧಿನಗರದ ಸಿಬಿಐ ಕಚೇರಿಗೆ ಬಂದು ಶರಣಾಗಿದ್ದಾರೆ. ನಾಪತ್ತೆಯಾಗಿರುವ ಆರೋಪಿ ಎಂದು ಸಿಬಿಐ ಚಾರ್ಜ್‌ಶೀಟು ಸಲ್ಲಿಸಿದೆ. ಮರುದಿವಸದಲ್ಲಿ ಈ ಬೆಳವಣಿಗೆ ನಡೆದಿದೆ. ಎನ್‌ಕೌಂಟರ್ ಪ್ರಕರಣದಲ್ಲಿ ಉಳಿದ ಇತರ ತನ್ನ ಸಹಚರರ ಜೊತೆಗೆ ಸಬರಮತಿ ಜೈಲಿನಲ್ಲಿ ಅವರೀಗ ರಿಮಾಂಡ್ ಸುಖ ಅನುಭವಿಸುತ್ತಿದ್ದಾರೆ. ಅಲ್ಲಿ ಈಗಾಗಲೇ ಈ ಆರೋಪದಲ್ಲಿ ಐಎಎಸ್ ಅಧಿಕಾರಿ ಅಭಯ ಚೂಡಾಸಮ, ಎಟಿಎಸ್ ಮುಖ್ಯಸ್ಥ ವಂಜಾರ, ರಾಜ್‌ಕುಮಾರ ಪಾಂಡ್ಯನ್ ಮತ್ತು ಎನ್‌ಕೌಂಟರ್ ನಡೆದ ಪ್ರದೇಶವಾದ ಉದಯಪುರದ ಎಸ್.ಐ. ಎಂ.ಎನ್. ದಿನೇಶ್ ಕೂಡಾ ಅದೇ ಜೈಲಿನಲ್ಲಿ ಈಗಾಗಲೇ ಕಂಬಿ ಎಣಿಸುತ್ತಿದ್ದಾರೆ.



ತನ್ನ ಅಧಿಕಾರಿಗಳನ್ನು ದುರ್ಬಳಕೆ ಮಾಡುವುದು ಮೋದಿ ಸಾಮ್ರಾಜ್ಯದಲ್ಲಿ ವಿಶೇಷವಲ್ಲ. ಮೋದಿ ಸರಕಾರವು 2002ರ ಹತ್ಯಾಕಾಂಡದ ವೇಳೆ ಮುಸ್ಲಿಮರನ್ನು ಕೊಲ್ಲಿಸುವುದಕ್ಕೆ ಪೊಲೀಸರನ್ನಷ್ಟೇ ಅಲ್ಲ, ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ಕೂಡಾ ಬಳಸಿದ ಆರೋಪವನ್ನು ಎದುರಿಸುತ್ತಿದೆ. ಅದೇ ರೀತಿ 2005ರಲ್ಲಿ ಮೋಟಾರ್ ಸೈಕಲ್‌ನಲ್ಲಿ ಪ್ರಯಾಣಿಸುತ್ತಿದ್ದ ಸೊಹ್ರಾಬುದ್ದೀನ್‌ನನ್ನು ಎ.ಸಿ.ಪಿ. ವಂಜಾರರ ತಂಡ ಗುಂಡು ಹಾರಿಸಿ ಕೆಳಗುರುಳಿಸಿತ್ತು. ನಂತರ ಭಯೋತ್ಪಾದಕರೊಂದಿಗಿನ ಎನ್‌ಕೌಂಟರಾಗಿ ಚಿತ್ರಿಸಿತ್ತು. ಆತನ ಪತ್ನಿ ಕೌಸರ್ ಬೀಯನ್ನೂ ಅಪಹರಿಸಿ ಅತ್ಯಾಚಾರಗೈದು ಸುಟ್ಟುಹಾಕಲಾಗಿತ್ತು. ಅಣ್ಣ ಮತ್ತು ಅತ್ತಿಗೆ ಕೆಲವು ದಿವಸಗಳಿಂದ ನಾಪತ್ತೆಯಾಗಿದ್ದಾರೆಂದು ಸೊಹ್ರಾಬುದ್ದೀನ್ ಸಹೋದರ ಪೊಲೀಸರಿಗೆ ದೂರಿತ್ತರೂ ಪ್ರಯೋಜನವಾಗಲಿಲ್ಲ. ಕೊನೆಗೆ ಸುಪ್ರೀಮ್ ಕೋರ್ಟಿಗೆ ಆತ ಪತ್ರ ಬರೆದಾಗ ಕೋರ್ಟು ಅದನ್ನೇ ದೂರಾಗಿ ಪರಿಗಣಿಸಿ ಗುಜರಾತ್ ಪೊಲೀಸರಿಗೆ ತನಿಖೆ ನಡೆಸುವಂತೆ ಆದೇಶ ನೀಡಿತು. ಗೀತಾ ಜೌಹರಿ ಎಂಬ ಅಧಿಕಾರಿಯನ್ನು

(ಕೊನೆಯ ಪುಟಕ್ಕೆ)

# ದುರ್ನಾತಕ್ಕೆ ಎಚ್ಚೆತ್ತ ಸರಕಾರ

ಬಿ.ಎ. ಸಲೀಮ್




ಹಾವೇರಿ ಜಿಲ್ಲೆಯ ಸವಣೂರಿನ ಭಂಗಿಗಳು ಮೈಮೇಲೆ ಮಲ ಸುರಿಯುವ ಮೂಲಕ ವಿನೂತನ ಶೈಲಿಯ ಪ್ರತಿಭಟನೆ ನಡೆಸಿದರು. ಆಡಳಿತ ವ್ಯವಸ್ಥೆಯು ತಮ್ಮನ್ನು ನಿರ್ಲಕ್ಷಿಸಿದ್ದಕ್ಕಾಗಿ ಮಾಡಿದ ಪ್ರತಿಭಟನೆಯಿದು. ಮಲ ಸುರಿಯುವ ಚಿತ್ರ ನೋಡಿ ಮುಖ ತಿರುಗಿಸಿದವರಿಗೆ ಸರಕಾರ ಅವರನ್ನು ನಡೆಸಿದ ರೀತಿಯನ್ನೂ ಇಲ್ಲಿನ ವ್ಯವಸ್ಥೆಯ ದಬ್ಬಾಳಿಕೆಯನ್ನೂ ನೋಡಿದಾಗ ವಾಕರಿಕೆ ಬರುವಂತಿತ್ತು. ಕಾರಣ ಅವರನ್ನು ಅಷ್ಟು ಹೇಯವಾಗಿ ಶೋಷಿಸಲಾಗಿತ್ತು. ಮಲದ ಗಬ್ಬು ನಾತ ಸರಕಾರದ ಮೂಗಿಗೆ ಬಡಿದು ಎಚ್ಚರವಾಗಿದೆ. ಅವರ ಗೋಳನ್ನು ಕೇಳಲು ಈಗ ಕಿವಿ ನಿಮಿರಿಸಿ ಅವರ ಎಲ್ಲ ಬೇಡಿಕೆಗಳಿಗೆ ಸ್ಪಂದಿಸಿರುವುದಾಗಿ ಹೇಳಿಕೊಂಡು ಏಳು ಕುಟುಂಬಗಳಿಗೆ ಸೂಕ್ತ ವ್ಯವಸ್ಥೆಯ ಮಂಜೂರಾತಿ ಪತ್ರವನ್ನೂ ವಿತರಿಸಿದೆ.

ಇಷ್ಟಕ್ಕೂ ಅವರು ಪ್ರತಿಭಟನೆ ನಡೆಸಲು ಕಾರಣವಾದರೂ ಏನು? ಅವರ ಹಕ್ಕನ್ನು ಕಸಿಯಲು ಸ್ಥಳೀಯ ಪುರಸಭೆ ಮುನ್ನುಗ್ಗಿತ್ತು. ಸರಿಯಾದ ಶೌಚಾಲಯಗಳಿಲ್ಲದೆ ಡಬ್ಬಗಳಲ್ಲಿ ಶೌಚ ನಡೆಸುತ್ತಿರುವ ಈ ಊರಿನ ಜನರ ಮಲವನ್ನು ಈ ಭಂಗೀ ಜನಾಂಗ ಕಳೆದ 70 ವರ್ಷಗಳಿಂದ ಹೊತ್ತುಕೊಂಡು ಹೋಗಿ ಶುಚಿಗೊಳಿಸುತ್ತಿತ್ತು. ಉಳಕೊಳ್ಳಲು ಸರಿಯಾದ ಮನೆಗಳಿಲ್ಲದೆ ತಗಡು ಶೀಟುಗಳಲ್ಲಿ ಜೀವನ ಸಾಗಿಸುತ್ತಿದ್ದ ಇವರ ಮನೆಯ ಬಳಿ ಕೊಳಚೆ ವಸ್ತುಗಳನ್ನು ಎಸೆಯುತ್ತಿದ್ದರು. ಮಾತ್ರವಲ್ಲ, ವಾಣಿಜ್ಯ ಸಂಕೀರ್ಣ ಕಟ್ಟುವ ನೆಪದಲ್ಲಿ ಪುರಸಭೆ ಇವರ ತಗಡು ಶೀಟಿನ ಮನೆಯನ್ನು ತೆರವುಗೊಳಿಸಲು ಯತ್ನಿಸಿತ್ತು. ಅಲ್ಲದೆ, ನಳ್ಳಿನೀರಿನ ಸಂಪರ್ಕವನ್ನೂ ಕಡಿಯಲಾಯಿತು. ಒಂದು ರೀತಿಯಲ್ಲಿ ಈ ಜನಾಂಗದ ಮೇಲೆ ನಿರ್ಬಂಧ ಹೇರಲಾಯಿತು. ಕೊಳಚೆ ನೀರನ್ನು ಉಪಯೋಗಿಸುತ್ತಾ ನೀರಿಗಾಗಿ ಕಚೇರಿಯಲ್ಲಿ ಅಲೆದಾಡಿ ಈ ಜನಾಂಗ ಸುಸ್ತಾಯಿತು. ಕೊನೆಗೆ ಬೇರೆ ದಾರಿ ಕಾಣದೆ ಈ ರೀತಿ ಪ್ರತಿಭಟನೆ ಸಲ್ಲಿಸಿ ಇಲ್ಲಿನ ವ್ಯವಸ್ಥೆಯ ಕರಾಳ ಮುಖವನ್ನು ಅವರು ಅನಾವರಣಗೊಳಿಸಿದರು.

ಇಲ್ಲಿ ಮಲ ಹೊರುವ ಪದ್ಧತಿ ನಿರ್ಮೂಲನವಾಗಿದೆಯೆಂದು ನಮ್ಮ ಆಡಳಿತಗಾರರು ಭಾಷಣ ಬಿಗಿಯುತ್ತಿರುತ್ತಾರೆ. ಆದರೆ ಇಲ್ಲಿ ಸವಣೂರಿನ

(ಕೊನೆಯ ಪುಟಕ್ಕೆ)

# ಐಸ್‌ಕ್ರೀಮ್ ಮೆಲ್ಲುತ್ತಾ ದುರಂತ ಸುದ್ದಿಯನ್ನು ವೀಕ್ಷಿಸುವಾಗ...



ಏ.ಕೆ. ಕುಕ್ಕಿಲ

"ನಿಮಗೆ ಹಸಿವಾಯಿತೆಂದಿಟ್ಟುಕೊಳ್ಳೋಣ. ನೀವು ತಾಯಿ ಕಡೆಗೆ ನೋಡೇ ನೋಡುತ್ತೀರಿ. ಆದರೆ ತಾಯಿ ದಿನಾಲೂ ಅದೇ ಚಪಾತಿ, ದಾಲ್ ಅನ್ನೇ ಬಡಿಸ್ತಾ ಇದ್ರೆ ನೀವೇನು ಮಾಡ್ಬಹುದು? ಸಿಟ್ಟಾಗ್ತೀರಿ. ವೈವಿಧ್ಯತೆ ಅನ್ನೋದು ಮನಸ್ಸನ್ನೂ, ಸಂಬಂಧವನ್ನೂ ಚೆನ್ನಾಗಿಡುತ್ತದೆ. ಈ ವೈವಿಧ್ಯತೆಯನ್ನು ಕಾಪಾಡುವುದಕ್ಕಾಗಿಯೇ ನಾವು ರೆಸ್ಟೋರೆಂಟ್‌ಗೆ ಹೋಗೋದು. ಮನೆಯಲ್ಲೇ ಬೇರೆ ಬೇರೆ ಆಹಾರ ತಯಾರಿಸೋದು. ನಮಗೆ ತಿನ್ನುವ ಬಯಕೆಯನ್ನು ಉಂಟು ಮಾಡೋದು

(3ನೇ ಪುಟಕ್ಕೆ)

# ಇದು ಯಾವ ಬಗೆಯ ಸಹಿಷ್ಣುತೆ?

■ ಪಿ.ಕೆ. ನಿಯಾಝ್


ಒಕ್ತೇವಿಯ ನಸ್ರೀನ್

ಇದು ಹೆಸರು ಮತ್ತು ವೇಷಭೂಷಣದಲ್ಲಿ ಉಗ್ರವಾದ ಮತ್ತು ಭಯೋತ್ಪಾದನೆಯನ್ನು ಆರೋಪಿಸುವ ಕಾಲ. ಹಾಗಿದ್ದರೂ ಹಾಲೋಕಾಸ್ಟ್‌ನ (ಯಹೂದಿ ಜನಾಂಗ ಹತ್ಯೆ) ನಿರಾಕರಣೆಯು ಕನಿಷ್ಠ 16 ಐರೋಪ್ಯ ರಾಷ್ಟ್ರಗಳಲ್ಲಿ ದಂಡ ಮತ್ತು ಜೈಲು ಶಿಕ್ಷೆಗೆ ಅರ್ಹವಾದ ಅಪರಾಧವಾಗಿದೆ. ಆದರೆ ಕೋಟ್ಯಂತರ ಜನರು ಗೌರವಿಸುವ ಪ್ರವಾದಿ ಮುಹಮ್ಮದ್‌ರ ನಿಂದನೆಯು ಈ ರಾಷ್ಟ್ರಗಳಲ್ಲಿ ಅಪರಾಧವಲ್ಲ. ನಿಂದೆಯನ್ನು ಪ್ರತಿಭಟಿಸುವುದೇ ಧಾರ್ಮಿಕ ಮೂಲಭೂತವಾದ ಮತ್ತು ಭಯೋತ್ಪಾದಕ ಕೃತ್ಯವಾಗಿದೆ. ಆದರೂ ಪಾಶ್ಚಾತ್ಯರ ಈ ಅಭಿಪ್ರಾಯ ಸ್ವಾತಂತ್ರ್ಯದ ದ್ವಿಮುಖ ಧೋರಣೆಯ ಬಗ್ಗೆ ಚರ್ಚೆ ನಡೆಯುವುದೇ ಇಲ್ಲ.

ಕಳೆದ ವಾರ ಲೆಬನಾನ್‌ನ ಪ್ರಮುಖ ಶಿಯಾ ನಾಯಕ ಸಯ್ಯದ್ ಮುಹಮ್ಮದ್ ಹುಸೈನ್ ಫಝ್ಲುಲ್ಲಾ ನಿಧನರಾದರು. ಅವರನ್ನು ಹೊಗಳಿದ ಸಿ.ಎನ್.ಎನ್. ಚಾನೆಲ್‌ನ ಮಧ್ಯಪ್ರಾಚ್ಯ ವಿಭಾಗದ ಪ್ರಧಾನ ಸಂಪಾದಕಿ ಒಕ್ತೇವಿಯ ನಸ್ರೀನ್‌ರನ್ನು ಕೆಲಸದಿಂದ ವಜಾಗೊಳಿಸಲಾಯಿತು. ಹಾಗೆಯೇ ಬೈರೂತ್‌ನ ಬ್ರಿಟಿಷ್ ರಾಯಭಾರಿ ಫ್ರಾನ್ಸಿಸ್‌ಗಾರ ಬ್ಲಾಗನ್ನು ವಿದೇಶಾಂಗ ಖಾತೆಯ ವೆಬ್‌ಸೈಟ್‌ನಿಂದ ತೆಗೆದು ಹಾಕಲಾಯಿತು.

(4ನೇ ಪುಟಕ್ಕೆ)

## ನಿರೀಕ್ಷಿಸಿರಿ.....

ಮಾನವ ಜನಾಂಗಕ್ಕೆ ಸನ್ಮಾರ್ಗದರ್ಶಕವಾದ ಸತ್ಯಾಸತ್ಯ ವಿವೇಚಕ ಗ್ರಂಥ ಕುರ್‌ಆನ್ ಅವತೀರ್ಣವಾದ ರಮಝಾನ್ ಆಗತವಾಗುತ್ತಿದೆ. ಅದಕ್ಕೆ ಬೇಕಾದ ಪೂರ್ವ ತಯಾರಿಯೊಂದಿಗೆ ರಮಝಾನ್‌ನ ವಿಶೇಷತೆ, ಕುರ್‌ಆನ್‌ನ ಪ್ರಾಧಾನ್ಯತೆ ಸಾರುವ...

**ರಮಝಾನ್ ವಿಶೇಷಾಂಕ** ಮುಂದಿನ ವಾರ ನಿಮ್ಮ ಕೈಯಲ್ಲಿ

ವ್ಯವಸ್ಥಾಪಕ: 9449591561 E-mail: sanmargamatter@gmail.com



ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಕ್ರೀಡೆಯಿಂದ ಸಭ್ಯತೆಯನ್ನು ಉಚ್ಚಾಟಿಸಲಾಗಿದೆ

ಕ್ರೀಡಾಕ್ಷೇತ್ರದ ಕುರಿತಂತೆ ಕಳೆದ ಒಂದು ವಾರದಲ್ಲಿ ಪ್ರಕಟವಾದ ಮಾಧ್ಯಮ ಸುದ್ದಿಗಳು, ಆರೋಗ್ಯ ಪೂರ್ಣ ವ್ಯಕ್ತಿಯನ್ನೂ ಅಸ್ವಸ್ಥಗೊಳಿಸುವಷ್ಟು ಆಘಾತಕಾರಿಯಾಗಿದೆ. ಭಾರತೀಯ ಮಹಿಳಾ ಹಾಕಿ, ವೇಟ್ ಲಿಫ್ಟಿಂಗ್, ಈಜು ಕ್ಷೇತ್ರಗಳು ಸದ್ಯ ಲೈಂಗಿಕ ಕಿರುಕುಳ, ದೌರ್ಜನ್ಯಗಳಿಗಾಗಿ ಸುದ್ದಿಯಲ್ಲಿವೆ. ಹಾಕಿಯ ಪಾಠ ಹೇಳಿದ್ದಕ್ಕಿಂತ ಲೈಂಗಿಕ ಪಾಠ ಮಾಡುವುದರಲ್ಲೇ ಕೋಚ್ ಹೆಚ್ಚು ಆಸಕ್ತನಾಗಿದ್ದ ಎಂದು ಆಟಗಾರ್ತಿಯರು ದೂರಿಕೊಂಡಿದ್ದಾರೆ. ಈ ನಡುವೆ ಮುಹಮ್ಮದ್ ಅಝರುದ್ದೀನ್ ತನ್ನ ಎರಡನೇ ಪತ್ನಿಗೆ ಕೈಕೊಟ್ಟು, ಬ್ಯಾಡ್ಮಿಂಟನ್ ತಾರೆಯ ಕೈ ಹಿಡಿಯುವ ಸುದ್ದಿಗಳೂ ಪ್ರಚಾರದಲ್ಲಿವೆ. ಟೆನ್ನಿಸ್ ಆಟಗಾರ ಮಹೇಶ್ ಭೂಪತಿ ಡಬಲ್ಸ್ ಜತೆಗಾರರನ್ನು ಬದಲಿಸಿದಂತೆ ಜೀವನ ಸಂಗಾತಿಯನ್ನೂ ಬದಲಿಸಲು ಮುಂದಾಗಿದ್ದಾರೆ. ಒಟ್ಟಿನಲ್ಲಿ ಕ್ರೀಡಾಕ್ಷೇತ್ರದಲ್ಲಿ ಮಿಂಚಬೇಕೆಂದು ಕನಸು ಹೊತ್ತ ಯುವ ಪ್ರತಿಭೆಗಳ ಉತ್ಸಾಹವನ್ನೆಲ್ಲಾ ಇಳಿಸುವುದರಲ್ಲಿ ಕ್ರೀಡಾಕ್ಷೇತ್ರ ಸದ್ಯ ಬ್ಯುಸಿಯಾಗಿದೆ.

ಕ್ರೀಡೆಗೂ ಈ ದೇಶದ ಜನರ ನೆಮ್ಮದಿಗೂ ಗಾಢವಾದ ನಂಟಿದೆ. ಕ್ರೀಡೆ ಈ ದೇಶದಲ್ಲಿ ಒಂದು ಮನರಂಜನೆಯಾಗಿಯಷ್ಟೇ ಉಳಿದಿಲ್ಲ. ರಾಜಕೀಯ ಅತ್ಯಂತ ಕೆಟ್ಟು ಹೋಗಿರುವ ದೇಶವೊಂದರಲ್ಲಿ ಜನ ಬದಲಾವಣೆಯಾಗಿ ಆಯ್ದುಕೊಳ್ಳುವುದು ಕ್ರೀಡೆಗಳನ್ನೇ. ಅಡ್ವಾಣಿಯದ್ದೋ ಯಡಿಯೂರಪ್ಪರದ್ದೋ ಸೋನಿಯಾರದ್ದೋ ಅದೇ ಹಳಸಲು ಟೀಕೆ-ಟಿಪ್ಪಣಿಗಳಿಗೆ ಬೇಸತ್ತು ಜನರು ಕ್ರಿಕೆಟ್‌ನಲ್ಲೋ ಟೆನ್ನಿಸ್‌ನಲ್ಲೋ ನೆಮ್ಮದಿಯನ್ನು ಕಾಣುವುದಿದೆ. ಆದರೆ ಇದೀಗ ಆ ಕ್ಷೇತ್ರವೂ ದಿಕ್ಕು ತಪ್ಪಿರುವುದನ್ನು ಕೆಲವು ಆಟಗಾರರು ಬಹಿರಂಗಗೊಳಿಸಿದ್ದಾರೆ. ಇಷ್ಟಕ್ಕೂ ಕೋಚನ್ನೋ ಮ್ಯಾನೇಜರನ್ನೋ ಉಚ್ಚಾಟಿಸಿದ ಮಾತ್ರಕ್ಕೇ ಕಿರುಕುಳ ವೊಂದು ಶಾಶ್ವತವಾಗಿ ಇಲ್ಲವಾಗಲು ಸಾಧ್ಯವೇ? ಪುರುಷ ಕ್ರಿಕೆಟ್‌ನಂತೆ ಮಹಿಳಾ ಕ್ರಿಕೆಟ್, ಪುರುಷ ಟೆನ್ನಿಸ್‌ನಂತೆ ಮಹಿಳಾ ಟೆನ್ನಿಸ್, ಹಾಕಿ, ಫುಟ್ಬಾಲ್... ಹೀಗೆ ಪ್ರತಿಯೊಂದು ಕ್ಷೇತ್ರಕ್ಕೂ ಮಹಿಳೆಯರನ್ನು ತಂದು ಕೂರಿಸಿದ್ದು ಯಾರು? ಯಾಕೆ? ಅದರ ಹಿಂದೆ ಆಟಕ್ಕಿಂತ ಹೊರತಾದ ವ್ಯಾಪಾರಿ ಉದ್ದೇಶಗಳಿಲ್ಲ ಎಂದು ಹೇಳುವುದಾದರೂ ಹೇಗೆ? ಆರಂಭ ಕಾಲದಲ್ಲಿ ಮಹಿಳಾ ಟೆನ್ನಿಸನ್ನು ಸಂಪೂರ್ಣ ಮೈಮುಚ್ಚುವ ಬಟ್ಟೆಯೊಂದಿಗೆ ಆಡಲಾಗುತ್ತಿತ್ತು. ಬರಬರುತ್ತಾ ಬಟ್ಟೆಯೇ ಆಕರ್ಷಣೆಯಾಯಿತು. ಆಟ ಕಳೆಗುಂದಿತು. ಕಳೆದ ವಿಂಬಲ್ಡನ್ ಟೆನ್ನಿಸ್‌ನಲ್ಲಿ ಸೆರೆನಾ ವಿಲಿಯಮ್ಸ್‌ರ ಬಟ್ಟೆ ಸುದ್ದಿ ಮಾಡಿದಷ್ಟು ಆಟ ಸುದ್ದಿ ಮಾಡಿರಲಿಲ್ಲ. ಲೈಂಗಿಕ ಕಿರುಕುಳದ ಬಗ್ಗೆ ಚರ್ಚೆ, ಸಂವಾದ ನಡೆಸುವಾಗಲೆಲ್ಲಾ ಯಾಕೆ ಅದಕ್ಕೆ ಅವಕಾಶ ಮಾಡಿಕೊಡುವ ಕ್ರೀಡಾ ನಿಯಮಗಳ ಬಗ್ಗೆ ಚರ್ಚೆಯಾಗುವುದಿಲ್ಲ? ಕ್ರೀಡೆ ಯಾವುದೇ ಇರಲಿ, ಮಹಿಳಾ ಕ್ರೀಡಾಪಟುಗಳ ಬಟ್ಟೆ ಕಿರಿದು, ಪ್ರಚೋದನಕಾರಿಯಾಗಿಯೇ ಇರುವುದೇಕೆ? ಆಟಕ್ಕೂ ಬಟ್ಟೆಯ ಗಾತ್ರಕ್ಕೂ ಸಂಬಂಧ ಕಲ್ಪಿಸಿದ, ಅದನ್ನು ನಿಯಮವಾಗಿ ತಂದ ವ್ಯಕ್ತಿಗಳಾದರೂ ಯಾರು? ಅವರ ಉದ್ದೇಶವೇನು? ವ್ಯಾಪಾರವೇ? ಕ್ರೀಡೆಗಿಂತ ಆಟಗಾರರ ಬಟ್ಟೆ, ಭಂಗಿಗಳೇ ಪ್ರಮುಖವಾಗುವಂತೆ ತಂತ್ರ ಹೆಣೆದವರನ್ನೂ ಯಾಕೆ ಕ್ರೀಡಾಕ್ಷೇತ್ರದ ಲೈಂಗಿಕ ಪ್ರಕರಣಗಳ ಸಹ ಆರೋಪಿಗಳನ್ನಾಗಿ ಪರಿಗಣಿಸಬಾರದು? ಸಭ್ಯ ಆಟ ವನ್ನು ಅಸಭ್ಯಗೊಳಿಸಿದವರನ್ನು ಕೊಂಡಾಡುತ್ತಾ, ಕೋಚನ್ನೋ, ಇನ್ನಾರನ್ನೋ ವಜಾ ಮಾಡುವುದರಿಂದ ಕ್ರೀಡಾಕ್ಷೇತ್ರ ಶುದ್ಧವಾಗುವುದಾದರೂ ಹೇಗೆ?

ಈ ದೇಶದಲ್ಲಿ ಆಟಗಾರರು ವಿಶೇಷ ವರ್ಚಸ್ಸನ್ನು ಬೆಳೆಸಿಕೊಂಡಿದ್ದಾರೆ. ಯುವ ಪೀಳಿಗೆ ಆಟಗಾರರನ್ನು ರೋಲ್ ಮಾಡೆಲ್ ಆಗಿ ಪರಿಗಣಿಸುತ್ತಿದೆ. ಸಚಿನ್ನೋ, ಧೋನಿಯೋ ಒಂದು ನಗರಕ್ಕೆ ಬರುತ್ತಾರೆಂದರೆ ಜನ ಸಾಲುಗಟ್ಟಿ ನಿಲ್ಲುತ್ತಾರೆ. ಹೀಗಿರುವಾಗ ಇಂಥವರ ಖಾಸಗಿ ಬದುಕು ಕೂಡಾ ಸಾರ್ವಜನಿಕರ ಮೇಲೆ ಖಂಡಿತ ಪ್ರಭಾವ ಬೀರುತ್ತದೆ. ಪತ್ನಿ, ಮಕ್ಕಳು, ಕುಟುಂಬ ಮುಂತಾದುವುಗಳು, ಬಳಸಿ ಎಸೆಯುವ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದ ಮಧ್ಯೆಯೂ ಈ ದೇಶದಲ್ಲಿ ಗೌರವದ ಸ್ಥಾನವನ್ನು ಈಗಲೂ ಉಳಿಸಿ ಕೊಂಡಿದೆ. ಹೀಗಿರುವಾಗ ಯುವ ಪೀಳಿಗೆ ಹೆಚ್ಚು ಕುತೂಹಲ, ಆಸಕ್ತಿಯಿಂದ ವೀಕ್ಷಿಸುತ್ತಿರುವ ಸಿನಿಮಾ, ಕ್ರೀಡಾಕ್ಷೇತ್ರದ ಮಂದಿಯೇ ನೈತಿಕ ಕಟ್ಟುಪಾಡುಗಳನ್ನು ಮುರಿದರೆ, ಅದು ತಪ್ಪು ಸಂದೇಶವನ್ನು ರವಾನಿಸಲಾರದೇ? ಇಷ್ಟಕ್ಕೂ ಮೊದಲ ಪತ್ನಿ ಇದ್ದುಕೊಂಡೇ ಅನಿವಾರ್ಯ ಸಂದರ್ಭದಲ್ಲಿ ಇನ್ನೊಬ್ಬಳನ್ನು ಕಟ್ಟಿಕೊಳ್ಳುವ ಅವಕಾಶವನ್ನು ಬರ್ಬರ, ಮಹಿಳಾ ವಿರೋಧಿ ಎನ್ನುವವರು, ಪತ್ನಿಯನ್ನು ಬದಲಿಸಿಕೊಳ್ಳುತ್ತಾ ಹೋಗುವವರನ್ನೇಕೆ ಸಹಿಸಿಕೊಳ್ಳುತ್ತಾರೆ? ಅದೇಕೆ ಬರ್ಬರ ಅನ್ನಿಸಿಕೊಳ್ಳುತ್ತಿಲ್ಲ? ನಿಜವಾಗಿ ಇಂಥ ಸಂದರ್ಭದಲ್ಲಿ ಅತ್ಯಂತ ಹೆಚ್ಚು ಸಂಕಷ್ಟಕ್ಕೆ ಒಳಗಾಗುವುದು ಮಹಿಳೆಯೇ. ಆಕೆ ಆಸರೆಯಿಲ್ಲದೆ ಒಂಟಿಯಾಗುತ್ತಾಳೆ. ಪುರುಷನಷ್ಟು ಸುಲಭದಲ್ಲಿ ಮರು ಮದುವೆಯಾಗುವ ಅವಕಾಶವೂ ಇರುವುದಿಲ್ಲ. ಇನ್ನು ಮದುವೆಯಾದರೂ ಆತ ಕೈಕೊಡಲಾರ ಎಂದು ಹೇಳುವಂತೆಯೂ ಇಲ್ಲ. ಒಂದು ರೀತಿಯಲ್ಲಿ ಯಾವಾಗ ತನ್ನ ಪತಿ ಕೈ ಕೊಡುತ್ತಾನೆ, ಇನ್ನೋರ್ವ ಹೆಣ್ಣನ್ನು ಸಂಗಾತಿಯಾಗಿ ಸ್ವೀಕರಿಸುತ್ತಾನೆ ಎಂಬ ಭಯ ದೊಂದಿಗೇ ಹೆಣ್ಣು ಬದುಕಬೇಕಾಗುತ್ತದೆ. ಇದೇನು ಮಹಿಳಾ ಪರವೇ? ಬಹುಪತ್ನಿತ್ವದ ಅವಕಾಶವನ್ನು ಲೇವಡಿ ಮಾಡುವವರು, ಇದಕ್ಕೇಕೆ ಆಧುನಿಕ ಜೀವನ ಶೈಲಿ ಎಂಬ ನುಣುಪಿನ ವ್ಯಾಖ್ಯಾನ ಕೊಟ್ಟು, ಅದರ ಬರ್ಬರತೆಯನ್ನು ತಗ್ಗಿಸುತ್ತಾರೆ?

ಸಿನಿಮಾ ಕ್ಷೇತ್ರವನ್ನು ವ್ಯಾಪಾರಿ ಉದ್ದೇಶಕ್ಕಾಗಿ ಹೇಗೆ ಅಸಭ್ಯಗೊಳಿಸಲಾಯಿತೋ ಹಾಗೆಯೇ ಕ್ರೀಡಾ ಕ್ಷೇತ್ರವನ್ನೂ ಅಪವಿತ್ರಗೊಳಿಸಲಾಗಿದೆ. ಕ್ರೀಡೆ ಇವತ್ತು ಕೇವಲ ಆಟವಾಗಿ ಉಳಿದಿಲ್ಲ. ಅದು ನೂರಾರು ಉದ್ದಿಮೆದಾರರ ನಾಡಿಮಿಡಿತವನ್ನು, ಲಕ್ಷಾಂತರ ಜೂಜುಕೋರರ ಸಾವು-ಬದುಕನ್ನು ನಿರ್ಧರಿಸುವ ದಾಳವೂ ಆಗಿ ಬಿಟ್ಟಿದೆ. ಆಟಗಾರನ ಆಟಕ್ಕಿಂತ ಆತನ ಇತರ ಚಟುವಟಿಕೆಗಳು ಜನಪ್ರಿಯತೆಯನ್ನು ನಿರ್ಧರಿಸುವಲ್ಲಿ ಪ್ರಧಾನ ಪಾತ್ರ ವಹಿಸತೊಡಗಿವೆ. ಆಟಗಾರರನ್ನು ಮತ್ತು ಆಟವನ್ನು ಮುಂದಿಟ್ಟುಕೊಂಡು ಬಂಡವಾಳಶಾಹಿಗಳು ರಚಿಸಿರುವ ತಂತ್ರಕ್ಕೆ ಆಟ ಮತ್ತು ಅದರ ಸ್ವಾದ ಕಣ್ಮರೆಯಾಗುತ್ತಿದೆ. ಆಟವನ್ನು ಅನುಭವಿಸುವುದಕ್ಕಿಂತ ಆಟಗಾರರನ್ನೇ ಅನುಭವಿಸುವಂಥ ವಾತಾವರಣವನ್ನು ಕೃತಕವಾಗಿ ತಯಾರಿಸಲಾಗುತ್ತಿದೆ. ಹೀಗಿರುವಾಗ ಲೈಂಗಿಕ ದೌರ್ಜನ್ಯವು, ಭವಿಷ್ಯದಲ್ಲಿ ಕ್ರೀಡೆಯ ಭಾಗವಾಗಿ, ಸಭ್ಯ ಚಟುವಟಿಕೆಯಾಗಿ ಪರಿಗಣಿತವಾಗಲಾರದೆಂದು ಹೇಗೆ ಹೇಳುವುದು? ಯಾಕೆಂದರೆ ಸಭ್ಯ ಎಂಬ ಪದ ಮತ್ತು ಅದಕ್ಕೆ ಸಂಬಂಧಿಸಿದ ಮೌಲ್ಯಗಳನ್ನು ಈಗಾಗಲೇ ಕ್ರೀಡಾಕ್ಷೇತ್ರದಿಂದ ಉಚ್ಚಾಟಿಸಲಾಗಿದೆ.

## ವಿ ಚಾ ರ ಮ ಣಿ

ಅವನು ನಿಮಗೆ ಕಾಣುವ ಸ್ತಂಭಗಳಿಲ್ಲದೆ ಆಕಾಶಗಳನ್ನು ಸೃಷ್ಟಿಸಿದನು. ಭೂಮಿಯು ನಿಮ್ಮ ಸಹಿತ ಉರುಳಿ ಬಿಡದಂತೆ ಅವನು ಅದರಲ್ಲಿ ಪರ್ವತಗಳನ್ನು ನಾಟಿದನು. ಅವನು ಎಲ್ಲ ತರದ ಪ್ರಾಣಿಗಳನ್ನು ಭೂಮಿಯಲ್ಲಿ ಹಬ್ಬಿಸಿಬಿಟ್ಟನು. ಆಕಾಶದಿಂದ ನೀರನ್ನು ಸುರಿಸಿದನು ಮತ್ತು ಭೂಮಿಯಲ್ಲಿ ತರತರದ ಉತ್ತಮ ವಸ್ತುಗಳನ್ನು ಮೊಳೆಯಿಸಿದನು. ಇದೆಲ್ಲಾ ಅಲ್ಲಾಹನ ಸೃಷ್ಟಿ. ಈಗ ಅವನ ಹೊರತು ಆ ಇತರರು ಏನನ್ನು ಸೃಷ್ಟಿಸಿದ್ದಾರೆಂಬುದನ್ನು ನನಗೆ ತೋರಿಸಿರಿ. ವಾಸ್ತವದಲ್ಲಿ ಈ ಅಕ್ರಮಿಗಳು ಸುವ್ಯಕ್ತ ಪಥಭ್ರಷ್ಟತೆಗೊಳಗಾಗಿದ್ದಾರೆ. ಲುಕ್ಮಾನರು ಅಲ್ಲಾಹನಿಗೆ ಕೃತಜ್ಞರಾಗಲೆಂದು ನಾವು ಅವರಿಗೆ ಯುಕ್ತಿಯನ್ನು ದಯಪಾಲಿಸಿದೆವು. ಕೃತಜ್ಞನ ಕೃತಜ್ಞತೆಯು ಅವನ ಸ್ವಂತಕ್ಕೇ ಲಾಭದಾಯಕವಾಗಿದೆ ಮತ್ತು ಯಾರಾದರೂ ಧಿಕ್ಕರಿಸಿದರೆ ವಾಸ್ತವದಲ್ಲಿ ಅಲ್ಲಾಹನು ನಿರಪೇಕ್ಷನೂ ಸ್ವಯಂ ಸ್ತುತ್ಯರ್ಹನೂ ಆಗಿರುತ್ತಾನೆ. ಲುಕ್ಮಾನರು ತಮ್ಮ ಪುತ್ರನಿಗೆ ಉಪದೇಶವೀಯುತ್ತಿದ್ದ ಸಂದರ್ಭ ವನ್ನು ಸ್ಮರಿಸಿರಿ. ಅವರು, "ಮಗನೇ ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡಬೇಡ ನಿಜವಾಗಿಯೂ 'ಬಹುದೇವವಿಶ್ವಾಸ' ಮಹಾ ಅಕ್ರಮವಾಗಿದೆ" ಎಂದರು.

(ಪವಿತ್ರ ಕುರ್‌ಆನ್: 31: 10-13)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಸಂತೋಷದ ವಿಚಾರ

ಸಂಚಿಕೆ 14ರಲ್ಲಿ ಪ್ರಕಟವಾದ ‘ಪುರುಷರನ್ನೇಕೆ ಟೀಕಿಸುತ್ತೀರಿ ಮಹಿಳೆಯರೇನು ಕಡಿಮೆಯೇ’ (ಸವಿಯ ಎಸ್.) ಎಂಬ ಲೇಖನ ಮಾರ್ಮಿಕ ವಾಗಿತ್ತು. ಪುರುಷರು ವರದಕ್ಷಿಣೆ ಬೇಡ ಎಂದು ಹೇಳಿದರೂ ಚಿನ್ನ ಹಾಕದಿದ್ದರೆ ನಾನು ಮದುವೆ ಆಗುವುದಿಲ್ಲ ಎಂದು ಹೇಳುವ ಹುಡುಗಿಯರು ನಮ್ಮಲ್ಲಿ ಧಾರಾಳ ಇದ್ದಾರೆ.

ಸಂಚಿಕೆ 15ರಲ್ಲಿ ಪ್ರಕಟವಾದ ‘ಇಷ್ಟೊಂದು ಉತ್ತಮ ವ್ಯವಸ್ಥೆ ಬಳಿಯಿದ್ದೂ ಭಿಕ್ಷೆ ಬೇಡಬೇಕೆ’ ಎಂಬ ಏ.ಕೆ. ಕುಕ್ಕಿಲರವರ ಲೇಖನ ಅರ್ಥ ಪೂರ್ಣವಾಗಿತ್ತು. ಮಂಗಳೂರು ಕಾಝಿಯವರು ಕೆಲವು ಬಡವರ ಮನೆಗೆ ಭೇಟಿ ಕೊಟ್ಟ ಬೆನ್ನಿಗೇ ಉಡುಪಿ ಕಾಝಿಯವರು ಕೂಡ ಕೆಲವು ಬಡವರ ಮನೆಗೆ ಭೇಟಿ ಕೊಟ್ಟರು. ನಿಜವಾಗಿ ಇಂಥ ಕೆಲಸವನ್ನು ಪ್ರವಾದಿಯವರು(ಸ) ಮೊದಲೇ ಮಾಡಿ ತೋರಿಸಿದ್ದರು. ಸಮುದಾಯದ ನಾಯ ಕರು ಯಾವಾಗಲೋ ಮಾಡಬೇಕಾದ ಕೆಲಸ ವಿದು. ಈಗಲಾದರೂ ಮಾಡಲು ಹೊರಟಿರುವುದು ಸಂತೋಷದ ವಿಷಯವೇ ಆಗಿದೆ. ಇದು ಪ್ರತಿ ಯೊಂದು ಜಮಾಅತ್‌ನಲ್ಲಿ ಆಗ ಬೇಕಾದಂತಹ ಕೆಲಸವಾಗಿದೆ.

**ಮಖ್ಬೂಲ್ ಅಹ್ಮದ್ ಕುದ್ರೋಳಿ**

### ಬೇಲಿಯ ಹಿಂದಿರುವ ಕೈಗಳು...

ಸಂಚಿಕೆ 17ರ ‘ಐದು ಕೋಟಿ ಕನ್ನಡಿಗರಿಗೆ ಬಾಗದೇ ಅಡ್ವಾಣಿಗೆ ಬಾಗಿದರೂ’ ಲೇಖನಕ್ಕೆ ಪೂರಕವಾಗಿ ಬಳಸಲಾದ ವ್ಯಂಗಚಿತ್ರದ, ‘ಬೇಲಿಯ ಹಿಂದೆ ಯಾರು ಯಾರು ಇದ್ದಾರೆ’ ಎನ್ನುವುದು ಬಯಲಾಗುವುದು ನಿಶ್ಚಿತ. ಭಾಜಪ ಲೋಕಾ ಯುಕ್ತರ ಮುಂದೆ ಸೋತಿರುವುದು ಮಾತ್ರ ಅಚ್ಚರಿ ತರಿಸಿತು.

‘ಕಾಶ್ಮೀರದ ಕಲ್ಲಿಗೆ ದೆಹಲಿಯ ಬಂದೂಕು ಉತ್ತರವೇ?’ ಎನ್ನುವ ಲೇಖನ ಬಹು ಗಂಭೀರ ವಾಗಿದೆ. ಲೇಖಕರ ಅನಿಸಿಕೆಯಂತೆ ಕಾಶ್ಮೀರಿಗಳು ಸುದೀರ್ಘ ರಾಷ್ಟ್ರಪತಿ ಆಡಳಿತದಿಂದ ಚುನಾವಣಾ ರಾಜಕೀಯಕ್ಕೆ ಇಳಿದಿದ್ದು ನಾವು ಭಾರತದೊಂದಿ ಗೆಯೇ ಇದ್ದೇವೆ ಎನ್ನುವುದನ್ನು ಸೂಚಿಸಿದೆ.

ಸಂಪಾದಕೀಯ ಅರ್ಥಬದ್ಧವಾಗಿತ್ತು. ಭೈರಪ್ಪ ನವರು ಉತ್ತಮ ಕಾದಂಬರಿಕಾರರು. ಆದರೆ ವಿವಿಧ ಧರ್ಮಗಳ ಅರಿವು ಅವರಿಗೆ ಇಲ್ಲದಿರುವಂತಿದೆ.

**ಅಬ್ದುಲ್ ವಹ್ಹಾಬ್ ಮುಲ್ಲಾ ಗಂಗಾವತಿ**

### ಭಾವಚಿತ್ರ ಅಗತ್ಯವಿದೆಯೇ?

ಸನ್ಮಾರ್ಗವು ಇಸ್ಲಾಮ್ ನಿಷಿದ್ಧಗೊಳಿಸಿದ ಯಾವೊಂದು ಜಾಹೀರಾತನ್ನು ಕೂಡಾ ನೀಡದೇ ವಸ್ತುನಿಷ್ಠವಾಗಿ ನಿರಂತರ 3 ದಶಕಗಳ ಕಾಲ ಹೊರಬರುತ್ತಿರುವುದು ನಿಜಕ್ಕೂ ವೈಶಿಷ್ಟ್ಯವೇ.

ಆದರೂ ಇಸ್ಲಾಮ್ ನಿಷಿದ್ಧಗೊಳಿಸಿದ ಕಾರ್ಯ ಗಳಲ್ಲಿ ದೇಶದ ಕಾನೂನಿಗೊಳಪಟ್ಟು ವಿದ್ವಾಂಸರು ಸಣ್ಣ ರಿಯಾಯಿತಿಯನ್ನು ನೀಡಿದ್ದಾರೆ. ಉದಾ: ಭಾವಚಿತ್ರ ತೆಗೆಯುವುದು. ಇದು ಅಗತ್ಯವಿರುವೆಡೆ ಮಾತ್ರ ಉಪಯೋಗಿಸಬೇಕಾಗಿದೆ. ಆದರೆ ಇತ್ತೀಚೆಗೆ ಸನ್ಮಾರ್ಗದಲ್ಲಿ ಜಮಾಅತ್ ವಿದ್ವಾಂಸರ ಭಾವಚಿತ್ರ ಪ್ರಕಟವಾಗುತ್ತಿರುವುದು ದುರಂತ.

ಹೊಸದಾಗಿ ಮೌಲಾನಾ ಕಾಲಂ ಆರಂಭ ವಾದಾಗ ಮನಸ್ಸಿಗೆ ಅತೀವ ಸಂತೋಷವಾಯಿತು. ಆದರೆ ಮೌಲಾನಾರ ಭಾವಚಿತ್ರ ಕಂಡು ನೊಂದು ಕೊಂಡೆ. ಇವೆಲ್ಲಾ ಅಗತ್ಯವಿದೆಯೇ? ಕಾನೂನಿನ ಮಿತಿಯಲ್ಲಿ ಅಗತ್ಯವಿರುವೆಡೆ ಮಾತ್ರ ಭಾವಚಿತ್ರ ಉಪಯೋಗಿಸಿ. ಇನ್ನಿತರ ಕಡೆ ಯಾವುದೇ ಕಾರಣಕ್ಕೂ ಭಾವಚಿತ್ರ ಉಪಯೋಗಿಸದಿರುವುದು ಸೂಕ್ಷ್ಮತೆಯಲ್ಲವೇ?

**ಮುಹಮ್ಮದ್ ನಾಸಿರ್ ಆರ್. ಬೆಳ್ಮರೆಂಜಾಡಿ**

### ಸಂಪಾದಕೀಯ

ಸಂಚಿಕೆ 17ರ ಸಂಪಾದಕೀಯ ‘ಬದಲಾಗ ಬೇಕಾದ್ದು...’ ತುಂಬಾ ಉತ್ತಮ ರೀತಿಯಲ್ಲಿ ಭೈರಪ್ಪನವರಿಗೆ ತಿಳಿಯಪಡಿಸಿದೆ. ಕುರ್‌ಆನಿನ ಸಮಗ್ರ ಅಧ್ಯಯನದ ಕೊರತೆ ಅವರನ್ನು ತುಂಬಾ ಬಾಧಿಸುತ್ತಿದೆ. ಅವರಂದಂತೆ ಮನು ಶಾಸ್ತ್ರವನ್ನು ಅವರು ಕೈ ಬಿಟ್ಟದ್ದಲ್ಲ. ಅದು ತನ್ನ ನೈಜ ಪತನವನ್ನು ಕಂಡಿದೆ. ಅಲ್ಲಾಹನ ನೈಜ ಭಕ್ತರು ಯಾವಾಗಲೂ ಅಹಿಂಸೆಯ ಪ್ರತಿಪಾದಕರೇ ಹೊರತು ಹಿಂಸಾ ಪ್ರಿಯರಲ್ಲ.

**ಇಮಾರತ್ ಅಲಿ ಕಲ್ಲಡ್ಕ**

ಸಂಚಿಕೆ 18ರ ಸಂಪಾದಕೀಯ ‘ಅಕ್ಟೋಪಸ್ ಗಳಿಗೆ ಜಹಾಂಗೀರನ ಏಟು’ ತುಂಬಾ ಚೆನ್ನಾಗಿತ್ತು. ವಿಜ್ಞಾನ ಇಷ್ಟೊಂದು ಮುಂದುವರಿದಿದ್ರೂ ಮೂಢ ನಂಬಿಕೆಯನ್ನು ಸಮೂಹ ಮಾಧ್ಯಮ ಎಷ್ಟೊಂದು ಕೆಟ್ಟದಾಗಿ ಅಂಗೀಕರಿಸುತ್ತಿದೆ ಮತ್ತು ಪ್ರಚಾರ ಮಾಡು ತ್ತದೆ ಎಂಬುದನ್ನು ಸಂಪಾದಕೀಯ ಎತ್ತಿ ತೋರಿಸಿದೆ.

**ಹಮೀದ್ ಎ.ಎಸ್. ಭಟ್ಕಳ**

### ಅರ್ಥ ಪೂರ್ಣ

ಸಂಚಿಕೆ 17ರ ಮುಖಪುಟ ‘5 ಕೋಟಿ ಕನ್ನಡಿಗರಿಗೆ ಬಾಗದೆ ಅಡ್ವಾಣಿಗೆ ಬಾಗಿದರೂ’ ಲೇಖನ ಅರ್ಥಪೂರ್ಣವಾಗಿತ್ತು. ಮಾನ್ಯ ಲೋಕಾ ಯುಕ್ತರು ಆರ್.ಎಸ್.ಎಸ್. ಕಾರ್ಯಕರ್ತರಾಗಿ ದ್ದರೂ ಬಿ.ಜೆ.ಪಿ.ಗೆ ತಲೆಬಾಗದೆ ನಿಷ್ಠೆಯಿಂದ ತನ್ನ ಕೆಲಸವನ್ನು ನಿರ್ವಹಿಸಿದ್ದಾರೆ. ಸಂಪಾದಕೀಯ ‘ಬದಲಾಗಬೇಕಾದ್ದು ಧರ್ಮಗ್ರಂಥ ಅಲ್ಲ ಭೈರಪ್ಪ’ ಖಂಡಿತವಾಗಿಯೂ ಸರಿಯಾದದ್ದು.

**ಮುಹಮ್ಮದ್ ಇಲ್ಯಾಸ್ ಜೋಗ್‌ಫಾಲ್ಸ್**

# ಐಸ್‌ಕ್ರೀಮ್ ಮೆಲ್ಲುತ್ತಾ ದುರಂತ ಸುದ್ದಿಯನ್ನು ವೀಕ್ಷಿಸುವಾಗ...

ಎ.ಕೆ. ಕುಕ್ಕಿಲ

(ಮುಖಪುಟದಿಂದ)

ಆಹಾರದಲ್ಲಿನ ವೈವಿಧ್ಯತೆಗಳೇ..."

ಒಂದಕ್ಕಿಂತ ಹೆಚ್ಚು ಟಿ.ವಿ. ಚಾನೆಲ್‌ಗಳು ಯಾಕೆ ಅಗತ್ಯ ಎಂಬೊಂದು ಪ್ರಶ್ನೆಯನ್ನು ಮುಂದಿಟ್ಟುಕೊಂಡು ಇಂಟರ್‌ನೆಟ್ ತೆರೆದರೆ, ಇಂಥದ್ದೊಂದು ಸಮರ್ಥನೆ ಸಿಕ್ಕೇ ಸಿಗುತ್ತದೆ. ಇಷ್ಟಕ್ಕೂ ಆಹಾರಕ್ಕೂ ಟೀವಿ ಚಾನೆಲ್‌ಗೂ ಏನು ಸಂಬಂಧ, ಆಹಾರ ಸೇವಿಸದಿದ್ದರೆ ಸಾಯುವಂತೆ ಟೀವಿ ವೀಕ್ಷಿಸದಿದ್ದರೂ ಸಾಯಬಹುದಾ ಎಂದೆಲ್ಲಾ ಪ್ರಶ್ನಿಸಬೇಡಿ. ಅದು ಮೂಲಭೂತವಾದ ಎನ್ನಿಸಿಕೊಳ್ಳುತ್ತದೆ. 1970-80ರ ಮಧ್ಯೆ ಈ ದೇಶದಲ್ಲಿದ್ದದ್ದು ಒಂದೇ ಚಾನೆಲ್ - ದೂರದರ್ಶನ. ದಿನದಲ್ಲಿ ಕೆಲವೇ ಗಂಟೆಗಳ ಕಾಲ ಕಪ್ಪು-ಬಿಳುಪಿನಲ್ಲಿ ಬಂದು ಹೋಗುತ್ತಿದ್ದ ದೂರದರ್ಶನವನ್ನು ವೀಕ್ಷಿಸುವುದಕ್ಕೆ ನಿಶ್ಚಿತ ಸಮಯವಿತ್ತು. ಜನ ಆ ಸಮಯಕ್ಕಾಗಿಯೇ ಟಿವಿ ಸ್ವಿಚ್ ಆನ್ ಮಾಡಿ ಕಾಯುತ್ತಿದ್ದರು. ಒಂದೋ ಎರಡೋ ಸೀರಿಯಲ್‌ಗಳನ್ನು ಬಿಟ್ಟರೆ ಉಳಿದಂತೆ ಅದೇ ಬೋರು ಬೋರು ವಾರ್ತೆ. ಕಪ್ಪು-ಬಿಳುಪು ದೃಶ್ಯ. ಅಂದಿಗಿಂತ ಇಂದಿನವರೇ ಅದೃಷ್ಟವಂತರು ಎಂದೆಲ್ಲಾ ಈ ವಾದ ಸಾಗುತ್ತದೆ.

### ಇರಬಹುದು

ಆದರೆ ಇವತ್ತಿನ ನೂರಾರು ಚಾನೆಲ್‌ಗಳು ಮತ್ತು ಅದರಲ್ಲಿನ ಕಾರ್ಯಕ್ರಮಗಳು ಎಷ್ಟು ಪ್ರಮಾಣದಲ್ಲಿ ನಾಗರಿಕ ಭಾವನೆಗಳಿಗೆ ಸ್ಪಂದಿಸುತ್ತಿವೆ? 24x7 ನ್ಯೂಸ್ ಚಾನೆಲ್‌ಗಳು ಸುದ್ದಿಗೆ ಎಷ್ಟಂಶ ನ್ಯಾಯ ಕೊಡುತ್ತಿವೆ? ಎಷ್ಟೇ ಗಂಭೀರ ಬ್ರೇಕಿಂಗ್ ನ್ಯೂಸ್‌ಗಳೂ ಎರಡ್ಮೂರು ದಿನಗಳಿಗಿಂತ ಹೆಚ್ಚು ಟೀವಿ ಪರದೆಯಲ್ಲಿ ಕಾಣಿಸಿಕೊಳ್ಳುತ್ತದಾ? ಒಂದು ದಿನ ಒಂದು ಸುದ್ದಿಯನ್ನು ಬ್ರೇಕಿಂಗ್ ಮಾಡಿ, ಮರುದಿನ ಇನ್ನೊಂದು ಸುದ್ದಿಯನ್ನು ಬ್ರೇಕಿಂಗ್ ಮಾಡುವುದರ ಮಧ್ಯೆ ಮೊದಲ ದಿನದ ಬ್ರೇಕಿಂಗ್ ಸುದ್ದಿಗೆ ನ್ಯಾಯ ಒದಗಿಸಲು, ಸರಕಾರ ಸ್ಪಂದಿಸುವಂತೆ ಮಾಡಲು ಚಾನೆಲ್‌ಗಳು ಬೆನ್ನಟ್ಟುವಿಕೆ (follow up) ಮಾಡುವುದಿದೆಯಾ? ಕೇವಲ ಸುದ್ದಿಯನ್ನು ರಂಜನೀಯವಾಗಿ ಬಿತ್ತರಿಸುವುದು ಮಾತ್ರ ನ್ಯೂಸ್ ಚಾನೆಲ್‌ಗಳ ಹೊಣೆಗಾರಿಕೆಯೇ? ನ್ಯಾಯ ಸಿಗುವವರೆಗೆ, ಸಮಸ್ಯೆ ಪರಿಹಾರವಾಗುವ ವರೆಗೆ ಬ್ರೇಕಿಂಗ್ ನ್ಯೂಸನ್ನು ಜೀವಂತವಾಗಿಟ್ಟುಕೊಂಡು, ನಾಗರಿಕರನ್ನು ಪದೇ ಪದೇ ನೆನಪಿಸುತ್ತಾ, ವ್ಯವಸ್ಥೆಯ ಕಿವಿ ಹಿಂಡುತ್ತಾ ಪರಿಹಾರ ಒದಗಿಸಿ ಕೊಡುವುದಕ್ಕೆ ಚಾನೆಲ್‌ಗಳೇಕೆ ಪ್ರಯತ್ನಿಸುವುದಿಲ್ಲ?

### ಸುಮ್ಮನೆ ಒಮ್ಮೆ ಮೆಲುಕು ಹಾಕಿ

ಕಳೆದ ಒಂದು ವರ್ಷದೊಳಗೆ ಟೀವಿಯಲ್ಲಿ ನೀವು ನೋಡಿರುವ ಬ್ರೇಕಿಂಗ್ ನ್ಯೂಸ್‌ಗಳಾದರೂ ಎಷ್ಟು? ಚರ್ಚೆಗಳೆಷ್ಟು? ಶಶಿ ತರೂರ್-ಸುನಂದಾ ಪುಷ್ಕರ್ ಪ್ರಕರಣ ಕೆಲವೇ ತಿಂಗಳುಗಳ ಹಿಂದೆ ನಡೆದಿದೆ ಎಂಬುದನ್ನು ನಂಬುವುದಕ್ಕೆ ಸಾಧ್ಯವೇ? ಎಷ್ಟು ಮಂದಿಗೆ ಆ ಪ್ರಕರಣ ನೆನಪಿದೆ? ಶಾರುಖ್ ಖಾನ್- ಶಿವಸೇನೆ ನಡುವೆ ಮೈ ನೇಮ್ ಈಸ್ ಖಾನ್‌ಗೆ ಸಂಬಂಧಿಸಿ ಎದ್ದ ವಿವಾದ; ಆರೋಪ-ಪ್ರತ್ಯಾರೋಪಗಳು ನೆನಪಿನಲ್ಲಿವೆಯಾ? ಅಮಿತಾಬ್ ಬಚ್ಚನ್- ನರೇಂದ್ರ ಮೋದಿ, ಸಾನಿಯಾ-ಶೋಯೆಬ್ ವಿವಾಹ, ಲಲಿತ್ ಮೋದಿ-ಐಪಿಎಲ್ ಎಲ್ಲವೂ ಎಂದೋ ನಡೆದ ಪ್ರಕರಣಗಳಂತೆ ಕಾಣುತ್ತಿಲ್ಲವೇ? ಬಿಡಿ, ಸೆಲೆಬ್ರಿಟಿಗಳನ್ನು, ಅಪ್ಪಟ ಖಾಸಗಿ ಸಂಗತಿಗಳನ್ನೇ ಮಾಧ್ಯಮದ ಮುಂದೆ ಹೇಳಿ ಪ್ರಚಾರ ಗಿಟ್ಟಿಸಿಕೊಳ್ಳುವವರನ್ನು ಪಕ್ಕಕ್ಕಿಡೋಣ. 24x7 ಸುದ್ದಿ ಚಾನೆಲ್‌ಗಳು ವೀಕ್ಷಕರ ಮುಂದೆ ಕಾಪ್ ಪಂಚಾಯತು, ಕಸಬ್‌ಗೆ ಗಲ್ಲು, ಮರ್ಯಾದಾ ಹತ್ಯೆ, ಲಿಬರ್ಹಾನ್ ಆಯೋಗದ ವರದಿ, ಜಾತಿ ಜನಗಣತಿ ಮುಂತಾದುವುಗಳ ಬಗ್ಗೆ ಎಂತೆಂಥ ಚರ್ಚೆ ನಡೆಸಿಲ್ಲ? ಎಲ್ಲೆಲ್ಲಿಂದಲೋ ಪರಿಣತರನ್ನು ತಂದು, ಗಂಟೆಗಟ್ಟಲೆ ಮಾತಾಡಿಸಿಲ್ಲವೇ? ಕಾಪ್ ಪಂಚಾಯತ್‌ನ ಸಭೆಯನ್ನು ಲೈವ್ ಆಗಿ ತೋರಿಸಿಲ್ಲವೇ? ರಾಥೋಡ್ ಲೈಂಗಿಕ ಹಗರಣ, ಬಿ.ಟಿ. ಬದನೆ, ತೆಲಂಗಾಣ, ನಕ್ಸಲೀಯ ಪ್ರಕರಣ... ಎಲ್ಲಿ ಹೋದವು ಇವೆಲ್ಲ? ಈ ಎಲ್ಲ ಚರ್ಚೆಗಳ ಬಳಿಕ ಈ ಪ್ರಕರಣಗಳ ಗತಿ ಏನಾದುವು? ಎಷ್ಟು ಮಂದಿಗೆ ಕನಿಷ್ಠ ಈ ಪ್ರಕರಣ-ವಿವಾದಗಳು ನೆನಪಿವೆ?



ನಿಜವಾಗಿ ಚಾನೆಲ್‌ಗಳ ಹೆಚ್ಚಳದಿಂದ ಸುದ್ದಿಗಳಿಗೇನೋ ಮಹತ್ವ ಸಿಕ್ಕತೊಡಗಿದುವು. ಸಣ್ಣ ಪ್ರಕರಣವೂ ವ್ಯವಸ್ಥೆಯ ಗಮನ ಸೆಳೆಯುವಷ್ಟು ಪ್ರಾಬಲ್ಯ ಪಡೆದುವು. ಆದರೆ ಇದರಿಂದ ಸೃಷ್ಟಿಯಾದ ಪೈಪೋಟಿಯು ಅಂತಿಮವಾಗಿ ಸುದ್ದಿಯನ್ನು ಮನರಂಜನೆಯಂತೆ, ಜಂಕ್ ಫುಡ್‌ನಂತೆಯೂ ಮಾಡಿಬಿಟ್ಟವು. ಒಂದೇ ಸುದ್ದಿಯನ್ನು- ಅದು ಎಷ್ಟೇ ಗಂಭೀರವಾದದ್ದಾದರೂ- ಹೆಚ್ಚು ಹೊತ್ತು ಮೆಲ್ಲುತ್ತಾ ಇರುವುದು ವೀಕ್ಷಕರಿಗೆ ಬೋರ್ ಹೊಡೆಸೀತು ಎಂಬಂತೆ ಚಾನೆಲ್‌ಗಳು ಹೊಸ ಸುದ್ದಿಯತ್ತ ನೆಗೆಯತೊಡಗಿತು. ಈ ಹಿಂದಿನ ಸುದ್ದಿ ಮತ್ತು ಅದನ್ನು ಮುಂದಿಟ್ಟುಕೊಂಡು ನಡೆಸಿದ ಚರ್ಚೆ, ಎತ್ತಿದ ಪ್ರಶ್ನೆಗಳೆಲ್ಲಾ ಹೊಸ ಸುದ್ದಿಯೊಂದಿಗೆ ಸಮಾಧಿಯಾದುವು. ಟಿ-20 ಕ್ರಿಕೆಟ್‌ನಂತೆ ಸುದ್ದಿಗಳನ್ನೂ ಪರಿಗಣಿಸುವ, ತರಾತುರಿಯಲ್ಲಿ ಮುಗಿಸಿ ಇನ್ನೊಂದಕ್ಕೆ ಜಿಗಿಯುವ ಪತ್ರಿಕೋದ್ಯಮ ಸೃಷ್ಟಿಯಾದದ್ದೇ ಚಾನೆಲ್‌ಗಳ ಹೆಚ್ಚಳದಿಂದಾಗಿ. ಇಷ್ಟಕ್ಕೂ ಯುರೋಪಿಯನ್ ರಾಷ್ಟ್ರಗಳಲ್ಲಿ Attention Deficit Hyperactivity Disorder (ADHD) ಎಂಬ ಕಾಯಿಲೆ ವ್ಯಾಪಕವಾಗಿ ಕಾಣಿಸಿಕೊಳ್ಳತೊಡಗಿವೆ. ಎಲ್ಲದರಲ್ಲೂ ನಿರಾಸಕ್ತಿ ತೋರುವ, ಕುತೂಹಲ ಉಳಿಸಿಕೊಳ್ಳಲಾಗದ ಈ ಕಾಯಿಲೆ ಮಕ್ಕಳು ಮತ್ತು ಯುವಜನತೆಯ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಅಂದ ಹಾಗೆ ಇವತ್ತು ಮಕ್ಕಳು ಹುಟ್ಟುವುದೇ ಟೀವಿಯನ್ನು ನೋಡಿಕೊಂಡೇ ಅಲ್ಲವೇ? ರಿಮೋಟ್ ಒತ್ತಿದಂತೆಲ್ಲಾ ಪ್ರತ್ಯಕ್ಷವಾಗುವ ಬಗೆ ಬಗೆಯ ಚಾನೆಲ್‌ಗಳು ಅಂತಿಮವಾಗಿ ವೀಕ್ಷಕರ ಕುತೂಹಲವನ್ನು, ಆಸಕ್ತಿಯನ್ನು ಕಸಿದುಕೊಂಡು ನಿಧಾನವಾಗಿ ಅವರನ್ನು ಬರೇ ಟೀವಿ ದಾಸರಾಗಿಸುತ್ತವೆ (Adict) ಎನ್ನುವುದೇನು ಸುಳ್ಳೇ? ತಿಂಗಳುಗಳ ಹಿಂದೆ ನಡೆದ ಹಾಲಪ್ಪ ಪ್ರಕರಣ, ನೆರೆ ಹಗರಣವನ್ನೇ ಎತ್ತಿಕೊಳ್ಳಿ. ವರ್ಷವಷ್ಟೇ ಸಂದಿರುವ ರೇಣುಕಾಚಾರ್ಯ ರಾಸಲೀಲೆ, ರೆಸಾರ್ಟ್ ರಾಜಕೀಯವನ್ನೇ ತೆಗೆದುಕೊಳ್ಳಿ. ಆ ಸಂದರ್ಭದ ಚರ್ಚೆ, ಭರವಸೆ-ಹೇಳಿಕೆಗಳೆಲ್ಲ ನಮ್ಮಲ್ಲಿ ಎಷ್ಟು ಮಂದಿಗೆ ನೆನಪಿದೆ? ಬರಬರುತ್ತಾ ನಮ್ಮ ನೆನಪಿನ ಶಕ್ತಿ ಕಳೆಗುಂದುತ್ತಾ ಹೋಗುತ್ತಿರುವುದು ಅಥವಾ ಎಷ್ಟೇ ಗಂಭೀರ ಪ್ರಕರಣವೂ ಆಸಕ್ತಿ ಹುಟ್ಟಿಸದೇ ಹೋಗುವುದು ಸತ್ಯವಲ್ಲವೇ? ವಿಮಾನ ದುರಂತದಂಥ ಕರುಳು ಮಿಡಿಯುವ ಸುದ್ದಿಯನ್ನೂ ಆರಾಮ ಕೋಣೆಯಲ್ಲಿ ಐಸ್‌ಕ್ರೀಮ್ ಮೆಲ್ಲುತ್ತಲೋ ಚಹಾ ಸೇವಿಸುತ್ತಲೋ ಕೂತು ನೋಡುವಷ್ಟು ನಿರ್ವಿಕಾರ ಭಾವವನ್ನು ನಮ್ಮಲ್ಲಿ ಸೃಷ್ಟಿಸಿದ್ದಾದರೂ ಯಾರು? ದುರಂತವನ್ನೂ ಒಂದು ಮಾಮೂಲಿ ಸುದ್ದಿಯಾಗಿ ವೀಕ್ಷಿಸುವುದಕ್ಕೆ ನಾವು ಸಜ್ಜುಗೊಂಡದ್ದು ಹೇಗೆ? ಏಕೆ? ಚಾನೆಲ್ಲುಗಳು ಸುದ್ದಿಗೂ ಮನರಂಜನೆಯ ಇಮೇಜನ್ನು ತಂದು ಕೊಟ್ಟಿದ್ದರಿಂದಲೇ ಅಲ್ಲವೇ? ಇಷ್ಟಕ್ಕೂ ಸಾವಿನ ಮನೆಯ ಸುದ್ದಿಯ ಮಧ್ಯೆಯೇ ಬರುವ ಜಾಹೀರಾತುಗಳಾದರೂ ಹೇಗಿರುತ್ತವೆ? ಜಂಕ್‌ಫುಡ್ ಮೆಲ್ಲುತ್ತಲೋ ಚಾಕ್‌ಲೇಟ್ ಚೀಪುತ್ತಲೋ ಬರುವ ರೂಪದರ್ಶಿ, ದುರಂತದ ಭಾವುಕತೆಯನ್ನು ವೀಕ್ಷಕರಲ್ಲಿ ಜೀವಂತವಾಗಿ ಉಳಿಸಬಲ್ಲಳೇ?

ಕೇವಲ ಸುದ್ದಿ ಮುಟ್ಟಿಸುವುದೊಂದೇ ಸುದ್ದಿ ಮಾಧ್ಯಮಗಳ ಹೊಣೆಗಾರಿಕೆ ಖಂಡಿತ ಅಲ್ಲ. ಓರ್ವ ಆಟಗಾರನ ಜವಾಬ್ದಾರಿ ಚೆನ್ನಾಗಿ ಆಡುವುದಷ್ಟೇ ಅಲ್ಲ, ತಂಡವನ್ನು ಗುರಿಮುಟ್ಟಿಸುವುದು ಕೂಡಾ ಆಗಿರುತ್ತದಲ್ಲವೇ? ಹೀಗಿರುವಾಗ ಮಾಧ್ಯಮಗಳು ಸುದ್ದಿಯ follow up ಮಾಡದೇ ತಪ್ಪಿಸಿಕೊಳ್ಳುವುದನ್ನು ಯಾಕೆ ಕ್ಷಮಿಸಬೇಕು? ಇಷ್ಟಕ್ಕೂ ಪಾರ್ಲಿಮೆಂಟ್ ಚುನಾವಣೆಯ ಸಂದರ್ಭದಲ್ಲಿ ಈ ದೇಶದ ನ್ಯೂಸ್ ಚಾನೆಲ್‌ಗಳು ಮಾಡಿರುವ ಚರ್ಚೆಗಳನ್ನು ನೆನಪಿಸಿಕೊಳ್ಳಿ. ಭಾರತಕ್ಕೊಬ್ಬ ಒಬಾಮ ಬೇಕು ಎಂದು ಅವು ಹೇಳಿಲ್ಲವೇ? ಯುರೋಪಿನ ಮಾಧ್ಯಮಗಳು ಒಬಾಮಾ ಮೇನಿಯವರನ್ನು ಹಂಚುತ್ತಿದ್ದಾಗ ನಮ್ಮ ಚಾನೆಲ್‌ಗಳೂ ಅದನ್ನು ಖರೀದಿಸಿ ವೀಕ್ಷಕರ ಮುಂದಿಟ್ಟವು. ಭಾರತದ ಎಲ್ಲ ಸಮಸ್ಯೆಗಳಿಗೆ ಒಬಾಮರಂಥ ವ್ಯಕ್ತಿತ್ವದ ಕೊರತೆಯೇ ಕಾರಣ ಎಂದು ಅವು ಷರಾ ಬರೆದುವು. ಇಷ್ಟಕ್ಕೂ ಅಮೇರಿಕದಲ್ಲಿರುವ ಎರಡೇ ಪಕ್ಷಗಳ ರಾಜಕೀಯ ವ್ಯವಸ್ಥೆ; ಆರ್ಥಿಕ, ಸಾಮಾಜಿಕ ಸ್ಥಿತಿಗತಿಯನ್ನು ಈ ಚರ್ಚೆಯಲ್ಲಿ ಅವು ಪರಿಗಣಿಸಲೇ ಇಲ್ಲ. ಈ ಮಧ್ಯೆ ಪಿ. ಸಾಯಿನಾಥ್‌ರಂಥ ಪತ್ರಕರ್ತ ವಿದರ್ಭದ್ದೋ ಆಂಧ್ರದ್ದೋ ಗ್ರಾಮಗಳ ರೈತರ ಸಮಸ್ಯೆಗಳ ಬಗ್ಗೆ ಬರೆಯುತ್ತಾ- ಚರ್ಚಿಸುತ್ತಾ ಇದ್ದದ್ದು ಚರ್ಚೆಗೆ ಒಳಪಡಲೇ ಇಲ್ಲ. ಅಂತಿಮವಾಗಿ ಯುಪಿಎ ಅಧಿಕಾರಕ್ಕೇರಿದ ಬಳಿಕ, ಒಬಾಮ ಮತ್ತು ಅವರ ಸುತ್ತ ಹುಟ್ಟು ಹಾಕಿದ್ದ ಚರ್ಚೆ ಹಠಾತ್ ನಾಪತ್ತೆಯಾಯಿತು. ಯಾಕೆಂದರೆ ನಿಜವಾಗಿ ಅಂಥದ್ದೊಂದು ಚರ್ಚೆ ಇಲ್ಲಿನ ಅಗತ್ಯವೇ ಆಗಿರಲಿಲ್ಲ. ಯುರೋಪಿಯನ್ ಮಾಧ್ಯಮದಿಂದ ಪ್ರಭಾವಿತಗೊಂಡು, ಮಾಧ್ಯಮ ಚರ್ಚೆಯನ್ನು ಹೆಚ್ಚು ಆಸಕ್ತಿದಾಯಕವಾಗಿ ಮಾಡಲು ಕೃತಕವಾಗಿ ಇದನ್ನು ಹುಟ್ಟುಹಾಕಲಾಗಿತ್ತು. ಅಂದಹಾಗೆ ಒಬಾಮಕ್ಕಿಂತ ಬಿ.ಟಿ. ಬದನೆ ಯನ್ನು ದೂರುವ, ಟೊಮೆಟೋವನ್ನು ರಸ್ತೆಗೆಸೆದು ಪ್ರತಿಭಟಿಸುವ ರೈತ ಬ್ರೇಕಿಂಗ್ ನ್ಯೂಸ್‌ಗೆ, ಚರ್ಚೆಗೆ ಯಾಕೆ ಸೂಕ್ತವಾಗಿ ಕಾಣಿಸಲಿಲ್ಲ? ಇಂಥ ಪ್ರತಿಭಟನೆ ಇಲ್ಲಿ ಮಾಮೂಲು ಆಗಿರುವಾಗ ಅದನ್ನು ಮುಂದುಮಾಡಿ ಚರ್ಚಿಸುವುದಾದರೂ ಏನನ್ನು ಎಂಬ ಕಾರಣ ಇರಬಹುದೇ?

ಆಹಾರದಲ್ಲಿನ ಅಪರಿಮಿತ ವೈವಿಧ್ಯತೆಯು ಕೆಲವೊಮ್ಮೆ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರುವುದಿದೆ. ಸಾವಿಗೂ ಕಾರಣವಾಗುವುದಿದೆ. ಚಾನೆಲ್‌ಗಳ ಹೆಚ್ಚಳದಿಂದಲೂ ಈ ಅಪಾಯವಿದೆ. ಸುದ್ದಿ ಚಾನೆಲ್‌ಗಳ ನಡುವೆ ಇರುವ ಪೈಪೋಟಿ, 'ತಾನೇ ಮೊದಲು' ಎಂಬ ಧಾವಂತ ವೀಕ್ಷಕರ ಮೇಲೆ ಅಡ್ಡ ಪರಿಣಾಮ ಬೀರುತ್ತಿದೆ. ಪ್ರತಿ ಸುದ್ದಿಯನ್ನೂ ಧಾರಾವಾಹಿಯಂತೆ, ನಿರಾಸಕ್ತಿಯಿಂದ ವೀಕ್ಷಿಸುವ, ಅಸಡ್ಡೆ ತೋರುವ ವಾತಾವರಣವನ್ನು ಚಾನೆಲ್‌ಗಳು ಸೃಷ್ಟಿಸಿ ಬಿಟ್ಟಿವೆ. ಕನಿಷ್ಠ ಸುದ್ದಿಯನ್ನು ಬೆನ್ನಟ್ಟುವ (Follow up) ಯಾವ ಹೊಣೆಗಾರಿಕೆಯನ್ನೂ ಸುದ್ದಿ ಮಾಧ್ಯಮಗಳು ವಹಿಸಿಕೊಳ್ಳುತ್ತಲೇ ಇಲ್ಲ. ಆದ್ದರಿಂದಲೇ ಚಾನೆಲ್‌ಗಳ ಹೆಚ್ಚಳದಿಂದ ಆಗಿರುವುದು ಲಾಭವೋ ನಷ್ಟವೋ ಎಂಬ ಚರ್ಚೆಯಲ್ಲಿ ಇವತ್ತು ಚಾನೆಲ್‌ಗಳೇ ಸೋಲುತ್ತಿರುವಂತೆ ಕಾಣಿಸುತ್ತಿದೆ.

**ಏನನ್ನುತ್ತೀರಿ?**

akkukkila@gmail.com


**ಸನ್ಮಾರ್ಗ ಚಂದಾ ದರ**

| | | |
|---|---|---|
| ವಾರ್ಷಿಕ | ರೂ. | 390.00 |
| ಅರ್ಧವಾರ್ಷಿಕ | ರೂ. | 195.00 |

**ಗಲ್ಫ್ ರಾಷ್ಟ್ರಗಳಲ್ಲಿ**

| | | |
|---|---|---|
| ವಾರ್ಷಿಕ | ರೂ. | 1,200.00 |
| ಅರ್ಧವಾರ್ಷಿಕ | ರೂ. | 650.00 |





# ಇದು ಯಾವ ಬಗೆಯ ಸಹಿಷ್ಣುತೆ?

**ವಿದೇಶರಂಗ**

**ಪಿ. ಕೆ. ನಿಯಾಝ್**

(ಮುಖಪುಟದಿಂದ)

ಈ ಎರಡು ಘಟನೆಗಳು ಪಾಶ್ಚಾತ್ಯ ಸಂಕುಚಿತ ಮನೋಭಾವದ ಹೊಸ ಸ್ಯಾಂಪಲ್‌ಗಳಾಗಿವೆ. 'ಫಝ್ಲುಲ್ಲಾ ಒಳ್ಳೆಯ ವ್ಯಕ್ತಿ. ಅವರಂಥ ಸಜ್ಜನರು ಜಗತ್ತಿಗೆ ಅಗತ್ಯವಿದ್ದಾರೆ. ಅವರು ಸ್ತ್ರೀ ಸ್ವಾತಂತ್ರ್ಯಕ್ಕಾಗಿ ವಾದಿಸಿದ ವಿದ್ವಾಂಸರಾಗಿದ್ದರು..." ಎಂದಷ್ಟೇ ಟ್ವಿಟ್ಟರ್ ಮತ್ತು ಬ್ಲಾಗ್‌ಗಳಲ್ಲಿ ನಸ್ರೀನ್ ಮತ್ತು ಫ್ರಾನ್ಸಿಸ್‌ಗಾ ಬರೆದಿದ್ದರು.

ಸಿ.ಐ.ಎ. ಬಗ್ಗೆ ಭೀತಿ ಮತ್ತು ಅಮೇರಿಕದಲ್ಲಿ ಕುಟುಂಬ ಸಮೇತ ವಾಸಿಸುತ್ತಿದ್ದುದರಿಂದ ಒಕ್ಟೇವಿಯ ನಸ್ರೀನ್ ತಪ್ಪೊಪ್ಪಿ ಕ್ಷಮೆ ಯಾಚಿಸಿದರು. ಬ್ರಿಟಿಷ್ ರಾಯಭಾರಿಯ ಬ್ಲಾಗ್, ಟೆಲ್‌ಅವೀವ್‌ನಲ್ಲಿ (ಇಸ್ರೇಲ್) ಮೊದಲು ಕೋಲಾಹಲವೆಬ್ಬಿಸಿತು. ರಾಯಭಾರಿಯನ್ನು ಹೊರಹಾಕಬೇಕೆಂದು ಡೈಲಿ ಮೈಲ್‌ನಲ್ಲಿ ಹೆಚ್ಚಿನವರು ಒತ್ತಾಯಿಸಿದ್ದರು. ತನ್ನ ಬ್ಲಾಗ್‌ನಿಂದಾಗಿ ಯಾರಿಗಾದರೂ ತೊಂದರೆಯಾಗಿದ್ದರೆ ವಿಷಾದಿಸುವುದಾಗಿ ಫ್ರಾನ್ಸಿಸ್‌ಗಾ ವಿಷಯವನ್ನು ತಣಿಸಿದರು. ಆದರೆ ಈ ಇಬ್ಬರನ್ನು ಪೀಡಿಸಿದವರ ವಿರುದ್ಧ ಧ್ವನಿಯೆತ್ತಲು ಯಾವೊಬ್ಬ ಫೆಮಿನಿಸ್ಟ್ ಕೂಡಾ ಮುಂದೆ ಬರಲಿಲ್ಲ. ಸುಡಾನ್ ಮತ್ತು ಇರಾನ್‌ನ ಸ್ತ್ರೀಯರಿಗಾಗಿ ವಾದಿಸುವ ಮಾನವ ಹಕ್ಕು ಸಂಘಟನೆಗಳೂ ಹೇಳಿಕೆ ಹೊರಡಿಸಲಿಲ್ಲ.

ಫಝ್ಲುಲ್ಲಾರ ಅಂತ್ಯಕ್ರಿಯೆಯಲ್ಲಿ ಭಾಗವಹಿಸದಂತೆ ಬ್ರಿಟನ್ ತನ್ನ ರಾಯಭಾರಿಯನ್ನು ತಡೆದಿತ್ತು. ಆದರೆ ಫಝ್ಲುಲ್ಲಾರು ಗೌರವಾರ್ಹ ವ್ಯಕ್ತಿಯೆಂದು ವಿದೇಶಾಂಗ ಖಾತೆಗೆ ಅರಿವಿದ್ದುದರಿಂದ ಸಹಕಾರ್ಯದರ್ಶಿಯನ್ನು ಕಳುಹಿಸಿತ್ತು. ಅದೇ ವೇಳೆ ಫ್ರಾನ್ಸ್ ಮತ್ತು ಇಟೆಲಿ ತಂತಮ್ಮ ರಾಯಭಾರಿಗಳನ್ನೇ ಅಂತ್ಯಸಂಸ್ಕಾರಕ್ಕೆ ಕಳುಹಿಸಿತ್ತು.



ಇರಾಕ್‌ನಲ್ಲಿ ಜನಿಸಿದ ಫಝ್ಲುಲ್ಲಾರು, ಹಿಝ್ಬುಲ್ಲಾದ ಸ್ಥಾಪನೆಯಲ್ಲಿ ಪ್ರಧಾನ ಪಾತ್ರ ವಹಿಸಿರುವರೆಂದು ಅಮೇರಿಕದ ಆರೋಪ. 1982ರಲ್ಲಿ ಇಸ್ರೇಲ್‌ನ ಲೆಬನಾನ್ ಅತಿಕ್ರಮಣವು ಹಿಝ್ಬುಲ್ಲಾದ ಹುಟ್ಟಿಗೆ ಕಾರಣವಾಗಿತ್ತು. ಲೆಬನಾನ್‌ನಿಂದ ಅತಿಕ್ರಮಣಕೋರರನ್ನು ಹೊರಹಾಕುವುದೇ ಪ್ರಧಾನ ಕರ್ತವ್ಯವೆಂದು ಹಿಝ್ಬುಲ್ಲಾ ಸಾರಿತು. ಅದನ್ನು ಅವರು ಈಡೇರಿಸಿದರು. ಇಸ್ರೇಲ್‌ನ ಎಲ್ಲಾ ಮಾನವ ವಿರೋಧಿ ಕೃತ್ಯಗಳನ್ನು ಬೆಂಬಲಿಸುವ ಅಮೇರಿಕಕ್ಕೆ, ಫಝ್ಲುಲ್ಲಾ ಭಯೋತ್ಪಾದಕನಾಗಿರುವುದರಲ್ಲಿ ಅಚ್ಚರಿಯಿಲ್ಲ. ಲೆಬನಾನ್‌ನಲ್ಲಿ ಅಮೇರಿಕನ್ ಸೇನೆಯ ವಿರುದ್ಧ ನಡೆದ ಆತ್ಮಾಹುತಿ ಸ್ಫೋಟಗಳಲ್ಲಿ ಫಝ್ಲುಲ್ಲಾರ ಪಾತ್ರವಿದೆಯೆಂದು ಆರೋಪಿಸಿ ಅವರನ್ನು ಸಿ.ಐ.ಎ. 2 ಬಾರಿ ವಧಿಸಲು ಪ್ರಯತ್ನಿಸಿತ್ತು. 2006ರ ಯುದ್ಧದಲ್ಲಿ ಇಸ್ರೇಲಿ ಯುದ್ಧ ವಿಮಾನಗಳು ಫಝ್ಲುಲ್ಲಾರ ಮನೆಯನ್ನು ಧ್ವಂಸಗೊಳಿಸಿದರೂ ಅವರು ಹೊರಗಿದ್ದುದರಿಂದ ಪಾರಾದರು. ಹಿಝ್ಬುಲ್ಲಾದೊಂದಿಗೆ ಸಂಬಂಧವಿದ್ದರೂ ಸಂಘಟನೆಯ ದೈನಂದಿನ ಚಟುವಟಿಕೆಗಳಲ್ಲಿ ಅವರು ಭಾಗವಹಿಸುತ್ತಿರಲಿಲ್ಲ. ಅಮೇರಿಕದ ವಿದೇಶ ನೀತಿಗಳನ್ನು ಉಗ್ರವಾಗಿ ಖಂಡಿಸಿದಂತೆಯೇ ಸೆಪ್ಟೆಂಬರ್ 11ರ ಘಟನೆಯ ಖಂಡನೆಯಲ್ಲಿಯೂ ಅವರು ಮುಂಚೂಣಿಯಲ್ಲಿದ್ದರು.

ಪಾಶ್ಚಾತ್ಯರ ಅಸಹಿಷ್ಣುತೆಯು ಕಳೆದ ವರ್ಷ ನೆದರ್‌ಲ್ಯಾಂಡ್‌ನಲ್ಲಿ ಪ್ರಕಟವಾಗಿತ್ತು. ಪ್ರಸಿದ್ಧ ಐರೋಪ್ಯ ಮುಸ್ಲಿಮ್ ಬುದ್ಧಿಜೀವಿ ಮತ್ತು ಸ್ವಿಸ್ ಪೌರರಾದ ತಾರಿಕ್ ರಮಝಾನ್‌ರನ್ನು ಡಚ್ ನಗರವಾದ ರಾಟರ್‌ಡಾಮ್‌ನ ಸಮನ್ವಯ ಸಮಿತಿಯ ಸಲಹೆಗಾರ ಮತ್ತು ಇರಾಸ್ಮಸ್ ವಿಶ್ವವಿದ್ಯಾಲಯದ ಅತಿಥಿ ಪ್ರೊಫೆಸರ್ ಹುದ್ದೆಯಿಂದ ಒಮ್ಮೆ ಉಚ್ಛಾಟಿಸಲಾಯಿತು. ಅವರು ಇರಾನ್ ಸರಕಾರದ ಆಶ್ರಯದಲ್ಲಿರುವ ಪ್ರೆಸ್ ಟಿ.ವಿ. ಎಂಬ ಇಂಗ್ಲಿಷ್ ಚಾನೆಲ್‌ನಲ್ಲಿ ನಿರೂಪಕನಾಗಿ ಪ್ರತ್ಯಕ್ಷವಾದುದೇ ಅದಕ್ಕೆ ಕಾರಣವಾಗಿತ್ತು. ವಸ್ತುತಃ ರಮಝಾನ್‌ರನ್ನು ಪಾಶ್ಚಾತ್ಯರು 'ಮಿತವಾದಿ ಇಸ್ಲಾಮಿಸ್ಟ್' ಎಂದು ಕರೆಯುತ್ತಿದ್ದರು. ಬ್ರಿಟನ್‌ನ 'ಪ್ರಾಸ್ಪೆಕ್ಟ್' ಮತ್ತು ಅಮೇರಿಕದ 'ಫಾರಿನ್ ಪಾಲಿಸಿ' ಮಾಸಪತ್ರಿಕೆಗಳು ತಾರಿಕ್ ರಮಝಾನ್‌ರನ್ನು 2008ರಲ್ಲಿ ಜಗತ್ತಿನ 100 ಬುದ್ಧಿಜೀವಿಗಳಲ್ಲಿ ಓರ್ವರೆಂದು ಆಯ್ಕೆ ಮಾಡಿತ್ತು. ಜಿನೇವಾದಲ್ಲಿ ಜನಿಸಿದ ತಾರಿಕ್ ರಮಝಾನ್‌ರು ಈಜಿಪ್ಟ್‌ನ ಮರ್ದಕ ಸರಕಾರದ ವಿರುದ್ಧ ಹೋರಾಡಿದ ಕ್ರಾಂತಿಕಾರಿ ಮತ್ತು ಮುಸ್ಲಿಮ್ ಬ್ರದರ್‌ಹುಡ್‌ನ ಸ್ಥಾಪಕರಾದ ಹಸನುಲ್ ಬನ್ನಾರ ಮೊಮ್ಮಗನಾಗಿದ್ದರೂ ಐರೋಪ್ಯ ಚಿಂತಕರೆಂದೇ ಗುರುತಿಸಲ್ಪಡುತ್ತಾರೆ.

**ಬಿ.ಬಿ.ಸಿ.ಯ ಪರಂಪರೆ**

ಅಸಹಿಷ್ಣುತೆಯ ಉಜ್ವಲ ಪರಂಪರೆಯು ಕೇವಲ ಸಿ.ಎನ್.ಎನ್.ಗೆ ಸೀಮಿತವಲ್ಲ. 85 ವರ್ಷಗಳಿಂದ ಜಗತ್ತಿನ ಕಿವಿ ಮತ್ತು ನಾಲಗೆಯಾಗಿ ವಿರಾಜಿಸುತ್ತಿದೆಯೆಂದು ವಾದಿಸುವ ಬಿ.ಬಿ.ಸಿ. ಕೂಡಾ ಅದರಿಂದ ಹೊರತಾಗಿಲ್ಲ. ಇಸ್ರೇಲಿನ 22 ದಿನಗಳ ಕ್ರೂರ ಆಕ್ರಮಣದಿಂದ ನಿರಾಶ್ರಿತರಾದ ಗಾಝಾ ಪಟ್ಟಿಯ ಮಕ್ಕಳೂ ಸೇರಿದಂತೆ ಸಾವಿರಾರು ಮಂದಿಗಾಗಿ ನೆರವು ಯಾಚಿಸುವ ಜಾಹೀರಾತನ್ನು ಅದು ತಿರಸ್ಕರಿಸಿತ್ತು. 13 ನೆರವು ಸಂಸ್ಥೆಗಳ ಒಕ್ಕೂಟವಾಗಿರುವ ಡಿ.ಇ.ಸಿ. (ಡಿಸಾಸ್ಟರ್ಸ್ ಎಮರ್ಜೆನ್ಸ್ ಕಮಿಟಿ) ನೀಡಿದ್ದ ಆ ಜಾಹೀರಾತನ್ನು ಪ್ರಸಾರ ಮಾಡಿದರೆ ಬಿ.ಬಿ.ಸಿ.ಯ ಪ್ರಾಮಾಣಿಕತೆ, ನಿಷ್ಪಕ್ಷಪಾತಕ್ಕೆ ಕಳಂಕ ತಟ್ಟಬಹುದೆಂದು ಅದರ ನಿರ್ವಾಹಕರು ವಾದಿಸಿದ್ದರು. ಚಾನೆಲ್‌ನ ಉದ್ಯೋಗಿಗಳು, ಮಾಜಿ ಅಧಿಕಾರಿಗಳು, ಲಕ್ಷಾಂತರ ಶ್ರೋತೃಗಳು ಮತ್ತು ಸ್ವತಃ ಚಾನೆಲನ್ನು ಪೋಷಿಸುವ ಸರಕಾರವೇ ವಿನಂತಿಸಿದರೂ ಬಿ.ಬಿ.ಸಿ. ಮಣಿಯಲಿಲ್ಲ.

ಬ್ರಿಟನ್ ಸರಕಾರದ ಅನುದಾನ ಪಡೆದು ಕಾರ್ಯಾಚರಿಸುತ್ತಿರುವ ಬಿಬಿಸಿ ಚಾನೆಲ್‌ನ ಮಾನವ ವಿರೋಧಿ ಧೋರಣೆಯೊಂದಿಗೆ ಸಹಮತವಿಲ್ಲವೆಂದು ಬಹಿರಂಗವಾಗಿ ಹೇಳಿದರೆ ಕೆಲಸ ಹೋದೀತೆಂದು ಬಿಬಿಸಿಯ ಸಂಪಾದಕರಲ್ಲೋರ್ವರು ಗಾರ್ಡಿಯನ್ ಪತ್ರಿಕೆಯಲ್ಲಿ ಅನಾಮಧೇಯವಾಗಿ ಬರೆದಿದ್ದರು. ಬ್ರಿಟನ್‌ನ ಇನ್ನೊಂದು ಪ್ರಮುಖ 'ಸ್ಕೈ ನ್ಯೂಸ್' ಚಾನೆಲ್ ಕೂಡಾ ಬಿಬಿಸಿಗಿಂತ ಕಡಿಮೆಯೇನಿಲ್ಲ. 1988ರಲ್ಲಿ ಮಾಧ್ಯಮ ದೊರೆ ರೂಪರ್ಟ್ ಮಾರ್ಡೋಕ್‌ರ ಮಾಲಕತ್ವದಲ್ಲಿ ಆರಂಭಗೊಂಡ 'ಸ್ಕೈ ನ್ಯೂಸ್' ಯಹೂದಿತ್ವದ ನಗ್ನ ಪ್ರಚಾರಕವೆಂಬುದು ಅಜ್ಞಾತ ವಿಷಯವಲ್ಲ.

ಈ ಹಿಂದೆ ಜಗತ್ತಿನ ವಿವಿಧೆಡೆಗಳಲ್ಲಿ ಸಂಭವಿಸಿದ ದುರಂತ ಪೀಡಿತರ ನೆರವಿಗಾಗಿ ಚಾರಿಟಿ ಸಂಘಟನೆಗಳ ವಿನಂತಿಯನ್ನು ಬಿಬಿಸಿ ಮತ್ತು ಸ್ಕೈ ನ್ಯೂಸ್ ಪ್ರಸಾರ ಮಾಡಿತ್ತು. ಆದರೆ 2006ರಲ್ಲಿ ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ನರಮೇಧದಲ್ಲಿ ಹತರಾದವರ ನೆರವಿಗೆ ವಿನಂತಿಸುವ ಜಾಹೀರಾತನ್ನು ಬ್ರಿಟಿಷರ ಪ್ರೀತಿಯ ಬಿಬಿಸಿ ತಿರಸ್ಕರಿಸಿತ್ತು. ಅದರಿಂದ ಹಿಝ್ಬುಲ್ಲಾವನ್ನು ಬೆಂಬಲಿಸಿದ ಆರೋಪ ಬರಬಹುದೆಂದು ಅದನ್ನು ಸಮರ್ಥಿಸಿತ್ತು. ಗಾಝಾದ ಪ್ರತಿಯೊಂದು ದೃಶ್ಯವೂ ಮಾನವ ಆತ್ಮಸಾಕ್ಷಿಯನ್ನು ದಿಗ್ಭ್ರಾಂತಗೊಳಿಸುವುದರಿಂದ ಪ್ರೇಕ್ಷಕರು ಇಸ್ರೇಲ್ ವಿರೋಧಿಗಳಾಗಬಹುದು ಮತ್ತು ಯಹೂದಿಯರು ಚಾನೆಲ್‌ನ ವಿರುದ್ಧ ಕೆರಳಬಹುದೆಂದು ನಿರ್ವಾಹಕರು ಭಾವಿಸಿದರು.

ಮಧ್ಯಪ್ರಾಚ್ಯಕ್ಕೆ ಸಂಬಂಧಿಸಿದ ಬಿಬಿಸಿಯ ವರದಿ ಮತ್ತು ವಿಶ್ಲೇಷಣೆಗಳು ಪಕ್ಷಪಾತ ಮತ್ತು ತಪ್ಪು ತಿಳುವಳಿಕೆಗಳಿಗೆ ಆಸ್ಪದವಾಗಿದೆಯೆಂದು ಚಾನೆಲ್‌ನ ಖಾಸಗಿ ವರದಿಯಲ್ಲಿ (2006) ಬೆಟ್ಟು ಮಾಡಲಾಗಿತ್ತು. ಬಿಬಿಸಿಯ ವಿಮರ್ಶೆಗಳು ಇಸ್ರೇಲ್ ಪಕ್ಷಪಾತಿಯಾಗಿವೆಯೆಂದೂ ಇಸ್ರೇಲ್‌ನ ವಾದಗಳಿಗೆ ಪ್ರಾಧಾನ್ಯ ನೀಡಲಾಗಿದೆಯೆಂದೂ ಮಧ್ಯಪ್ರಾಚ್ಯದ ಲೇಖಕ ಟಿಮ್ ಲೆವೆಲ್ಲಿನ್ 2004ರಲ್ಲಿ ಬಹಿರಂಗಪಡಿಸಿದ್ದರು. ಜಾನ್ ಪಿಲ್ಜರ್‌ರಂಥ ಸಾಮ್ರಾಜ್ಯಶಾಹಿತ್ವ ವಿರೋಧಿ ಪತ್ರಕರ್ತರು ಬಿಬಿಸಿ ಬಲಪಂಥೀಯ ಪಕ್ಷಪಾತಿಯೆಂದು ಆರೋಪಿಸಿದ್ದರು. ಹಾಗೆಯೇ ಯುದ್ಧ ವಿರೋಧಿ ಕಾರ್ಯಕರ್ತ ಮತ್ತು ರೆಸ್ಪೆಕ್ಟ್ ಪಾರ್ಟಿ ನಾಯಕ ಜಾರ್ಜ್ ಗಲೋವೆ, ಬಿಬಿಸಿಯನ್ನು ಬುಶ್ ಏಂಡ್ ಬ್ಲೇರ್ ಕಾರ್ಪೊರೇಶನ್ ಎಂದು ಹಿಂದೊಮ್ಮೆ ಗೇಲಿ ಮಾಡಿದ್ದರು. ಒಟ್ಟಿನಲ್ಲಿ, ಪಾಶ್ಚಾತ್ಯ ದೊರೆಗಳು, ಯಹೂದಿಝ್‌ಮ್‌ಗಾಗಿ ಅಭಿಪ್ರಾಯ ಸ್ವಾತಂತ್ರ್ಯವನ್ನು ಬಲಿ ನೀಡಲು ಹೇಸುವುದಿಲ್ಲವೆಂದು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

## ಟರ್ಕಿಯನ್ನು ಕೊಂಡಾಡುತ್ತಿರುವ ಗಾಝಾ ನಿವಾಸಿಗಳು

ಗಾಝಾದ ಖಾನ್ ಯೂನುಸ್ ನಗರದಲ್ಲಿ ಸ್ವಾಲಿಹ್ ಅಬೂ ಶಮಿಲ ವಾಸವಾಗಿದ್ದಾರೆ. ಟರ್ಕಿಯಿಂದ ಗಾಝಾ ಸಂತ್ರಸ್ತರ ಕೇಂದ್ರಕ್ಕೆ ನೆರವು ನೀಡಲು ಆಗಮಿಸಿದ ಹಡಗಿನ ಮೇಲೆ ಇಸ್ರೇಲಿಗಳು ದಾಳಿ ನಡೆಸಿದ ದಿವಸ ಅಬೂ ಶಮಿಲಿಯವರಿಗೆ ಒಂದು ಮಗು ಜನಿಸಿತ್ತು. ಆ ಮಗುವಿಗೆ ರಜಬ್ ಉರ್ದುಗಾನ್ ಎಂದು ಆಕೆ ನಾಮಕರಣ ಮಾಡಿದ್ದಾರೆ. ಗಾಝಾ ನಿವಾಸಿಗಳ ಹೊಸ ರಕ್ಷಕನೆಂದು ಕೊಂಡಾಡುತ್ತಿರುವ ಟರ್ಕಿಯ ಪ್ರಧಾನ ಮಂತ್ರಿಯ ಹೆಸರಾಗಿತ್ತು ಅದು. ತಮಗೆ ಹುಟ್ಟುವ ಮಕ್ಕಳಿಗೆ ರಜಬ್ ಉರ್ದುಗಾನ್‌ರ ಹೆಸರನ್ನಿಡಲು ತವಕಿಸುವ ಅನೇಕ ಜನರನ್ನು ನಾನು ಕಂಡೆ ಎಂದು ಅಲ್‌ಜುಮ್‌ಅ ವಾರ ಪತ್ರಿಕೆಯ ಗಾಝಾ ಲೇಖಕ ಮುಹಮ್ಮದ್ ಯಹ್ಯಾ ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. ಓರ್ವ ಗಾಝಾ ನಿವಾಸಿ ತನ್ನ ಮಗುವಿಗೆ ಫುರ್‌ಕಾನ್ ದುಗಾನ್ ಎಂದು ನಾಮಕರಣ ಮಾಡಿದ್ದರು. ಅದೇ ಹಡಗಿನ ಮೇಲೆ ದಾಳಿ ನಡೆದಾಗ ಹುತಾತ್ಮರಾದ ಅತ್ಯಂತ ಕಿರಿಯ ಪ್ರಾಯದ (19 ವರ್ಷ) ಯುವಕನ ಹೆಸರಾಗಿತ್ತದು.

ಹಡಗಿನ ಮೇಲೆ ನಡೆದ ಆಕ್ರಮಣದ ಬಳಿಕ ಟರ್ಕಿಯ ಧ್ವಜಗಳಿಗೆ ಗಾಝಾದಲ್ಲಿ ಭಾರೀ ಬೇಡಿಕೆ ಉಂಟಾಗಿದೆ. ಗಾಝಾದ ಬೀದಿಯಲ್ಲಿ ರಾಷ್ಟ್ರೀಯ ಬಾವುಟದ ಜೊತೆ ಟರ್ಕಿಯ ಪತಾಕೆಯೂ ರಾರಾಜಿಸುತ್ತಿದೆ. ಇಲ್ಲಿ ಸಂತ್ರಸ್ತರಿಗೆ ನೆರವಾಗುತ್ತಿರುವ ಎಲ್ಲಾ ರಾಷ್ಟ್ರಗಳ ಪತಾಕೆಗಳು ಮಾರಾಟವಾಗುತ್ತಿದ್ದರೂ ಟರ್ಕಿಯ ಪತಾಕೆ ಎಲ್ಲವನ್ನೂ ಮೀರಿಸುವಂತಿದೆ ಎಂದು ಓರ್ವ ಪತಾಕೆಗಳ ಮಾರಾಟಗಾರ ಹೇಳುತ್ತಾರೆ.

ಈ ಹುತಾತ್ಮರ ಸ್ಮರಣೆಗಾಗಿ ಗಾಝಾದಲ್ಲಿ ಸ್ಮಾರಕವನ್ನು ನಿರ್ಮಿಸಲಾಗಿದೆ. ಇದನ್ನು ಉದ್ಘಾಟಿಸುತ್ತಾ ಫೆಲೆಸ್ತೀನ್ ಪ್ರಧಾನ ಮಂತ್ರಿ ಇಸ್ಮಾಈಲ್ ಹನಿಯ್ಯರವರು, "ಫೆಲೆಸ್ತೀನಿಯರಿಗಾಗಿ ಅರ್ಪಿಸಿದ ರಕ್ತಕ್ಕಾಗಿ ಇದು ನಾವು ನೀಡುತ್ತಿರುವ ಗೌರವವಾಗಿದೆ. ಆ ಹಡಗು ಮಹತ್ತರವಾದ ಮಾನವೀಯ ಸಂದೇಶವನ್ನು ನೀಡಿದೆ. ಅವರು ಗಾಝಾವನ್ನು ನಿರ್ಭಂಧಿಸಿದ ಅತಿಕ್ರಮಣಕಾರಿಗಳ ವಿರುದ್ಧ ಉಜ್ವಲ ಸಮರ ಸಾರಿದ ಮಾನವ ಹಕ್ಕು ಕಾರ್ಯಕರ್ತರಾಗಿರುವರು" ಎಂದು ಹೇಳಿದರು. ಈ ಹೋರಾಟ ಫೆಲೆಸ್ತೀನಿ ಸಮಸ್ಯೆಗೆ ಪ್ರಮುಖ ಬದಲಾವಣೆ ತರಲಿದೆ ಎಂದೂ ಅವರು ಹೇಳಿದರು.

## ಜೆರುಸಲೇಮ್ ಫಿಲ್ಮ್ ಫೆಸ್ಟಿವಲ್‌ಗೆ ಬಹಿಷ್ಕಾರ

**ನ್ಯೂಯಾರ್ಕ್:** ಗಾಝಾ ನೆರವು ನೌಕೆಯ ಮೇಲೆ ಇಸ್ರೇಲ್ ಎಸಗಿರುವ ದಾಳಿಯನ್ನು ಖಂಡಿಸಿ ಹಾಲಿವುಡ್ ನಟ ಮೆಗ್ ರಿಯಾನ್ ಮತ್ತು ನಟಿ ಡಸ್ಟಿನ್ ಹಾಫ್‌ಮನ್‌ರು ಜೆರುಸಲೇಮ್‌ನಲ್ಲಿ ಅಯೋಜಿಸಲಾಗಿರುವ ಫಿಲ್ಮ್ ಫೆಸ್ಟಿವಲನ್ನು ಬಹಿಷ್ಕರಿಸಿದ್ದಾರೆ. ಹಾಗೆಯೇ ಮೊನಾಕೋದ ರಾಜಕುಮಾರ ಅಲ್ಬರ್ಟ್ ಕೂಡಾ ವಾರ್ಷಿಕ ಸಿನಿಮಾ ಹಬ್ಬವನ್ನು ಬಹಿಷ್ಕರಿಸಿದ್ದಾರೆ.

## ಒಬಾಮಾ-ಶಾಹ್ ಅಬ್ದುಲ್ಲಾಹ್ ಭೇಟಿ



**ವಾಷಿಂಗ್ಟನ್:** ಸೌದಿ ರಾಜ ಶಾಹ್ ಅಬ್ದುಲ್ಲಾಹ್ ಮತ್ತು ಅಮೇರಿಕನ್ ಅಧ್ಯಕ್ಷ ಬರಾಕ್ ಒಬಾಮಾರವರು ಮಧ್ಯ ಪ್ರಾಚ್ಯ ಸಮಸ್ಯೆಯ ದ್ವಿರಾಷ್ಟ್ರೀಯ ಪರಿಹಾರದ ಮಹತ್ವದ ಕುರಿತು ಚರ್ಚಿಸಿದರು. ಈರ್ವರು ನೇತಾರರೂ ವೈಟ್ ಹೌಸ್‌ನಲ್ಲಿ ಭೇಟಿಯಾಗಿದ್ದರು. ಈ ಸಂದರ್ಭದಲ್ಲಿ ಇರಾನ್, ಅಫಘಾನಿಸ್ತಾನ್, ಪಾಕಿಸ್ತಾನ್ ಮತ್ತು ಮಧ್ಯಪ್ರಾಚ್ಯದ ಕೆಲವು ಸಮಸ್ಯೆಗಳ ಕುರಿತು ಚರ್ಚಿಸಲಾಯಿತು.

ಒಂದು ವರದಿಯ ಪ್ರಕಾರ, ಒಂದು ಸ್ವತಂತ್ರ ಫೆಲಸ್ತೀನ್ ರಾಷ್ಟ್ರ ರಚನೆಯಾಗ ಬೇಕಿದ್ದು, ಅದರ ಬಗಲಲ್ಲಿಯೇ ಸುರಕ್ಷಿತ ಮತ್ತು ಸುಭಿಕ್ಷ ಇಸ್ರೇಲ್ ಇರಲಿ ಎಂಬಂತಹ ಅಭಿಪ್ರಾಯವು ಒಬಾಮರಿಂದ ಹೊರಟಿತ್ತು. ಜತೆಗೆ ಫೆಲಸ್ತೀನಿಯರು ಮತ್ತು ಇಸ್ರೇಲಿಗರ ನಡುವೆ ಆದಷ್ಟು ಬೇಗ ಶಾಂತಿ ಮಾತುಕತೆ ನಡೆಯಬೇಕಾಗಿದೆ ಎಂಬ ಅಭಿಪ್ರಾಯವು ಈರ್ವರು ನೇತಾರರಿಂದಲೂ ವ್ಯಕ್ತವಾಯಿತು. ಅರಬ್ ರಾಷ್ಟ್ರಗಳು ಈ ಸಮಸ್ಯೆಗೆ ಸಂಬಂಧಿಸಿ ಒಬಾಮಾ ಸರಕಾರದ ಧೋರಣೆಯಿಂದ ಅಸಂತೃಪ್ತವಾಗಿದೆ ಎಂಬುದು ಇಲ್ಲಿ ಉಲ್ಲೇಖನೀಯ.

# ಛಿ! ಬಡವರದ್ದು ನಾಯಿಪಾಡೆಂದು ನಿರ್ಧರಿಸಿದವರಿಗೆ...

**ಅರಫಾ ಮಂಚಿ**



**ಪಂ**ಚಾಯತ್‌ನ ಸರ್‌ಪಂಚ (ಅಧ್ಯಕ್ಷ)ನೊಬ್ಬ ರಾಷ್ಟ್ರೀಯ ರೋಝ್‌ಗಾರ್ ಯೋಜನೆಯಲ್ಲಿ ಕಾರ್ಮಿಕರನ್ನು ದುಡಿಸಿ ಅವರ ವೇತನದ ಮೂರು ಸಾವಿರ ರೂಪಾಯಿ ನೀಡುವ ಬದಲು ಮುನ್ನೂರು ರೂಪಾಯಿ ಕೊಟ್ಟು ಸಾಗಹಾಕಲು ನೋಡುತ್ತಾನೆ. ಇದನ್ನು ಪ್ರತಿಭಟಿಸಿದ ಕಾರ್ಮಿಕರಲ್ಲಿ ಇಬ್ಬರನ್ನು ತನ್ನ ರೌಡಿಗಳಿಂದ ಕೊಲ್ಲಿಸಿ ಮಿಕ್ಕವರಲ್ಲಿ ಭೀತಿ ಹುಟ್ಟಿಸುತ್ತಾನೆ. ಇದು ಮಧ್ಯ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಘಟನೆ.

ಬಡವರೆಂದರೆ ಸಾಯಬೇಕಾದವರಾ? ಹೌದು, ಬಡವರೆಂದರೆ ಸಾಯಬೇಕಾದ ಯಾವುದೋ ಒಂದು ಜೀವಿ ಎಂದು ಹಳ್ಳಿಯ ಪುಟಗೋಸಿ ರಾಜಕಾರಣಿ ಕೂಡಾ ಇಂದು ತಿಳಿದುಕೊಂಡಿದ್ದಾನೆ. ಪೊಲೀಸರು ಈ ಸರಪಂಚನನ್ನು ಬಂಧಿಸಿ ಮೊಕದ್ದಮೆ ಹೂಡಿದ್ದಾರೆಂಬುದು ಬೇರೆ ವಿಚಾರ. ಆದರೆ ಈ ದೇಶದ ಬೃಹತ್ತಾದ ಬಡವರ್ಗದ ಕುರಿತು ಇಂದಿರುವ ಮನೋಭಾವವನ್ನು ಆ ಸರಪಂಚ ಪ್ರತಿನಿಧಿಸುತ್ತಿದ್ದಾನೆ ಎಂದು ಹೇಳಬೇಕಾಗಿದೆ. ಇಲ್ಲಿ ನಾನಾ ವಿಚಾರಗಳಿಗೆ ಹೋರಾಡುವವರಿದ್ದಾರೆ. ಬಡತನವನ್ನು ತನ್ನ ಹೋರಾಟಕ್ಕೆ ಒಂದು ವಿಷಯವನ್ನಾಗಿ ಮಾಡಿಕೊಂಡವರು ಇದ್ದಾರೆಯೇ? ಇದ್ದರೂ ವಿರಳವಾಗಿದ್ದಾರೆ ಅಥವಾ ರಾಷ್ಟ್ರೀಯ ಪ್ರಮುಖ ವಾಹಿನಿಯಲ್ಲಿ ಎಲ್ಲೋ ಕಳೆದು ಹೋಗಿದ್ದಾರೆ ಎನ್ನಬೇಕಾಗುತ್ತದೆ. ಆದ್ದರಿಂದ ಬಡವರು ಸಾಯಬೇಕಾದವರು ಮತ್ತು ಬಡತನಕ್ಕಾಗಿ ಸ್ವತಃ ಸಾಯುಬೇಕಾಗಿದೆ ಎಂದು ಬಡವರೇ ತೀರ್ಮಾನಿಸುವ ಪ್ರಸಂಗ ಒದಗಿದೆ.

ಈ ದೇಶಕ್ಕೇ ಅರ್ಧದಷ್ಟಿರುವ ಒಂದು ಬೃಹತ್ ಜನರಿಗಾಗಿ ಧ್ವನಿಯೆತ್ತುವವರು ಯಾರಿದ್ದಾರೆ? ತೈಲ ದರ ಹೆಚ್ಚಿ ಆಹಾರ ವಸ್ತುಗಳೆಲ್ಲ ದುಬಾರಿಯಾದರೂ ಸಾಮಾನ್ಯವಾಗಿ ಎಲ್ಲರೂ ಕೈ ಕಟ್ಟಿ ನಿಂತಿದ್ದಾರೆಯೇ ಹೊರತು ಬಡವರನ್ನು ಉಳಿಸಿ ಎಂದು ಯಾರೂ ಹೊರಟಿಲ್ಲ. ಬಡವರೆಂಬ ಒಂದು ಬೃಹತ್ ವರ್ಗದ ಸಾಮೂಹಿಕ ತಾತ್ಸಾರವನ್ನು ಇದು ತೋರಿಸುತ್ತಿದೆ ಎಂದರೆ ತಪ್ಪಾದೀತೇ?

ನೋಡಿ, ಭಾರತ ಅರುವತ್ತು ಕೋಟಿ ಬಡವರಿರುವ ರಾಷ್ಟ್ರ ಎಂದು ಅಧಿಕೃತ ಅಂಕೆ ಸಂಖ್ಯೆಗಳೇ ವಿವರಿಸುತ್ತಿವೆ. ಇಂದು ಈ ಬೃಹತ್ತಾದ ಬಿ.ಪಿ.ಎಲ್. ಕಾರ್ಡ್‌ದಾರರನ್ನು ಕಡೆಗಣಿಸಲಾಗಿದೆ. ಸರಕಾರ ಮಾತ್ರವೇ ಕಡೆಗಣಿಸಿದೆ ಎಂದರೆ ಸಾಲದು. ಮಾನವೀಯತೆಯನ್ನು, ಹಕ್ಕುಗಳನ್ನು ಎತ್ತಿ ಹೊರಳಾಡುವವರು ಈ ವರ್ಗವನ್ನು ಕಡೆಗಣಿಸಿದ್ದಾರೆ ಎಂದರೆ ಖಂಡಿತಾ ತಪ್ಪಾಗದು. ಬಡವರ ಕುರಿತು ಇಲ್ಲಿ ನಿಜವಾದ ಕಾಳಜಿ ಇದೆಯೆಂದಾದರೆ ಇಷ್ಟರಲ್ಲೇ ತೈಲ ಬೆಲೆಯೇರಿಕೆಯ ವಿರುದ್ಧ ಬೃಹತ್ ಜನಾಂದೋಲನವೇ ಆಗಬೇಕಿತ್ತು. ಕಳೆದ ಜೂನ್ 25ರಿಂದ ಇಲ್ಲಿಯವರೆಗೆ ತೈಲದರ ಹೆಚ್ಚಳವಾಗಿ ಒಂದು ತಿಂಗಳಾಗ್ತಾ ಬಂತು. ರಾಜಕೀಯ ಲಾಭಕ್ಕಾಗಿ ರಾಜಕೀಯ ಪಕ್ಷಗಳ ಒದರಾಟವನ್ನು ಬಿಟ್ಟರೆ ಉಳಿದವರಿಂದ ಈ ಬಗ್ಗೆ ಅಂತಹ ಪ್ರಾಮಾಣಿಕ ಕಾಳಜಿ ಕಂಡು ಬಂದಿಲ್ಲ. ಅಂದರೆ ಹಣದುಬ್ಬರ ಮತ್ತು ಅವಶ್ಯಕ ವಸ್ತುಗಳ ಬೆಲೆಯೇರಿಕೆಗೆ ಕಾರಣವಾದ ತೈಲ ದರ ಹೆಚ್ಚಳದ ಕುರಿತು ಯಾವ ಹೋರಾಟವೂ ಸಿಡಿದಿಲ್ಲ. ಬಡವರನ್ನು ಕಾಡುವ ಒಂದು ವಿಚಾರದ ಕುರಿತು ಈ ಮಟ್ಟದ ತಾತ್ಸಾರವೇ?

ಈ ಹೊತ್ತು ಗಣಿಯಿಂದ ಹಿಡಿದು ಗಡಿಯ ವರೆಗೂ ಕಚ್ಚೆಕಟ್ಟಿ ಬೀದಿಗಿಳಿದೂ ನಾವು ರಂಪ ಮಾಡುತ್ತಿದ್ದೇವೆ. ನಮ್ಮ ನಡುವೆ ನ್ಯಾಯ, ಹಕ್ಕು, ಮಹಿಳಾ ಸಂರಕ್ಷಣೆ, ಮಕ್ಕಳ ಸಂರಕ್ಷಣೆ ಇತ್ಯಾದಿಗಳಿಗಾಗಿ ಮಾತಾಡುವ ಹೋರಾಟಗಾರರಿದ್ದಾರೆ. ಸಾಹಿತಿಗಳಿದ್ದಾರೆ. ಆದರೂ ಬಡವರ ಹಸಿವು ನಮ್ಮ ಹೋರಾಟಕ್ಕೆ ವಿಷಯವಾಗಿಲ್ಲ. ಪೆಟ್ರೋಲ್, ಡಿಸೇಲ್‌ಗೆ ಬೆಲೆ ಹೆಚ್ಚಿದ್ದರಿಂದ ಶೇ. 10ರಿಂದ 20ರ ವರೆಗೆ ದಿನ ಬಳಕೆಯ ವಸ್ತುಗಳಿಗೆ ಬೆಲೆಯೇರಿಕೆಯು ಬಹುತೇಕ ಬದುಕು ಅರೆ ಹೊಟ್ಟೆಯಲ್ಲಿ ಅಥವಾ ಪೂರ್ಣ ಹಸಿದಿರುವಂತಾದ ಅಥವಾ ಗಂಜಿನೀರಿಗೆ ಸೀಮಿತಗೊಳ್ಳುವಂತಾದ ರಾಷ್ಟ್ರೀಯ ದುರಂತಕ್ಕೆ, ಅದರ ಕಾರಣವನ್ನು ಅದಕ್ಕೆ ಕಾರಣಕರ್ತರಾದವರನ್ನು ವಿರೋಧಿಸಿ ಹಸಿದ ಬೃಹತ್ ಜನಸ್ತೋಮಕ್ಕೆ ನ್ಯಾಯವನ್ನು ಕೊಡಿಸ ಬೇಕೆಂದು ನಮ್ಮಲ್ಲೇಕೆ ಅನ್ನಿಸುವುದಿಲ್ಲ? ನೋಡಿ, ವಾರಣಾಸಿಯಲ್ಲಿ ಇತ್ತೀಚೆಗೆ ಅಹ್ಮದ್ ಹುಸೈನ್ ಎಂಬ ಬಡ ವ್ಯಕ್ತಿ ಇಂತಹ ನಿರ್ಧಾರವನ್ನು ತೆಗೆದುಕೊಂಡಿದ್ದ. ಯಾಕೆಂದರೆ ಖಾಸಗಿಯವರ ಕೈಕೆಳಗೆ ದುಡಿಯುತ್ತಿದ್ದ ಅವನಿಗೆ ತಿಂಗಳಿಗೆ 1,200 ರೂಪಾಯಿ ಸಂಬಳ ಸಿಗುತ್ತಿತ್ತು. ಪತ್ನಿ ಸಿತಾರ ಮತ್ತು ಆರು ಮಕ್ಕಳ ಸಹಿತ ಅವನದ್ದು 8 ಮಂದಿಯ ಕುಟುಂಬವಾಗಿತ್ತು. ಸಾಕಲು ಸಾಧ್ಯವಾಗುವುದಿಲ್ಲ ಎಂದು ಮೂವರು ಮಕ್ಕಳನ್ನು ಕೊಂದು ಹಾಕಿ ಈಗ ಪೊಲೀಸರ ಅತಿಥಿಯಾಗಿ ದ್ದಾನೆ. ಬಡತನದಿಂದ ಈ ಅಪರಾಧವನ್ನು ಅನಿವಾರ್ಯವಾಗಿ ಮಾಡಿದೆ ಎಂದು ಪೊಲೀಸ ರಲ್ಲಿ ಅವನು ಹೇಳುವಾಗ ಅವನ ಪತ್ನಿ ಸಿತಾರ ಹೇಳುವುದು ಗೌರವ ಇಲ್ಲದೆ ಜಗತ್ತಿನಲ್ಲಿ ಬದುಕುವುದೇ ವ್ಯರ್ಥ!

ಇಂದು 1,200 ರೂಪಾಯಿಯಲ್ಲಿ ಒಂದು ಕುಟುಂಬ ಬಿಡಿ ಒಬ್ಬನ ಜೀವನವೂ ಹೋಗುವುದಿಲ್ಲ ಎಂದು ಯಾವ ಹೋರಾಟಗಾರರಿಗೆ ಗೊತ್ತಿಲ್ಲ? ಅವನಿಗೆ ಕೆಲಸ ಕೊಟ್ಟು ಕನಿಷ್ಠ ಸಂಬಳ ಕೊಡುತ್ತಿದವನಿಗೂ ಗೊತ್ತಿರಬಹುದು. ಭಾರತದ ಬಿ.ಪಿ.ಎಲ್. ಪಟ್ಟಿಯಲ್ಲಿರುವವರಲ್ಲಿ ಅಹ್ಮದ್ ಹುಸೇನ್‌ನ ಅವಸ್ಥೆಯನ್ನು ಅನುಭವಿಸುವ ಅದೆಷ್ಟೋ ಮಂದಿ ಇದ್ದಾರೆ. ಹೀಗೆ ಹಸಿಯುವವರಲ್ಲಿ ಸ್ವಾಭಿಮಾನಿಗಳು ಅಮ್ಮಯ್ಯಾ ಅನ್ನ ಕೊಡಿ ಎಂದು ಕೇಳುವುದಿಲ್ಲ. ಕೇಳುವುದಿದ್ದರೆ ಸಂಬಳ ಹೆಚ್ಚು ಮಾಡಿ ಎಂದು ಕೇಳಿಯಾರು. ಅದು ಸಿಗದಿದ್ದರೆ ಕಠೋರ ನಿರ್ಧಾರ ತಳೆಯುತ್ತಾರೆ.

ಬಡತನಕ್ಕೆ ಹೆದರಿ, ಹುಟ್ಟಿದ ಕೂಡಲೇ ತಮ್ಮ ಶಿಶುವಿನ ಕೊರಳು ಹಿಸುಕುವವರಿರಬಹುದು. ಹೊಟ್ಟೆಯಲ್ಲೇ ಅದನ್ನು ನಾಟಿ ಔಷಧಿ ಇತ್ಯಾದಿಗಳಿಂದ ಕರಗಿಸುವವರೂ ಇರಬಹುದು. ನಾವು ಜನರಿಗಾಗಿರುವವರೆಂದು ಎಲ್ಲಾ ಹೋರಾಟಗಾರರು ಹೇಳುತ್ತಾರೆ. ಆದರೆ ಹುಟ್ಟನ್ನು ನಾಶಕ್ಕೊಡ್ಡುವ ಇಂಥ ಬಡತನದ ಕುರಿತು ಇವರಲ್ಲಿ ಯಾಕೆ ಹೋರಾಡುವ ಕಿಚ್ಚು ಹೊತ್ತಿಕೊಳ್ಳುವುದಿಲ್ಲ. ರಾಜಕೀಯ ಪಕ್ಷಗಳು ಮುಟ್ಟಿವೆಯೆಂದು ಈ ವಿಚಾರಗಳನ್ನು ಮೈಲಿಗೆ ಮಾಡುವವರಾಗಲಿ; ಗಣಿ–ಗಡಿ–ಭಾಷೆ ಇತ್ಯಾದಿಗಳಲ್ಲಿ ಮುಳುಗಿರುವವರಾಗಲಿ; ಸಂಸ್ಕೃತಿ, ಸಂಸ್ಕಾರ, ಕ್ರೀಡೆ, ಎಂಟರ್‌ಟೈನ್‌ಮೆಂಟ್ ಎಂದು ಮೈ ಮರೆತು ಹೋದವರಾಗಲೀ (6ನೇ ಪುಟಕ್ಕೆ)

# ನಾಲಗೆಯ ನಿಯಂತ್ರಣ

**ಜುಮಾ ಖುತ್ಬಾ**


ಮುಹಮ್ಮದ್ ಕುಂಞಿ

**ಮು**ಸ್ಲಿಮನು ತನ್ನಲ್ಲಿ ಇಸ್ಲಾಮಿ ವ್ಯಕ್ತಿತ್ವ ಬೆಳೆಸಿಕೊಳ್ಳುವಲ್ಲಿ ಅವನ ನಾಲಗೆಯು ನಿರ್ಣಾಯಕ ಪಾತ್ರ ವಹಿಸುತ್ತದೆ. ಒಬ್ಬ ವ್ಯಕ್ತಿಯ ಸ್ವಭಾವವು ಅವನ ಮಾತಿನ ಮೂಲಕ ಪ್ರಕಟವಾಗುತ್ತದೆ. ಮಾನವ ಸ್ವಭಾವದ ಬೀಜ ಅವನ ಹೃದಯದಲ್ಲಿದ್ದರೆ, ಅವನ ನಾಲಗೆಯು ಅದನ್ನು ಪ್ರಕಟಪಡಿಸುತ್ತದೆ. ಅಂದರೆ ಅವನು ಅಹಂಕಾರಿಯೋ ಅಥವಾ ವಿನಯಶೀಲನೋ, ಅವನ ಮನದಲ್ಲಿರುವುದು ಶುಚಿತ್ವದ ಭಾವನೆಯೋ ಅಥವಾ ಮಲಿನ ಸ್ವಭಾವವೋ, ಸುಳ್ಳಿನ ಸ್ವಭಾವವೋ ಸತ್ಯ ಸಂಧತೆಯೋ... ಯಾವ ಸ್ವಭಾವ ಅವನ ಹೃದಯದಲ್ಲಿರುವುದೋ ಅದುವೇ ಅವನ ನಾಲಗೆಯಲ್ಲಿ ಪ್ರಕಟವಾಗುತ್ತದೆ.

ಆದ್ದರಿಂದಲೇ ನಾಲಗೆಯ ಉಪಯೋಗದ ಕುರಿತು ಪವಿತ್ರ ಕುರ್‌ಆನ್ ಸವಿಸ್ತಾರವಾಗಿ ವಿವರಿಸಿದೆ. ಕುರ್‌ಆನನ್ನು ಸಂಪೂರ್ಣವಾಗಿ ಅಭ್ಯಸಿಸಿದರೆ, ಮಾತುಶಾಸ್ತ್ರ ಎಂಬ ಒಂದು ಶಾಸ್ತ್ರವನ್ನೇ ನಮಗೆ ಬರೆಯಬಹುದು. ಭೌತಶಾಸ್ತ್ರ, ರಸಾಯನ ಶಾಸ್ತ್ರ ಇರುವಂತೆ. ಅಷ್ಟರ ಮಟ್ಟಿಗೆ ಮಾತುಗಳ ಕುರಿತು ಕುರ್‌ಆನಿನಲ್ಲಿ ವಿವರಿಸಿಕೊಡಲಾಗಿದೆ. ಕೆಲವು ಉದಾಹರಣೆಗಳನ್ನು ನೋಡಿ: "ಸರಿಯಾದ ಮಾತನ್ನೇ ಆಡಿರಿ" ಅಂದರೆ ವಕ್ರತೆ ಮತ್ತು ದ್ವಂದ್ವಾರ್ಥವಿಲ್ಲದ ಬಹಳ ನೇರವಾದ ಮಾತುಗಳನ್ನಾಡಿರಿ. "ಮೃದುವಾದ ಮಾತುಗಳನ್ನಾಡಿರಿ." ಅಂದರೆ ನೀವಾಡುವ ಮಾತುಗಳು ಕಠೋರವಾಗಿರಬಾರದು. ಜನರ ಮನ ನೋಯಿಸುವಂತಿರಬಾರದು. "ನೀವು ಉತ್ತಮವಾದ ಮಾತುಗಳನ್ನಾಡಿರಿ." ಒಂದೇ ಒಂದು ಕೆಟ್ಟ ಮಾತು ನಿಮ್ಮ ಬಾಯಿಯಿಂದ ಬರಬಾರದು ಎಂದಾಗಿದೆ ಅದರ ಅರ್ಥ. "ಸರಳವಾದ ಮಾತುಗಳನ್ನೇ ಆಡಿರಿ." ಅಂದರೆ ನೀವಾಡುವ ಮಾತುಗಳು ಜನರಿಗೆ ಅರ್ಥವಾಗುವಂತಿರಬೇಕು. ಯಾವುದೋ ಕ್ಲಿಷ್ಟಕರ ಸಾಹಿತ್ಯಿಕ ಪದವನ್ನು ಬಳಸಬಾರದು. ನೀವಾಡುವ ಮಾತಿನ ಉದ್ದೇಶವೇನೆಂದು ಜನರಿಗೆ ಅರ್ಥವಾಗಬೇಕು. "ನೀವು ಗೌರವಾನ್ವಿತ ಮಾತುಗಳನ್ನಾಡಿರಿ." "ಜನ ರೊಡನೆ ಒಳ್ಳೆಯ ಮಾತನ್ನಾಡಿರಿ." "ಅತ್ಯುತ್ತಮವಾದುದನ್ನು ನೀವು ಆಡಬೇಕು." ಹೀಗೆ ಹತ್ತು ಹಲವು ರೀತಿಯಲ್ಲಿ ಮಾನವರೊಡನೆ ಹೇಗೆ ಮಾತನಾಡಬೇಕೆಂಬುದನ್ನು ಕುರ್‌ಆನ್ ನಮಗೆ ಕಲಿಸಿಕೊಟ್ಟಿದೆ.

ನಾಲಗೆಯು ಅಸಾಮಾನ್ಯವಾದ ಮತ್ತು ಪವಿತ್ರವಾದ ಒಂದು ಅಂಗವಾಗಿದೆ ಎಂದು ಪ್ರವಾದಿಯವರು(ಸ) ಕಲಿಸಿಕೊಟ್ಟಿದ್ದಾರೆ. "ಒಬ್ಬ ವ್ಯಕ್ತಿಯ ಹೃದಯ ದೃಢವಾಗದೆ, ಅವನ ಈಮಾನ್ ದೃಢವಾಗದು ಮತ್ತು ಅವನ ನಾಲಗೆಯು ಸ್ಥಿರವಾಗದೆ, ಅವನ ಹೃದಯ ದೃಢವಾಗಲಾರದು" ಎಂದು ಅವರು ಹೇಳಿರುವರು. ಅಂದರೆ ನಿಮ್ಮ ನಾಲಗೆಯನ್ನು ನಿಯಂತ್ರಿಸಲು ಸಾಧ್ಯವಾದರೆ ಮಾತ್ರ ನಿಮ್ಮ ಹೃದಯಗಳು ಸ್ಥಿರವಾಗಲು ಸಾಧ್ಯ. ಹೀಗೆ ನಿಮ್ಮ ಹೃದಯವು ಸ್ಥಿರವಾದಾಗ ನಿಮ್ಮ ವಿಶ್ವಾಸ (ಈಮಾನ್) ದೃಢವಾಗುತ್ತದೆ. ಇನ್ನೊಂದರ್ಥದಲ್ಲಿ ಹೇಳುವುದಾದರೆ, ನಿಮ್ಮ ಈಮಾನ್ ಸ್ಥಿರವಾಗಬೇಕಾದರೆ ನಿಮ್ಮ ನಾಲಗೆಯ ಮೇಲೆ ನಿಮಗೆ ನಿಯಂತ್ರಣ ಇರಬೇಕು.

ನಾಲಗೆಯು ಎಷ್ಟರ ಮಟ್ಟಿಗೆ ಪವಿತ್ರವಾದ ಅಂಗ ಎಂಬುದನ್ನು ನಮಗೆ ಈ ಹದೀಸ್‌ನ ಮೂಲಕ ಅರ್ಥ ಮಾಡಿಕೊಳ್ಳಬಹುದಾಗಿದೆ. "ನಿಮಗೆ ಜನರನ್ನು ದುಡ್ಡು ಕೊಟ್ಟು ಸಂತೋಷ ಪಡಿಸಲು ಸಾಧ್ಯವಿಲ್ಲ. ಆದರೆ ಒಂದು ಮುಗುಳ್ನಗೆಯಿಂದ ಜನರನ್ನು ಸಂತೋಷಪಡಿಸಬಹುದು" ಎಂದು ಪ್ರವಾದಿವರ್ಯರು(ಸ) ಹೇಳಿದ್ದಾರೆ. "ಒಂದು ಸವಿನುಡಿ ಮತ್ತು ಕ್ಷಮಾಗುಣವು ಮನನೋಯಿಸುವ ದಾನಕ್ಕಿಂತ ಉತ್ತಮ" (2:263) ಎಂದು ಪವಿತ್ರ ಕುರ್‌ಆನ್ ಹೇಳಿದೆ.

ಮಾನವನ ಮಾತು ಎಲ್ಲಿ ದಾರಿ ತಪ್ಪುತ್ತದೆ, ಹೇಗೆ ದಾರಿ ತಪ್ಪುತ್ತದೆ ಎಂಬುದರ ಬಗ್ಗೆ ಕೂಡ ನಮಗೆ ಕಾಳಜಿ ಇರಬೇಕು. ಪ್ರಥಮತಃ ಸುಳ್ಳು ಮಾತು ಮಾನವನ ನಾಲಗೆಯ ಅತಿ ದೊಡ್ಡ ಪತನವಾಗಿದೆ. ಎರಡನೆಯ ಪತನವು ಪರಿಹಾಸ್ಯ ಮಾಡುವುದಾಗಿದೆ. ಪವಿತ್ರ ಕುರ್‌ಆನ್ ಹೇಳುತ್ತದೆ, "ಸತ್ಯವಿಶ್ವಾಸಿಗಳೇ, ಪುರುಷರು ಇತರ ಪುರುಷರನ್ನು ಪರಿಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂ ಬಹುದು ಮತ್ತು ಸ್ತ್ರೀಯರು ಇತರ ಸ್ತ್ರೀಯರನ್ನು ಪರಿಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂ ಬಹುದು. ಪರಸ್ಪರರನ್ನು ನಿಂದಿಸಬೇಡಿರಿ ಮತ್ತು ಒಬ್ಬರು ಇನ್ನೊಬ್ಬರನ್ನು ಅಡ್ಡ ಹೆಸರಿನಿಂದ ಕರೆಯಬೇಡಿರಿ." (49:11)

ಈ ಪರಿಹಾಸ್ಯ ಮಾಡುವ ಚಾಳಿಯು ಎಷ್ಟು ಕೆಟ್ಟದ್ದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. 'ಪರಸ್ಪರರನ್ನು ನಿಂದಿಸಬೇಡಿರಿ' ಎಂಬುದಕ್ಕೆ ಕುರ್‌ಆನಿನಲ್ಲಿ 'ಲಾ ತಲ್‌ಮಿಝೂ ಅನ್‌ಫುಸಕುಮ್' (ಸ್ವಯಂ ನಿಮ್ಮನ್ನು ನಿಂದಿಸಬೇಡಿರಿ) ಎಂದಿದೆ. ಅಂದರೆ ತನ್ನ ಸೋದರನನ್ನು ನಿಂದಿಸುವುದೆಂದರೆ ಸ್ವಯಂ ತನ್ನನ್ನೇ ನಿಂದಿಸಿದಂತೆ. ಆದರೆ ನಾವು ಎಷ್ಟೇ ನಾಗರಿಕರು (12ನೇ ಪುಟಕ್ಕೆ)

# ಹುಬ್ಬಳ್ಳಿಯ ಸಯ್ಯದ್ ಅಬ್ದುಲ್ ಹಸೀಬ್ ಸಾಬ್

## ಆಂದೋಲನದ ಹರಿಕಾರರು

**ನಿರೂಪಣೆ: ನೂರುಲ್ ಅಮೀನ್ ಪಕ್ಕಲಡ್ಕ**

| | |
|---|---|
| ಹೆಸರು | : ಸಯ್ಯದ್ ಅಬ್ದುಲ್ ಹಸೀಬ್ |
| ತಂದೆ | : ಸಯ್ಯದ್ ಲಾಲ್ ಮುಹಮ್ಮದ್ |
| ತಾಯಿ | : ಅಝೀಝಾ ಖಾತೂನ್ |
| ಜನನ | : 01-06-1948 |
| ಸ್ಥಳ | : ಹುಬ್ಬಳ್ಳಿ |
| ಹಳೇ ಉದ್ಯೋಗ | : ಕಂಟ್ರಾಕ್ಟುದಾರರು- ಸದ್ಯ ಉದ್ಯಮಿ |
| ಕುಟುಂಬ | : ಐವರು ಸಹೋದರರು ಮೂವರು ಸಹೋದರಿಯರು. |
| ವಿದ್ಯಾಭ್ಯಾಸ | : ಪಿ.ಯು.ಸಿ., ಮೌಲಾನ (ಮದ್ರಸ ಪಾರಂಗತರು) |



ಕ್ರಮಿಸಬೇಕಾದ ದಾರಿ ಇನ್ನೂ ದೂರ ಇದೆ. ಅನಿಸಿಕೆ ಹಂಚಲು ಕಾಲ ಸೂಕ್ತವಾಗಿಲ್ಲ. ಮಾತ್ರವಲ್ಲ, ಪಕ್ವವಾಗಿಲ್ಲ. ನಾನು ಪರಲೋಕದ ಕೃಷಿಗೆ ಪ್ರವೇಶಿಸುವಾಗ, ಆಗಷ್ಟೇ ಉತ್ತು ಬಿತ್ತಿದ್ದರು. ಅದಕ್ಕೊಂದು ಬೇಲಿ ಕಟ್ಟಿ ಕಂಡವರಿಗೆ ಆಹಾರವಾಗಿ ನಾಶವಾಗದಂತೆ ಅಲ್ಲಾಹನ ಅನುಗ್ರಹದಿಂದ ಸದ್ಯಕ್ಕೆ ಸಸಿಯನ್ನು ಗಿಡದ ಮಟ್ಟಿಗೆ ತಂದು ಮುಟ್ಟಿಸುವಲ್ಲಿ ಇತರ ಹಿರಿಯರೊಂದಿಗೆ ಸ್ವಲ್ಪ ಮಟ್ಟಿಗೆ ಶ್ರಮವಹಿಸಿದ್ದೇನೆ ಅಷ್ಟೇ. ಆದರೂ ಈ ಆಂದೋಲನದ ಮುನ್ನಡೆಗೆ ಶ್ರಮಿಸಿದ ಕೆಲವು ಹಿರಿಯ ಸತ್ಯಮಾರ್ಗದ ಸಂಗಾತಿಗಳೊಂದಿಗೆ ಕಳೆದ ಕೆಲವೊಂದು ಸುವರ್ಣ ದಿನಗಳನ್ನಷ್ಟೇ ನಾನು ನಿಮಗೆ ಹೇಳಬಲ್ಲೆ!

ಅವರು ನನ್ನನ್ನು ಕರೆದುಕೊಂಡು ಹೋದರು ಎನ್ನುವುದಕ್ಕಿಂತ ಎಳೆದುಕೊಂಡು ಹೋದರು ಎನ್ನುವುದೇ ಸೂಕ್ತ. (ಕ್ಷಣ ಕಾಲ ನೆನಪು ಮರುಕಳಿಸಿ, ಕೊಂಚಕಾಲ ಭಾವೋದ್ವೇಗಕ್ಕೆ ಒಳಗಾದರು) ಮುಹಮ್ಮದ್ ಗೌಸ್ ಸಾಹೇಬ್ ಕನಗಿರಿ (ಮರಣ 2005) ವೃತ್ತಿಯಲ್ಲಿ ರೈಲ್ವೆ ಮೆಕ್ಯಾನಿಕ್, ಸ್ವಭಾವದಲ್ಲಿ ಅಪ್ಪಟ ಚಿನ್ನ. ನನ್ನನ್ನು ಕರೆದು ಕೊಂಡುಹೋದದ್ದು ಕೊಪ್ಪಳ ಜಿಲ್ಲೆಗೆ. 1967ರ ಇಸವಿಯದು. ನಾವು ಐದಾರು ಜನ ಕಟ್ಟಾ ಬರೇಲ್ವಿಗಳು, ಒತ್ತಾಯಕ್ಕೆ ಮಣಿದು ಗೂಢಚರ್ಯೆ ಮನೋಭಾವವಿಟ್ಟು ಲಗ್ಗೇಜ್ ಕಟ್ಟಿಕೊಂಡು ಹುಬ್ಬಳ್ಳಿಯಿಂದ ಕೊಪ್ಪಳಕ್ಕೆ ಹೊರಟೆವು. ಇಜ್ತಿಮಾ ನಡೆಯುತ್ತಿದ್ದ ಸ್ಥಳದಲ್ಲಿ ನಮ್ಮ ಲಗ್ಗೇಜ್ ಹೊರಲು ಓರ್ವ ಹಮಾಲಿ ಎದುರುಗೊಂಡರು. ಅವರ ನಯವಿನಯ ಮೊದಲ ನೋಟಕ್ಕೇ ಆಕರ್ಷಣೀಯವಾಗಿತ್ತು.

ನಾನು ಪಿ.ಯು.ಸಿ. ಓದುತ್ತಿದ್ದ ಕಾಲವದು. ಅಲ್ಲಾಹನ ಅನುಗ್ರಹದಿಂದ 8ನೇ ತರಗತಿಯಲ್ಲಿ ಕಲಿಯುತ್ತಿರುವಾಗಲೇ 350 ಮಕ್ಕಳಿರುವ ಸಂಜೆ ಮದ್ರಸ ನಡೆಸುತ್ತಿದ್ದೆ. ಮೇಲಾಗಿ ಶಾಲೆಯ ನನ್ನದೇ ತರಗತಿಯ ವಿದ್ಯಾರ್ಥಿಗಳಿಗೆ ಟ್ಯೂಷನ್ ಬೇರೆ ಹೇಳಿಕೊಡುತ್ತಿದ್ದೆ. ಅಲ್ಲಾಹನು ನನಗೆ ನೀಡಿದ ಈ ಅನುಗ್ರಹಗಳನ್ನು ದೂರದಿಂದಲೇ ಗಮನಿಸಿದ ಗೌಸ್ ಸಾಹೇಬರು 4 ಮೈಲು ಕ್ರಮಿಸಿ ನಾನಿರುವ ಸ್ಥಳಕ್ಕೆ ಬಂದು ನನ್ನ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ಬೆನ್ನು ತಟ್ಟುತ್ತಿದ್ದರು. ಅದೇಕೋ ಅವರ ಬರುವಿಕೆ ನನಗೆ ಕಿರಿಕಿರಿಯೆನಿಸಿದರೂ ನೇರವಾಗಿ ಅವರೊಂದಿಗೆ ಹೇಳಲು ಮುಜುಗರವಾಗಿ ಸುಮ್ಮನಿರುತ್ತಿದ್ದೆ. ನನ್ನ ಇಡೀ ಕುಟುಂಬ 125 ಕೆ.ಜಿ. ಭಾರವುಳ್ಳ ತಾಮ್ರದ ಪಾತ್ರೆಯೊಂದಿಗೆ ಆಗ ಅಸ್ತಿತ್ವದಲ್ಲಿದ್ದ ಪೀರ್(ಸಂತ)ಗಳ ವಾರ್ಷಿಕಾಚರಣೆಯ ತಿಂಗಳಾಚರಣೆಯಲ್ಲಿ, ಗುಂಪು ನೃತ್ಯದಲ್ಲಿ ತೊಡಗಿರುತ್ತಿದ್ದು, ನಮ್ಮ ಭಾಷೆಯಲ್ಲಿ ಆಗ ಇದನ್ನೆಲ್ಲಾ ವಿರೋಧಿಸುವವರನ್ನು 'ತೊಂಡಾ' ಎಂದು ನಿಂದಿಸುತ್ತಿದ್ದೆವು. ಆವಾಗಲೇ ಗೌಸ್ ಸಾಹೇಬರಿಗೆ ಈ ಹಣೆಪಟ್ಟಿ ದೊರೆತಿತ್ತು. ಇಂತಹವರೊಂದಿಗೆ ಮಾತನಾಡುವುದು, ಸಂಪರ್ಕ ಬೆಳೆಸುವುದು ತೀರಾ ನಿಷೇಧಿತ ಕಾಲವಾಗಿತ್ತು. ಅಂಥಾದ್ದರಲ್ಲಿ ಈ ಮನುಷ್ಯ 4 ಮೈಲು ದೂರದಿಂದ ನಡೆದು ಕೇವಲ ಯೋಗಕ್ಷೇಮ ವಿಚಾರಿಸಿ ನನ್ನ ಚಟುವಟಿಕೆಗೆ ಪ್ರೋತ್ಸಾಹಕರ ಮಾತುಗಳನ್ನಾಡುವುದನ್ನು ವಿರೋಧಿಸಲು ಸಾಧ್ಯವಾಗುತ್ತಿರಲಿಲ್ಲ. ಅವರ ಪ್ರಶಂಸನೀಯ ಮಾತುಗಳು ಮುತ್ತಿನಂತಿತ್ತು. ಏನೋ ಒಂದು ರೀತಿಯ ಮುಲಾಜಿಗೊಳಪಟ್ಟು ಕೊಪ್ಪ ಇಜ್ತಿಮಾದಲ್ಲಿ ಭಾಗವಹಿಸಲು ಹೊರಟಿದ್ದೆವು.

ಅಲ್ಲೊಂದು ವಿಚಿತ್ರ ರೀತಿಯ ಸ್ವಭಾವವಿರುವ ಜನರ ಪರಿಚಯವಾಯಿತು. ನಾನಿರುವ ಮದ್ರಸದ ಶಿಕ್ಷಣ ಶೈಲಿಯಿಂದ ಅರಿತದ್ದೇನೆಂದರೆ, ಮೌಲಾನಗಳು ಅಂದರೆ ಎಲ್ಲಿಯಾದರೂ ದರ್ಗಾದಲ್ಲಿ ಜನರಿಗೆ ಆಶೀರ್ವಚನ ನೀಡುವ, ಹಿರಿ ಸಂತರೆಂದರೆ ಇತರರಿಗಿಂತ ಭಿನ್ನರು. ಇವರಿಗೆ ಸಾರ್ವಜನಿಕ, ಸಮುದಾಯದ ಸಂಪರ್ಕ ಇರಕೂಡದು, ಇವರು 'ಅಲ್ಲಾವಾಲಾಗಳು' ಮೌನ, ಸನ್ನೆ, ಪ್ರಾಪಂಚಿಕ ವ್ಯವಹಾರದಿಂದ ಮುಕ್ತ, ಗರಿಯಿಂದ ಶೃಂಗರಿಸಿರುವ ದಂಡದಿಂದ ಜನರನ್ನು ಸ್ಪರ್ಶಿಸಿ ಗುಣಪಡಿಸುವುದು, ಅವರು ಪೀಠದಲ್ಲೂ, ಬಂದವರು ನೆಲದಲ್ಲೂ ಕೂರುವುದು ಇದು ನಾನು ಕಲಿತ ಮದ್ರಸದ ರೀತಿ ರಿವಾಜಾಗಿತ್ತು. ಕೊಪ್ಪಳದಲ್ಲಿ ನಾನು ಕಂಡ ಘಟನೆ ನನ್ನ ಬದುಕನ್ನೇ ಬದಲಾಯಿಸಿತು. ಆ ಮೂರು ವ್ಯಕ್ತಿತ್ವಗಳು ಅವರ ಬಳಿಕ ತುಂಬುವವರಿಲ್ಲದ ಕೊರತೆ ನನಗೆ ಈಗಲೂ ಆಂದೋಲನದಲ್ಲಿ ಕಾಣುತ್ತಿದೆ.

ಮೌಲಾನ ಮುಹಮ್ಮದ್ ಖಾಸಿಂ (ಎಂ.ಎ.,ಎಲ್.ಎಲ್.ಬಿ.) ಪೂರ್ತಿ ಶೇರ್ವಾನಿ ತೊಟ್ಟು ಇಜ್ತಿಮಾದ ಹೊಣೆಗಾರಿಕೆ ಹೊತ್ತು ಅತ್ತಿಂದಿತ್ತ ಓಡಾಡುತ್ತಿದ್ದರು. ಓರ್ವ ಯುವಕ ಅವರಲ್ಲಿ ಶೌಚಕ್ಕೆ ಮಾಡಿರುವ ವ್ಯವಸ್ಥೆ ಬಗ್ಗೆ ದೂರು ಸಲ್ಲಿಸಿದ. ಕುತೂಹಲಕ್ಕೆ ನಾನು ಕಾಸಿಂ ಸಾಹೇಬರನ್ನು ಹಿಂಬಾಲಿಸಿದೆ. ಆಶ್ಚರ್ಯಾಘಾತವಾಯಿತು. ಖಾಸಿಂ ಸಾಹೇಬರು ಶೇರ್ವಾನಿ ಪ್ಯಾಂಟ್ ಮೇಲಕ್ಕೆ ಮಡಚಿ ಮೇಲಂಗಿ ಕಳಚಿ ಒಂದು ಉದ್ದದ ಕೋಲಿನಿಂದ ಅದನ್ನು ಶುಚಿಗೊಳಿಸಿದ ಬಳಿಕ ಪುನಃ ವುಝೂ ಮಾಡಿ ಬಟ್ಟೆ ಧರಿಸಿದರು. ಓರ್ವ ಮೌಲಾನ ಈ ರೀತಿಯ ಕೆಲಸಗಳಿಗೆ ಕೈ ಹಾಕಿದರೆ ಅವರ ಘನತೆ ಉಳಿದೀತೆ ಎಂಬ ವಿಚಾರ ಮನದೊಳಕ್ಕೆ ಹೊಕ್ಕಿತು.

**(ಮುಂದುವರಿಯುವುದು)**

---

# ಛಿ! ಬಡವರದ್ದು...

(5ನೇ ಪುಟದಿಂದ)

**ಬಡವನಿಂದ ಕಸಿಯಲ್ಪಡುವ ಅನ್ನದ ಹಕ್ಕಿನ ಕುರಿತು ಮೌನವಾಗಿದ್ದಾರೆ. ಪಟಾಕಿ ಸಿಡಿದದ್ದಕ್ಕೂ ಪ್ರತಿಭಟನೆ ಎಂದು ಬೀದಿರಂಪ ಮಾಡುವ ಸಂಸ್ಕೃತಿ ರಕ್ಷಕರೂ ಕೂಡಾ ತುಟಿ ಬಿಗಿದು ಕೊಳ್ಳುತ್ತಿದ್ದಾರೆ! ಅಂದರೆ ಗಡಿ, ಗಣಿ ಇತ್ಯಾದಿಗಳು ಮಾತ್ರ ಪ್ರತಿಭಟನೆ ಹೋರಾಟದ ವಸ್ತುವಾಗುವುದಾದರೆ, ಬೆಲೆಯೇರಿಕೆಯೆಂಬ ವ್ಯಾಪಕ ಅಕ್ರಮಕ್ಕೆ ಪರಿಣಾಮಕಾರಿಯಾಗಿ ಸ್ಪಂದಿಸಬೇಕೆಂದು ಅನ್ನಿಸುವುದಿಲ್ಲವಾದರೆ ನಮ್ಮ ಹೋರಾಟ, ಚಳುವಳಿಗಳೆಲ್ಲ ಊಟಕ್ಕಿಲ್ಲದ ಉಪ್ಪಿನಕಾಯಿಯಂತೆ ಬೇಕಾರ್ ಎಂದು ಕನಿಷ್ಟ ಬಡತನದ ಕಾರಣದಿಂದ ಸಾಯುವ ಸ್ಥಿತಿಯಲ್ಲಿರುವ ಮಂದಿ ಖಂಡಿತವಾಗಿಯೂ ಹೇಳದಿರಲಾರರು. ನೋಡಿ, ತೈಲ ಬೆಲೆಯೇರಿಕೆಯಾದಾಗ ಇಲ್ಲಿ ಕೆಲವು ರಾಜಕೀಯ ಪಕ್ಷಗಳು ಬಂದ್, ಪ್ರತಿಭಟನೆ ಮಾಡಿದ್ದವು. ಅದಕ್ಕೆ ಅವುಗಳದ್ದೇ ಆದ ರಾಜಕೀಯ ಕಾರಣಗಳಿರಬಹುದು. ಅದೇನಿದ್ದರೂ ಬಡವರ್ಗದ ಈ ಪ್ರಶ್ನೆ ಪ್ರತಿಭಟಿಸಬೇಕಾದದ್ದೇ ಅಲ್ಲವೇ? ರಾಜಕೀಯ, ರಾಜಕೀಯ ಎಂದು ಹೇಳುತ್ತಾ ಮೂಗೆಳೆಯುವ ಮಂದಿ ಕೂಡಾ ನಮ್ಮ ನಡುವೆ ಇದ್ದಾರೆ. ಆದರೆ, ಇವರು ಹಸಿವು ಎಂಬ ಒಂದೇ ಕಾರಣಕ್ಕೆ ತನ್ನ ಮಕ್ಕಳ ಪಾಲಿಗೆ ಹತ್ಯೆಕೋರನಾಗಿ ಪರಿವರ್ತನೆಯಾದ ಅಹ್ಮದ್ ಹುಸೈನನ ಬಗ್ಗೆ ಏನಂದು ಕೊಂಡಿದ್ದಾರೆ? ಅದು ಅವನ ಹಣೆಬರಹ ಎಂದೇ?**

**ಯಾಕೆಂದರೆ ಇಂದು ಬೆಲೆಯೇರಿಕೆಯಾಗಿರುವ ದಿನವಹಿ ವಸ್ತುಗಳಿಂದ ಹಿಡಿದು ಪೆಟ್ರೋಲ್, ಡೀಸೆಲ್‌ಗಳ ವರೆಗೂ ಎಲ್ಲವೂ ಕೃತಕವಾದ ತುಟ್ಟಿಯಾಗಿದೆ ಎಂಬುದನ್ನು ಮರೆಯಬಾರದು. ನಮ್ಮ ಸರಕಾರಗಳು ಪ್ರಾಮಾಣಿಕವಾಗಿದ್ದರೆ ಒಂದು ಲೀಟರ್ ಪೆಟ್ರೋಲನ್ನು ಕೇವಲ 30 ರೂಪಾಯಿಗೆ ಮಾರಬಹುದು. ಇನ್ನು ಡೀಸೆಲ್, ಸೀಮೆ ಎಣ್ಣೆ, ಅಡಿಗೆ ಅನಿಲಗಳನ್ನು ಎಷ್ಟು ಸ್ವಸ್ಥ ದರದಲ್ಲಿ ಮಾರಬಹುದೆಂದು ನೀವೇ ಊಹಿಸಿನೋಡಿ. ಹೆಚ್ಚೇಕೆ ಇಂಗ್ಲೆಂಡ್ ಅಮೇರಿಕಗಳು ಕೂಡಾ ಈಗಾಗಲೇ ಈ ಭಾರತೀಯ ದರದಲ್ಲಿ ಪೆಟ್ರೋಲನ್ನು ಮಾರುತ್ತಿವೆ. ವಿಶ್ವಾಸವಾಗದಿದ್ದರೆ ನೀವು ಈ ಲೆಕ್ಕವನ್ನು ನೋಡಿ.**

**ಭಾರತ ಸರಕಾರ ತೈಲ ಬೆಲೆಯ ನಿಯಂತ್ರಣವನ್ನು ಕಂಪೆನಿಗಳಿಗೆ ವಹಿಸಿಕೊಟ್ಟಾಗ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದರ ಪ್ರತಿ ಬ್ಯಾರಲ್‌ಗೆ 76.51 ಡಾಲರ್ ಆಗಿತ್ತು. ಈಗಿನ ವಿನಿಮಯ ದರದ ಪ್ರಕಾರ 2,150 ರೂಪಾಯಿ. ಒಂದು ಬ್ಯಾರಲ್ ತೈಲ ಎಂದರೆ 158.76 ಲೀಟರ್. ಹಾಗಿರುವಾಗಗಿ ಒಂದು ಲೀಟರ್ ಕ್ರೂಡ್ ಆಯಿಲ್‌ನ ಬೆಲೆ 22.29 ರೂಪಾಯಿ. ಅದನ್ನು ಖರೀದಿಸಿ ಶುದ್ಧೀಕರಿಸಿ ಪೆಟ್ರೋಲ್ ಡೀಸೆಲ್ ಆಗಿ ಪರಿವರ್ತಿಸಿದಾಗ ಒಂದು ಲೀಟರ್ ಪೆಟ್ರೋಲ್‌ಗೆ ಬೀಳುವ ಖರ್ಚು 52 ಪೈಸೆ. ಅದೇ ವೇಳೆ ಸಂಸ್ಕರಣೆಗೆ 6 ರೂಪಾಯಿ ಹೋಗುತ್ತದೆ. ಅಂದರೆ ಒಂದು ಲೀಟರ್ ಪೆಟ್ರೋಲಿಗೆ ಸರಕಾರದ ಅಬಕಾರಿ ತೆರಿಗೆ ಪಾವತಿಸಿ ಪೆಟ್ರೋಲ್ ಕಂಪೆನಿಗಳಿಗೆ ತಗಲುವ ಖರ್ಚು 28 ರೂಪಾಯಿ ಚಿಲ್ಲರೆ ಪೈಸೆ ಆಗುತ್ತದೆ. ಈಗ ನಾವು ಪೆಟ್ರೋಲ್‌ಗೆ 55 ರೂಪಾಯಿ 32 ಪೈಸೆ ಕೊಡುತ್ತೇವೆ ಎಂದಿಟ್ಟುಕೊಂಡರೂ ಖರ್ಚಿನ ದುಪ್ಪಟ್ಟನ್ನು ತೆರುತ್ತೇವೆ ಎಂದಾಯಿತು. ಇದನ್ನು ಅನುಭವಿಸುವುದು ಬಡವರು ಮಾತ್ರವಲ್ಲ, ಪೆಟ್ರೋಲ್, ಕಾರು, ಬೈಕುಗಳಿಗೆ ಹಾಕಿ ಸುತ್ತಾಡುವವರೂ ಇದನ್ನು ಅನುಭವಿಸುತ್ತಿದ್ದಾರಲ್ಲ. ಅದಕ್ಕೇ ಹೇಳಿದ್ದು ತೈಲ ದರದ ವಿರುದ್ಧ ಹೋರಾಡದಿರುವುದು ಕೇವಲ ಬಡವರಿಗೆ ಮಾತ್ರ ಹಣೆಬರಹವಾಗಿಲ್ಲ. ಎಲ್ಲರನ್ನೂ ಅದು ಸುಸ್ತು ಹೊಡೆಸಿದೆ ಎಂದು.**

**ಹೋಗ್ಲಿ ಬಿಡಿ, ಈ ಹೆಚ್ಚುವರಿ ಹಣ ಯಾರ ಕಿಸೆಗೆ ಹೋಗುತ್ತದೆ ಎಂದು ನೋಡೋಣ. ಅಬಕಾರಿ ಸುಂಕದ ಮೂಲಕ ಇದರಲ್ಲಿ ಶೇಕಡಾ 20ರಷ್ಟು ಕೇಂದ್ರ ಸರಕಾರದ ಕಿಸೆಗೆ ಹೋಗುತ್ತದೆ. ಸಾಗಾಟ ಖರ್ಚು, ಸಬ್ಸಿಡಿ ಮುಂತಾದವು ರಾಜ್ಯ ಸರಕಾರಕ್ಕೆ ಹೋಗುತ್ತದೆ. ಈಗ ಅದಕ್ಕೆ ಡಬಲ್ ರೇಟನ್ನು ಕೊಟ್ಟು ಪೆಟ್ರೋಲ್ ಡೀಸೆಲನ್ನು ಖರೀದಿಸುತ್ತೇವೆ.**

**ಯಾವುದೇ ಕಾರ್ಪೊರೇಟ್ ಜಗತ್ತಿಗೆ ಒಂದು ದಿನ ಬಂದ್‌ನಿಂದಾಗಿ 2 ಲಕ್ಷ ಕೋಟಿ ನಷ್ಟವಾಯಿತು ಎಂಬ ಮಾತುಗಳಿಗೆ ಕಿವಿನಿಮಿರಿಸಿ ಮೂಗೆಳೆಯುವವರು ಡೀಸೆಲ್, ಪೆಟ್ರೋಲ್, ಅಡಿಗೆ ಅನಿಲ ಇತ್ಯಾದಿಗಳಿಂದ ದಿನವಹಿ ಶೋಷಣೆಯಾಗುವ ಬಗ್ಗೆ ಮೌನವಾಗುವುದೆಂದರೆ ಅವಮಾನವೇ ಅಲ್ಲವೇ? ಸರಕಾರಕ್ಕೆ ಸಂಪನ್ಮೂಲಗಳನ್ನು ಸಂಪಾದಿಸಬೇಕಾದರೆ, ಆಹಾರ ವಸ್ತುಗಳನ್ನು ಸಾಗಿಸುವ ಲಾರಿ ಇತ್ಯಾದಿಗಳು ಇಂಧನವನ್ನು ಹೆಚ್ಚಿಸಿ ಬಿ.ಪಿ.ಎಲ್. ವರ್ಗವನ್ನು ಅಪಾಯಕ್ಕೆ ಸಿಲುಕಿಸುವ ಕೆಲಸ ಮಾಡಬಾರದು. ಅದಕ್ಕೆ ಕಾರ್ಪೊರೇಟು ಜಗತ್ತು, ಶ್ರೀಮಂತ ವರ್ಗವಿದೆ. ಅವರಿಗೆ ತೆರಿಗೆ ವಿಧಿಸಿ ತಮ್ಮ ಖಜಾನೆಯನ್ನು ಕೊಬ್ಬಿಸಬಹುದಲ್ಲವೇ ಎಂದು ನಾವೇಕೆ ಹೋರಾಡಬಾರದು ನಿತ್ಯದ ಆಹಾರ ವಸ್ತು ದುಬಾರಿಯಾದುದರಿಂದ ಕೊಳಕು ನಾರುವ ಸ್ಥಿತಿಯಲ್ಲಿದ್ದರೂ ಹೋರಾಟಗಾರರೇಕೆ ಮೌನತಳೆದಿದ್ದಾರೆ?**

**ಬಡವರ ಮೇಲೆ ಬರೆ ಎಳೆಯುವ ಕೆಲಸವನ್ನು ಕೇಂದ್ರದಂತೆ ರಾಜ್ಯ ಸರಕಾರವೂ ಮಾಡಿದೆ. ಜೂನ್ 25ರಂದು ಪೆಟ್ರೋಲ್, ಡೀಸೆಲ್‌ಗೆ ಬೆಲೆಯೇರಿಸಿದ ಮರುದಿವಸ ರಾತ್ರಿಯೇ ಕರ್ನಾಟಕ ಸರಕಾರ ಜನಸಾಮಾನ್ಯರು ಪ್ರಯಾಣಿಸುವ ಬಸ್ಸು ದರ ಏರಿಸಿಬಿಟ್ಟಿತು. ಗಣಿ ಕಲಹದ ನಡುವೆಯೂ ನಮ್ಮಲ್ಲಿ ಸಾಕಷ್ಟು ಹಣ ಇದೆ ಎನ್ನುವ ಸರಕಾರ ಪೆಟ್ರೋಲ್, ಡೀಸೆಲ್ ದರದ ನೆಪಮಾಡಿ ರಾತ್ರಿ ಬೆಳಗಾಗುವುದರೊಳಗೆ ಬಡವನ ಕಿಸೆಗೆ ಕನ್ನ ಹಾಕಿದ್ದೇಕೆ? ಕೇಂದ್ರ ಸರಕಾರ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆಗಳ ಮೇಲಿನ ಮೌಲ್ಯ ವರ್ಧಿತ ತೆರಿಗೆಯನ್ನು (VAT) ಕಡಿಮೆ ಮಾಡಿ ಎಂದು ರಾಜ್ಯ ಸರಕಾರವನ್ನು ಕೇಳಿಕೊಂಡರೆ ಕರ್ನಾಟಕ ರಾಜ್ಯ ಅದಕ್ಕೊಪ್ಪಲು ಸಾಧ್ಯವಿಲ್ಲ ಎಂದಿದೆ. ದೆಹಲಿ ಮತ್ತು ಗೋವಾ ಇದಕ್ಕೆ ಸ್ಪಂದಿಸಿ 2.70 ರೂಪಾಯಿ ಕಡಿಮೆ ಮಾಡಿತು. ಕರ್ನಾಟಕ ಪೆಟ್ರೋಲ್ ಮೇಲೆ ಶೇ. 30 ಮತ್ತು ಡೀಸೆಲ್ ಮೇಲೆ ಶೇ. 23 ತೆರಿಗೆ ವಿಧಿಸುತ್ತಿದೆ ಎಂದು ವರದಿಯಾಗಿದೆ. ಕರ್ನಾಟಕದಲ್ಲಿ ಆಡಳಿತ ನಡೆಸುವ ಪಕ್ಷವೇ ತೈಲದರ ಏರಿಕೆಗೆ ಬಂದ್ ಮಾಡಿಸಿತ್ತು. ಈ ಬಂದ್ ಒಂದಿಷ್ಟು ಪ್ರಾಮಾಣಿಕವಾಗಿದ್ದರೆ ತನ್ನ ತೆರಿಗೆಯನ್ನು ತೆಗೆದು ಹಾಕಿ ಜನರಿಗೆ ಅರ್ಥಾತ್ ಬಡ ಜನರಿಗೆ ಉಪಕಾರ ಮಾಡಬಹುದಿತ್ತು. ತೈಲ ದರ ಹೆಚ್ಚಳ ಮತ್ತು ಅಗತ್ಯ ವಸ್ತು ದುಬಾರಿಯಾದ ವಿಚಾರದಲ್ಲಿ ಕೇಂದ್ರ ಸರಕಾರದಷ್ಟೇ ರಾಜ್ಯ ಸರಕಾರವೂ ಅಪರಾಧಿಯಾಗಿದೆ. ಅವೆರಡೂ ಸೇರಿ ಬೃಹತ್ತಾದ ಬಡವರ್ಗದ ಪ್ರಾಣದ ಮೇಲೆ ಬಂಡೆ ಕಲ್ಲನ್ನು ಹಾಕಿದೆ. ಅತ್ತ ಸಾಯಲಾಗದೆ, ಇತ್ತ ಬದುಕಲಾಗದೆ ಬವಣೆ ಪಡುವ ಬಿ.ಪಿ.ಎಲ್. ವರ್ಗದ ನಿತ್ಯದ ಗೋಳು, ನೋವಿಗೆ ಪ್ರಾಮಾಣಿಕ ಪರಿಹಾರ ಕೊಡಿಸುವುದಕ್ಕಾದರೂ ಹೋರಾಟ ಬೇಡವೇ? ಆದ್ದರಿಂದ ಸರಕಾರಗಳ ಈ ಶೋಷಣೆಯ ವಿರುದ್ಧ ಆಂದೋಲನಕ್ಕೆ ಸಿದ್ಧವಾಗಬೇಕಾಗಿದೆ. ಈಗ ತ್ವರಿತವಾಗಿ 'ಬಡವರನ್ನು ಉಳಿಸಿ' ಎಂಬುದು ಆಂದೋಲನವಾಗಬೇಕಾಗಿದೆ.**

# ಜಮಾಅತ್ ಮೇಲೆ ಅಪವಾದ: ನಿಜಾಂಶವೇನು?

ಅಹ್ಮದ್, ಉಳ್ಳಾಲ

**• ಕೇರಳದಲ್ಲಿ ಮುಜಾಹಿದ್ ಸಂಘಟನೆಯು ಖಾದಿಯಾನಿಗಳೊಂದಿಗೆ ಸೇರಿ ಜಮಾಅತೆ ಇಸ್ಲಾಮಿಯನ್ನು ನಿಷೇಧಿಸಬೇಕೆಂದು ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದು ಈ ಹಿಂದೆ ಪತ್ರಿಕೆಯಲ್ಲಿ ಓದಿದ ನೆನಪು. ಆದರೆ ಇತ್ತೀಚೆಗೆ ಉಳ್ಳಾಲದಲ್ಲಿ ನಡೆದ ಸಲಫಿ ಸಂಘಟನೆಯ ಸಮಾವೇಶದಲ್ಲಿ ಇದು ಜಮಾಅತ್‌ನವರ ಸುಳ್ಳು ಸೃಷ್ಟಿಯೆಂದು ವಾದಿಸಲಾಗಿದೆ. ನಿಜಾಂಶವೇನೆಂದು ತಿಳಿಸುವಿರಾ?**

❍ ಜಮಾಅತೆ ಇಸ್ಲಾಮಿ ಹಿಂದ್‌ನ ಮೂಲಭೂತ ತತ್ವಸಿದ್ಧಾಂತ (ಅಕೀದ) "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್" (ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆ) ಆಗಿದೆ. ಅದರ ಮೂಲಧ್ಯೇಯವು ಇಕಾಮ ತುದ್ದೀನ್(ಧರ್ಮಸಂಸ್ಥಾಪನೆ) ಆಗಿದೆ. ಅದರ ಕಾರ್ಯ ವಿಧಾನ ಕುರ್‌ಆನ್ ಮತ್ತು ಸುನ್ನತ್‌ನ ಪ್ರಕಾರವಾಗಿದೆ. ಇದನ್ನು ಜಮಾಅತ್‌ನ ಸಂವಿಧಾನದಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಜಮಾಅತ್‌ನ ಚಟುವಟಿಕೆಗಳಾವುವೂ ನಿಗೂಢವಾಗಿಲ್ಲ. ಎಲ್ಲವೂ ಪ್ರತ್ಯಕ್ಷವಾಗಿದೆ. ಜಮಾಅತ್ ಪ್ರವಾದಿಗಳ ದೌತ್ಯವನ್ನು ಎತ್ತಿ ನಡೆಯುವ ಸಂಘಟನೆಯಾಗಿದೆ. ಇದರ ಧ್ಯೇಯವು ಸರ್ವ ಮುಸ್ಲಿಮರ ಹೊಣೆಗಾರಿಕೆಯೆಂಬುದು ಕುರ್‌ಆನ್ ಮತ್ತು ಹದೀಸ್‌ಗಳ ಅಧ್ಯಯನದಿಂದ ತಿಳಿಯುವ ವಿಚಾರವಾಗಿದೆ. ಆದರೆ ಅದನ್ನು ವಹಿಸುವವರು ಯಾರೂ ಯಾವ ಸಂಘಟನೆಯೂ ಇಲ್ಲದಿದ್ದಂತಹ ಕಾಲದಲ್ಲಿ ಜಮಾಅತೆ ಇಸ್ಲಾಮಿ ಈ ಭಾರೀ ಹೊಣೆಗಾರಿಕೆಯನ್ನು ಹೊತ್ತುಕೊಂಡಿತು. ಅದರಲ್ಲೇ ಈಗಲೂ ಮುಂದುವರಿಯುತ್ತಾ ಇದೆ. ಅಲ್ಲಾಹನ ಧರ್ಮವನ್ನು ಅಲ್ಲಾಹನ ದಾಸರಿಗೆ ತಲುಪಿಸುವ ಈ ಘನ ಕಾರ್ಯವನ್ನು ವಹಿಸಿಕೊಳ್ಳುವಂತೆ ಅದು ಮುಸ್ಲಿಮರನ್ನು ಪ್ರೇರೇಪಿಸುತ್ತಾ ಇದೆ. ಇಂತಹ ಒಂದು ದೈವಿಕ ಸಂಘಟನೆಯನ್ನು ವಿರೋಧಿಸುವುದು

**ಕೇಳಿದಿರಾ? ಕೇಳಿ**
**ಮುಜೀಬ್**

ವಿರೋಧಿಸುವವರ ದೌರ್ಭಾಗ್ಯವಾಗಿದೆಯೆನ್ನದೆ ನಿರ್ವಾಹವಿಲ್ಲ. ಹಾಗಿರುವಾಗ ಅದರ ಚಟುವಟಿಕೆಯನ್ನೇ ನಿಷೇಧಿಸಬೇಕೆಂದು ಟೊಂಕ ಕಟ್ಟಿ ನಿಲ್ಲುವುದು ಇನ್ನೂ ದೊಡ್ಡ ದುರಂತವಾಗಿದೆ.

ಕೇರಳದಲ್ಲಿ ಮುಜಾಹಿದ್ ಸಂಘಟನೆಯು ರಾಜಕೀಯ ಕಾರಣಗಳಿಗಾಗಿ ಜಮಾಅತೆ ಇಸ್ಲಾಮಿಯನ್ನು ವಿರೋಧಿಸುತ್ತಿರುವುದು ಸರ್ವವಿಧಿತ ಸತ್ಯ. ಅವರನ್ನೇ 'ತಕ್ಲೀದ್' ಮಾಡಿಕೊಂಡು ತಕ್ಲೀದ್ ವಿರೋಧಿಗಳೆಂದು ಕೊಚ್ಚಿಕೊಳ್ಳುವವರು ಜಮಾಅತನ್ನು ವಿರೋಧಿಸುತ್ತಿರುವುದು ದುರಂತ. 1975–76ರಲ್ಲಿ ಜಮಾಅತ್‌ನ ಮೇಲೆ ನಿಷೇಧವಿದ್ದಾಗ ಕೇರಳದ ಮೌಲವಿಯೊಬ್ಬರು ಕಅಬಾ ಭಿತ್ತಿಹಿಡಿದು, ಇಂದಿರಾಗಾಂಧಿಯವರಿಗೆ ದೀರ್ಘಾಯುಷ್ಯ ನೀಡುವಂತೆಯೂ, ತುರ್ತುಸ್ಥಿತಿ ಮುಂದುವರಿಯಲೆಂದೂ ತನ್ಮೂಲಕ ಜಮಾಅತೆ ಇಸ್ಲಾಮಿಯ ಮೇಲಿರುವ ನಿಷೇಧವೂ ಶಾಶ್ವತವಾಗಿರಲೆಂದೂ ಪ್ರಾರ್ಥಿಸಿದ್ದರಂತೆ. ಅವರ ಅನುಯಾಯಿಗಳು ಜಮಾಅತ್‌ಗೆ ನಿಷೇಧ ಬಯಸುವುದರಲ್ಲಿ ಆಶ್ಚರ್ಯ ಪಡಬೇಕಾಗಿಲ್ಲ.

ಆದರೆ ಜಮಾಅತೆ ಇಸ್ಲಾಮಿಯನ್ನು ನಿಷೇಧಿಸಬೇಕೆಂದು ಮುಜಾಹಿದ್ ಸಂಘಟನೆಯು ಸಂಘಟನಾ ಮಟ್ಟದಲ್ಲಿ ತೀರ್ಮಾನಿಸಿದ್ದಂಬುದನ್ನು ನಂಬಲು ಕಷ್ಟವಿದೆ. ಅವರಲ್ಲೂ ಜಮಾಅತ್‌ನ ಬಗ್ಗೆ ಉತ್ತಮ ಅಭಿಪ್ರಾಯ ಹೊಂದಿರುವ ಧಾರಾಳ ಮಂದಿಯಿದ್ದಾರೆ. ವಿವಿಧ ಕಾರಣಗಳಿಂದಾಗಿ ಅವರು ಜಮಾಅತ್‌ನೊಂದಿಗೆ ಸಹಕರಿಸಲು ಮುಂದೆ ಬರುತ್ತಿಲ್ಲವೆಂಬುದು ಬೇರೆ ಮಾತು. ಜಮಾಅತನ್ನು ನಿಷೇಧಿಸಲು ಹೈ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಲಾಗಿರುವ ಕುರಿತು ಮುಜೀಬ್‌ಗೆ ಸಿಕ್ಕಿದ ಮಾಹಿತಿ ಹೀಗಿದೆ.

ಅಬ್ದುಸ್ಸಮದ್ ವಾಳಕ್ಕಿಲ ಎಂಬೋರ್ವ ವ್ಯಕ್ತಿ ಜಮಾಅತೆ ಇಸ್ಲಾಮಿಯನ್ನು ನಿಷೇಧಿಸಬೇಕೆಂದು ಕೋರಿ ಕೇರಳ ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಈ ಅಬ್ದುಸ್ಸಮದ್ ವಾಳಕ್ಕಿಲ ತನ್ನ ಪ್ರದೇಶದ ಓರ್ವ ಮುಜಾಹಿದ್ ಕಾರ್ಯಕರ್ತರಾಗಿದ್ದಾರೆ. ಈ ದಾವೆ ಬಹಳ ಗಂಭೀರ ಸ್ವರೂಪದ್ದಾಗಿದ್ದು ಈ ಬಗ್ಗೆ ವಾದಿಸುವುದರಲ್ಲಿ ಮುಜಾಹಿದ್‌ಗಳ ಮತ್ತು ಖಾದಿಯಾನಿಗಳ ಬೆಂಬಲವಿದೆಯೆಂದು ಸಮರ್ಥಿಸಿ ಅಬ್ದುಸ್ಸಮದ್ ವಾಳಕ್ಕಿಲ ಫೆ. 7ರ 'ಕೇರಳ ಶಬ್ದಂ' ಎಂಬ ವಾರಪತ್ರಿಕೆಯಲ್ಲಿ ಲೇಖನ ಬರೆದಿದ್ದಾರೆ. ಈ ಲೇಖನ ಪ್ರಕಟವಾಗಿ ಬಹಳ ಸಮಯವಾದರೂ ಅದಕ್ಕೆ ಅಧಿಕೃತವಾಗಿ ಮುಜಾಹಿದ್‌ಗಳ ಕಡೆಯಿಂದ ನಿರಾಕರಣೆ ಬಂದಿಲ್ಲ. ಒಟ್ಟಿನಲ್ಲಿ ಈ ವಿಷಯವು ಜಮಾಅತ್‌ನ ಸುಳ್ಳು ಸೃಷ್ಟಿಯೆಂದಾದರೆ, ಜಮಾಅತನ್ನು ನಿಷೇಧಿಸಬೇಕೆಂಬ ವಿಷಯದಲ್ಲಿ ತಮ್ಮ ಯಥಾರ್ಥ ನಿಲುವೇನೆಂದು ಸಲಫಿಗಳು ವ್ಯಕ್ತಪಡಿಸಬೇಕು. ಒಂದು ವೇಳೆ ಜಮಾಅತನ್ನು ನಿಷೇಧಿಸಲಾದರೆ ಮುಜಾಹಿದ್ (ಸಲಫಿ) ಸಂಘಟನೆಗಳು ಅದನ್ನು ವಿರೋಧಿಸುವುದೋ ಅಥವಾ ಬೆಂಬಲಿಸುವುದೋ ಎಂಬುದನ್ನು ವ್ಯಕ್ತಪಡಿಸಬೇಕು.

## ಮುಹ್ಯಿದ್ದೀನ್‌ಗಳು

**ಹಳ್ಳಿ ದಿಲ್ಲಿ ಎಲ್ಲಿಯಾದರೂ**
**ಇರುವವರೆಲ್ಲಾ ಮನುಷ್ಯರೇ**
**ಪರ್ವ ಯಾವುದಾದರೂ**
**ಜನರೆಲ್ಲ ಅವರೇ!**
**ಅದೇ ಸತ್ಯ ನಿಷೇಧಿಗಳು,**
**ವಿಶ್ವಾಸಿಗಳು,**
**ನಡುವೆ ಕಪಟ ವಿಶ್ವಾಸಿಗಳು,**
**ಅದೂ ಅಲ್ಲದೆ**
**ಧರ್ಮನಿಷ್ಠರು, ದ್ರೋಹಿಗಳು**
**ಕೆಟ್ಟು ಹೋದಾಗ ಹುಟ್ಟುವರು**
**ಅಲ್ಲಲ್ಲಿ ಮುಹ್ಯಿದ್ದೀನ್‌ಗಳು***

**ಅಬೂ ಝುಯೀಮಾ,**
**ಪಕ್ಕಲಡ್ಕ**

* ಧರ್ಮವನ್ನು ಪುನಃ ಜೀವಂತಗೊಳಿಸುವವರು

# ಮೌಲಾನಾ ಕಾಲಮ್

## ತರಾವೀಹ್– 2



ಮೌಲಾನ ಯಹ್ಯಾ ತಂಙಳ್ ಮದನಿ

ಇಮಾಮ್ ಬುಖಾರಿಯವರ(ರ) ಗ್ರಂಥದಲ್ಲಿ ಪ್ರವಾದಿಯವರ(ಸ) ನಮಾಝ್ ಹೇಗಿತ್ತು, ಎಷ್ಟು ರಕಅತ್ತಾಗಿತ್ತು ಎಂಬ ತಲೆಬರಹದಡಿಯಲ್ಲಿ ಈ ರೀತಿ ವಿವರಿಸಲಾಗಿದೆ: ಅಬ್ದುಲ್ಲಾಹ್ ಬಿನ್ ಉಮರ್‌ರವರು(ರ) ಹೇಳುತ್ತಾರೆ– ಓರ್ವರು ಪ್ರವಾದಿಯವರ ಬಳಿಗೆ ಬಂದು ರಾತ್ರಿಯ ನಮಾಝ್‌ನ ರೀತಿಯ ಕುರಿತು ಕೇಳಿದರು. ಆಗ ಪ್ರವಾದಿಯವರು(ಸ) ಎರಡೆರಡು ರಕಅತ್‌ನಂತೆ ಫಜ್ರ್ ನಮಾಝಿನ ತನಕವೂ ನಿರ್ವಹಿಸಿರಿ. ಫಜ್ರ್‌ನ ಅದಾನ್‌ನ ಸಮಯವಾಗಿದೆಯೆಂದಾಗ ಒಂದು ರಕಅತ್ ವಿತ್ರ್ ನಮಾಝ್‌ನೊಂದಿಗೆ ಮುಕ್ತಾಯಗೊಳಿಸಿರಿ ಎಂದು ಹೇಳಲಾಗಿದೆ. ಆದ್ದರಿಂದ ಈ ನಮಾಝ್‌ಗೆ ರಕಅತ್‌ನಲ್ಲಿ ಶರ್ತವಿಲ್ಲವೆಂಬುದನ್ನು ತಿಳಿಯಬಹುದು. ಇಮಾಮ್ ಬುಖಾರಿಯವರ(ರ) ವರದಿಯಂತೆ ಇಬ್ನು ಅಬ್ಬಾಸ್(ರ) ಹೇಳುತ್ತಾರೆ– ರಾತ್ರಿ ನಮಾಝ್ 13ರಕಅತ್ ಆಗಿದೆ.

ಮಸ್‌ರೂಕ್‌ರವರೊಡನೆ(ರ) ತರಾವೀಹ್ ನಮಾಝ್‌ನ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಆಯಿಶಾ(ರ) ಹೇಳುತ್ತಾರೆ– ಪ್ರವಾದಿಯವರು(ಸ) ಕೆಲವೊಮ್ಮೆ 7, ಕೆಲವೊಮ್ಮೆ 9, ಇನ್ನು ಕೆಲವೊಮ್ಮೆ 11 ರಕಅತನ್ನು ಫಜ್ರ್‌ನ ಅದಾನ್ ಸಮಯವಾಗುವ ತನಕ ಆರೋಗ್ಯಕ್ಕೆ ಹೊಂದಿಕೊಂಡು ನಮಾಝ್ ನಿರ್ವಹಿಸುತ್ತಿದ್ದರು. ಆ ಕಾಲದಲ್ಲಿ ಬೆತ್ತ ಹಿಡಿದು ನಮಾಝ್ ಮಾಡುತ್ತಿದ್ದರು ಎಂಬುದನ್ನು ವರದಿಯಲ್ಲಿ ತಿಳಿಸಲಾಗಿದೆ. ಆಯಿಶಾರ(ರ) ಮತ್ತೊಂದು ವರದಿಯಲ್ಲಿ ಈ ರೀತಿ ಹೇಳಲಾಗಿದೆ– ರಮಝಾನ್ ಹಾಗೂ ರಮಝಾನ್ ಅಲ್ಲದ ಸಂದರ್ಭಗಳಲ್ಲಿ ಪ್ರವಾದಿಯವರ(ಸ) ನಮಾಝ್ ಹೇಗಿತ್ತು ಎಂದು ಆಯಿಶಾರಲ್ಲಿ(ರ) ಕೇಳಿದಾಗ ರಮಝಾನ್‌ನಲ್ಲಿ ಆಗಲಿ, ರಮಝಾನ್ ಅಲ್ಲದ ಸಂದರ್ಭದಲ್ಲಿ ಆಗಲಿ 11 ರಕಅತ್‌ಗಿಂತ ಹೆಚ್ಚು ರಾತ್ರಿ ನಮಾಝನ್ನು ಪ್ರವಾದಿಯವರು(ಸ) ಮಾಡಲಿಲ್ಲ. ಆಯಿಶಾ(ರ) ಹೇಳುತ್ತಾರೆ– ಪ್ರವಾದಿಯವರು(ಸ) 8 ರಕಅತ್ ನಮಾಝ್ ಹೇಗೆ ನಿರ್ವಹಿಸುತ್ತಿದ್ದರು ಎಂದರೆ 4 ರಕಅತ್‌ನ ನಂತರ ನಾಲ್ಕು ರಕಅತ್ ನಿರ್ವಹಿಸುತ್ತಿದ್ದರು. ಅದರ ಸೌಂದರ್ಯ ಹಾಗೂ ದೀರ್ಘತೆಯನ್ನು ವರ್ಣಿಸಲು ಸಾಧ್ಯವಾಗದು. ನಂತರ 3 ರಕಅತ್ ನಿರ್ವಹಿಸುತ್ತಿದ್ದರು. ಒಮ್ಮೆ ಆಯಿಶಾ(ರ), ಪ್ರವಾದಿಯವರೊಂದಿಗೆ(ಸ) ವಿತ್ರ್ ನಿರ್ವಹಿಸುವ ಮೊದಲು ನಿದ್ರಿಸುವಿರಾ ಎಂದು ಕೇಳಿದಾಗ ನನ್ನ ಕಣ್ಣು ನಿದ್ರಿಸಿದರೂ ನನ್ನ ಮನಸ್ಸು ಹಾಗೂ ಹೃದಯ ನಿದ್ರಿಸದು ಎಂದು ಹೇಳಿದರು. ನಮಾಝ್‌ನ ಮಹತ್ವ ವಿವರಿಸುತ್ತಾ, ಅದಕ್ಕೊಂದು ಮಿತಿಯನ್ನು 11 ರಕಅತ್ತಾಗಿ ನಿರ್ಣಯಿಸಿದರು. ಇಲ್ಲಿ ನಾವು ಈ ಹದೀಸ್‌ಗೆ ಪೂರಕವಾಗಿ ಹುದೈಫಾರಿಂದ(ರ) ಮುಸ್ಲಿಮ್ ವರದಿ ಮಾಡಿದ ಹದೀಸ್‌ನಲ್ಲಿ, ಹುದೈಫಾ ಪ್ರವಾದಿಯವರೊಂದಿಗೆ ನಮಾಝ್ ಮಾಡಿದರು. ಹುದೈಫಾ(ರ) ಈ ನಮಾಝಿನ ಸೌಂದರ್ಯದ ಹಾಗೂ ದೀರ್ಘತೆಯ ಕುರಿತು ವಿವರಿಸುತ್ತಾ ಒಂದು ರಕಅತ್‌ನಲ್ಲಿ ಸೂರಃ ಅಲ್‌ಬಕರ, ಆಲಿ ಇಮ್ರಾನ್, ಅನ್ನಿಸಾ ಓದುತ್ತಿದ್ದರು. ಕುರ್‌ಆನ್ ಪಾರಾಯಣದ ಸಮಯವನ್ನು ರುಕೂಅ್‌ನಲ್ಲೂ ರುಕೂಅ್‌ನ ಸಮಯವನ್ನು ಸುಜೂದ್‌ನಲ್ಲೂ ನಂತರ ಮಧ್ಯದಲ್ಲಿ ಕುಳಿತಾಗ ವ್ಯಯಿಸುತ್ತಿದ್ದರು. ಆ ಸಂದರ್ಭಗಳಲ್ಲಿ ತಸ್ಬೀಹ್ ಮಾಡುತ್ತಿದ್ದರು. ಇಂತಹ ಸುದೀರ್ಘವಾದ, ಸುಂದರವಾದ ನಮಾಝನ್ನು ಪ್ರವಾದಿಯವರು(ಸ) ಆರಂಭ ಕಾಲದಲ್ಲಿ ನಿರ್ವಹಿಸುತ್ತಿದ್ದರು. ಇಬ್ನು ಅಬ್ಬಾಸ್‌ರಿಂದ ವರದಿಯಾದ 13 ರಕಅತ್, ಆಯಿಶಾರ(ರ) ವರದಿಯ 6, ಕೆಲವು ಕಡೆ ಸುದೀರ್ಘವಾದ 4

**ನಿರೂಪಣೆ: ಸಲೀಮ್ ಬೋಳಂಗಡಿ**

ಇವೆಲ್ಲವುಗಳನ್ನು ಒಟ್ಟು ಸೇರಿಸಿ ಉಮರ್(ರ) 23 ರಕಅತ್ ಮಾಡಿರಬಹುದು ಎಂಬುದಾಗಿ ಅರ್ಥೈಸಬಹುದಾಗಿದೆ. ಇದರಲ್ಲಿ ಉಮರ್‌ರಿಗೆ(ರ) ಸ್ವಾರ್ಥವಿರಲಿಲ್ಲ. ಇದನ್ನು ಕೆಟ್ಟ ಬಿದ್‌ಅತ್ ಎಂದು ಯಾವ ವಿದ್ವಾಂಸರೂ ಹೇಳಲಿಲ್ಲ.

ಸುನ್ನತ್ತನ್ನು ಹೆಚ್ಚಿಸುವ ಕುರಿತು ಇಸ್ಲಾಮಿನಲ್ಲಿ ಎಲ್ಲಿಯೂ ತಡೆ ವಿಧಿಸಲಾಗಿಲ್ಲ. ಉಮರ್(ರ) ತರಾವೀಹ್ ನಮಾಝನ್ನು 23 ರಕಅತ್‌ಗೆ ಹೆಚ್ಚಿಸಿದ್ದನ್ನು ಯಾವುದೇ ವಿದ್ವಾಂಸರೂ ನಿಷೇಧಿಸಿಲ್ಲ. ಆದ್ದರಿಂದ ಹೆಚ್ಚು ಗೌರವದಿಂದ ಈ ನಮಾಝನ್ನು ನಿರ್ವಹಿಸಬೇಕಾಗಿದೆ. ಅಬ್ದುರ್ರಹ್ಮಾನ್ ಬಿನ್ ಅಬ್ದಿ(ಅಲ್‌ಖಾರಿ)ಯವರು ಹೇಳುತ್ತಾರೆ– ನಾನು ಉಮರ್‌ರ(ರ) ಜೊತೆ ರಮಝಾನ್‌ನಲ್ಲಿ ಮಸೀದಿಗೆ ಹೋಗುತ್ತಿರುವಾಗ ಜನರು ಬೇರೆ ಬೇರೆ ಗುಂಪಾಗಿ ನಮಾಝ್ ನಿರ್ವಹಿಸುತ್ತಿರುವುದನ್ನು ಕಂಡು ಇವರನ್ನೆಲ್ಲಾ ಒಂದೇ ಇಮಾಮರ ಅಡಿಯಲ್ಲಿ ನಮಾಝ್ ಮಾಡಿಸಿದರೆ ಹೇಗೆ ಎಂದು ಕೇಳಿದರು. ನಂತರ ಎಲ್ಲರನ್ನೂ ಸೇರಿಸಿ ಉಬೈ ಬಿನ್ ಕಅಬ್ ಎಂಬ ಮಹಾ ವಿದ್ವಾಂಸರನ್ನು ಇಮಾಮರನ್ನಾಗಿ ನೇಮಿಸಿ ನಮಾಝ್ ಮಾಡಿಸಿದರು. ನಂತರ ಇನ್ನೊಮ್ಮೆ ಮಸೀದಿಗೆ ಹೋದಾಗ ಒಂದೇ ಇಮಾಮರ ಅಡಿಯಲ್ಲಿ ನಮಾಝ್ ಮಾಡುತ್ತಿದ್ದರು. ಇದನ್ನು ನೋಡಿದ ಉಮರ್(ರ) ಇದು ಉತ್ತಮವಾದ ಬಿದ್‌ಅತ್ (ನಿಅ್‌ಮತುಲ್ ಬಿದ್‌ಅ) ಆಗಿದೆ ಎಂದೂ ಹೇಳಿದರು. ಆದರೆ ಇದನ್ನು ಮಧ್ಯ ರಾತ್ರಿ ಎದ್ದು ನಿರ್ವಹಿಸುವುದು ಉತ್ತಮ. ಆದರೂ ಜನರು ಇಶಾದ ಬಳಿಕ ನಮಾಝ್ ನಿರ್ವಹಿಸುತ್ತಿದ್ದರು. ಕಾರಣ ಪ್ರವಾದಿವರ್ಯರು(ಸ) ಮೂರು ದಿನ ಇಶಾದ ಬಳಿಕವೇ ನಮಾಝ್ ನಿರ್ವಹಿಸಿದ್ದರು. ಪ್ರವಾದಿಯವರು(ಸ) ಇಶಾಅ್‌ನ ನಂತರ ಮಸೀದಿಯಲ್ಲಿ ನಮಾಝ್ ಮಾಡಿರುವುದರಿಂದ ಜನರು ಮಸೀದಿಗೆ ಬಂದು ನಿರ್ವಹಿಸುವುದನ್ನು ಅವರು ತಡೆಯಲಿಲ್ಲ.

ಹೀಗೆ ಒಂದೇ ಇಮಾಮರ ಹಿಂದೆ ನಿಂತು ತರಾವೀಹ್ ನಮಾಝ್ ಮಾಡಲು ಆರಂಭವಾಯಿತು. ಇಸ್ಲಾಮ್‌ನ ಹಿತದೃಷ್ಟಿಯಿಂದ ಉಮರ್(ರ) ಮಾಡಿದ ಉತ್ತಮ ಬಿದ್‌ಅತ್ ಇದಾಗಿದೆ. ಕೆಲವು ಹದೀಸ್‌ಗಳಲ್ಲಿ ಈ ರೀತಿ ಹೇಳಲಾಗಿದೆ. ಉಮರ್‌ರವರು(ರ) ಸ್ತ್ರೀಯರಿಗೊಬ್ಬರು ಮತ್ತು ಪುರುಷರಿಗೊಬ್ಬರು ಇಮಾಮರನ್ನು ನೇಮಿಸಿದರು. ಉಬೈ ಬಿನ್ ಕಅಬ್‌ರನ್ನು ಗಂಡಸರಿಗೂ, ತಮೀಮುದ್ದಾರಿಯವರನ್ನು ಹೆಂಗಸರಿಗೂ ಇಮಾಮರನ್ನಾಗಿ ನೇಮಿಸಿದ್ದರು. ಅಂದರೆ ಒಂದೇ ರಾತ್ರಿಯಲ್ಲಿ ಬೇರೆ ಬೇರೆಯಾಗಿ ನಮಾಝ್ ಮಾಡಿಸಿದರು. (ಮುಂದುವರಿಯುವುದು)

# ಕುರ್‌ಆನ್ ಅಧ್ಯಯನ 523

## ಅಧ್ಯಾಯ: 4 ಅನ್ನಿಸಾ

### ವಚನ: 75

ವಮಾಲಕುಮ್= ನಿಮಗೇನಾಗಿದೆ, ಯಾವ ಸಮರ್ಥನೆಯಿದೆ, ಲಾ ತುಕಾತಿಲೂನ= ನೀವು ಯುದ್ಧ ಮಾಡುವುದಿಲ್ಲ (ಮಾಡದಿರಲು), ಫೀ ಸಬೀಲಿಲ್ಲಾಹಿ= ಅಲ್ಲಾಹನ ಮಾರ್ಗದಲ್ಲಿ, ವಲ್ ಮುಸ್ತದ್‌ಅಫೀನ= ಪೀಡಿತರ (ಮರ್ದಿತರ) ವಿಮೋಚನೆಗಾಗಿ ಮಿನರ್ರಿಜಾಲಿ= ಪುರುಷರ, ವನ್ನಿಸಾಇ= ಸ್ತ್ರೀಯರ, ವಲ್‌ವಿಲ್ದಾನಿ= ಮಕ್ಕಳಲ್ಲಿರುವ, ಅಲ್ಲದೀನ ಯಕೂಲೂನ= ಅವರು ಪ್ರಾರ್ಥಿಸುತ್ತಾರೆ, ರಬ್ಬನಾ= ನಮ್ಮ ಪ್ರಭೂ, ಅಖ್ರಿಜ್‌ನಾ= ನಮ್ಮನ್ನು ಹೊರಡಿಸು, ವಿಮೋಚನೆಗೊಳಿಸು, ಮಿನ್ ಹಾದಿಹಿಲ್ ಕರ್ಯತಿ= ಈ ನಾಡಿನಿಂದ, ಅಝ್ಝಾಲಿಮಿ ಅಹ್ಲುಹಾ= ಅದರ ನಿವಾಸಿಗಳು (ಜನರು, ಆಡಳಿತಗಾರರು) ಮರ್ದಕರಾಗಿರುವ, ಆಕ್ರಮಿಗಳಾಗಿರುವ, ವಜ್‌ಅಲ್‌ಲನಾ= ನಮಗೆ ನೀನು ನಿಶ್ಚಯಿಸು, ನೇಮಿಸು, ಮಿನ್‌ಲದುಂಕ= ನಿನ್ನ ವತಿಯಿಂದ, ವಲಿಯ್ಯನ್= ಓರ್ವ ರಕ್ಷಕನನ್ನು, ಅಧಿಕಾರಿಯನ್ನು, ವಜ್‌ಅಲ್‌ಲನಾ= ನಮಗೆ ನೀನು ಮಾಡು(ನೇಮಿಸು), ಮಿನ್‌ಲದುಂಕ= ನಿನ್ನ ವತಿಯಿಂದ, ನಸೀರನ್= ಓರ್ವ ಸಹಾಯಕನನ್ನು.

**75: ಅಲ್ಲಾಹನ ಮಾರ್ಗದಲ್ಲಿ ಅಥವಾ ಪೀಡಿತರು ಮತ್ತು ಮರ್ದಿತ ಪುರುಷರು, ಸ್ತ್ರೀಯರು ಹಾಗೂ ಮಕ್ಕಳ ವಿಮೋಚನೆಗಾಗಿ ನೀವು ಯುದ್ಧ ಮಾಡದಿರಲು ಯಾವ ಸಮರ್ಥನೆಯಿದೆ? ಅವರು ಪ್ರಾರ್ಥಿಸುತ್ತಲಿದ್ದರು. "ಪ್ರಭೂ! ಮರ್ದಕರು ಅಧಿಕಾರಿಗಳಾಗಿರುವ, ಈ ನಾಡಿನಿಂದ ನಮ್ಮನ್ನು ವಿಮೋಚನೆಗೊಳಿಸು. ನಿನ್ನ ವತಿಯಿಂದ ನಮಗೊಬ್ಬ ರಕ್ಷಕ ಮಿತ್ರನನ್ನು ನೇಮಿಸು, ನಿನ್ನ ವತಿಯಿಂದ ಓರ್ವ ಸಹಾಯಕನನ್ನೂ ನಮಗೆ ನೇಮಿಸು.**

75: ಈ ವಚನವು ಹಿಂದಿನ ವಚನಗಳಲ್ಲಿ ಆಜ್ಞಾಪಿಸಿದ ಯುದ್ಧದ ಗುರಿ ಮತ್ತು ಸಮರ್ಥನೆಯನ್ನು ವಿವರಿಸುತ್ತದೆ. ನಿಮಗೆ ಯಾವ ಸಮರ್ಥನೆಯಿದೆ ಎಂಬ ಆರಂಭ ವಚನವು ಆಶ್ಚರ್ಯ ಸೂಚಕವಾಗಿದೆ. ಸಾಮಾನ್ಯ ಸ್ವಭಾವ ಮತ್ತು ಸಂಪ್ರದಾಯಕ್ಕೆ ವಿರುದ್ಧವಾದ ವಿಷಯಗಳ ಬಗ್ಗೆ ಅಚ್ಚರಿ ವ್ಯಕ್ತಪಡಿಸಲಾಗುತ್ತದೆ. ಅಲ್ಲಾಹನ ಮಾರ್ಗದಲ್ಲಿಯೂ ಮರ್ದಿತರ ವಿಮೋಚನೆಗಾಗಿಯೂ ಯುದ್ಧ ಮಾಡದಿರಲು ನಿಮಗೆ ಯಾವ ಸಮರ್ಥನೆಯಿದೆ ಎಂಬ ಅಚ್ಚರಿ ಸೂಚಕ ಪ್ರಶ್ನೆಯ ಧ್ವನಿಯು ಅದಕ್ಕೆ ಯಾವುದೇ ಖಾಸಗಿ ಸಮರ್ಥನೆಯಿಲ್ಲ. ಮಾತ್ರವಲ್ಲ ಅಲಾಹನ ಮಾರ್ಗವನ್ನು ಉದ್ಧಟತನದಿಂದ ತಡೆಯುವ ಅಧಾರ್ಮಿಕ ಶಕ್ತಿಗಳ ವಿರುದ್ಧ ಅವರಿಂದ ಮರ್ದಿಸಲ್ಪಟ್ಟವರ ವಿಮೋಚನೆಗಾಗಿ ಯುದ್ಧ ಅನಿವಾರ್ಯವಾದಾಗ ಯುದ್ಧಕ್ಕೆ ಸಿದ್ಧವಾಗುವುದೆಂಬುದು ಮಾನವೀಯ ಸ್ವಭಾವ ಮತ್ತು ಸಾಮಾನ್ಯ ಸಂಪ್ರದಾಯವಾಗಿದೆ. ಸತ್ಯವಿಶ್ವಾಸಿಗಳು ಆ ಬಗ್ಗೆ ತೋರುವ ಹಿಂಜರಿಕೆಯು ಅಚ್ಚರಿದಾಯಕವೆಂಬ ಸೂಚನೆಯೂ ಇದರಲ್ಲಿ ಅಡಕವಾಗಿದೆ.

'ಅಲ್ ಕಿತಾಲು ಫೀ ಸಬೀಲಿಲ್ಲಾಹಿ' (ಅಲ್ಲಾಹನ ಮಾರ್ಗದಲ್ಲಿರುವ ಯುದ್ಧ) ಏನೆಂಬುದನ್ನು ಪ್ರವಾದಿಯವರು(ಸ) ಪ್ರಸಿದ್ಧ ಹದೀಸ್ ಮೂಲಕ ವಿವರಿಸಿದ್ದಾರೆ, "ಅಲ್ಲಾಹನ ವಚನವನ್ನು ಉನ್ನತಿಯಲ್ಲಿರಿಸಲಿಕ್ಕಾಗಿ ಯುದ್ಧ ಮಾಡುವಾತನು ಅಲ್ಲಾಹನ ಮಾರ್ಗದಲ್ಲಿದ್ದಾನೆ." ಅಲ್ಲಾಹನ ವಚನವೆಂದರೆ ಕಲಿಮತುತ್ತೌಹೀದ್ ಮತ್ತು ಅದರ ಬುನಾದಿಯಲ್ಲಿರುವ ಆದರ್ಶ ವಿಶ್ವಾಸ ಮತ್ತು ವಿಧಿ–ನಿಷೇಧಗಳಾಗಿವೆ. ಅದನ್ನು ಉನ್ನತಗೊಳಿಸುವುದೆಂದರೆ ಅದು ವ್ಯಕ್ತಿ ಮತ್ತು ಸಮಾಜದ ಆದರ್ಶ ವಿಶ್ವಾಸ ಭಾವ ವಿಚಾರ ಮತ್ತು ಕರ್ಮಗಳಲ್ಲಿ ನಿಯಾಮಕ ಶಕ್ತಿಯಾಗಿ ಅದಕ್ಕೆ ಪ್ರಭುತ್ವ ದೊರೆಯುವುದಾಗಿದೆ.

ಇಸ್ಲಾಮಿನ ಆದರ್ಶ ವಿಶ್ವಾಸ ಅಥವಾ ವ್ಯವಸ್ಥೆಗಳನ್ನು ಜನರಿಂದ ಅಂಗೀಕೃತಗೊಳಿಸಲಿಕ್ಕಾಗಿ ಯುದ್ಧ ಮಾಡುವುದಲ್ಲ. ಬದಲಾಗಿ ಇಸ್ಲಾಮಿೀ ತತ್ವಾದರ್ಶ ಮತ್ತು ಕರ್ಮ ಮಾರ್ಗಗಳನ್ನು ಬಲಾತ್ಕಾರದಿಂದ ತಡೆಯುವ ವೈರಿಗಳ ವಿರುದ್ಧ, ಅವುಗಳ ಔನ್ನತ್ಯ ಮತ್ತು ಪ್ರಭುತ್ವವನ್ನು ಅಂಗೀಕರಿಸುವವರಿಗೆ ಆ ಪ್ರಕಾರ ಬದುಕುವ ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡುವುದಾಗಿದೆ. ಈ ಹಿಂದೆ ಅಲ್‌ಬಕರ ಅಧ್ಯಾಯದ 190ನೇ ವಚನದಲ್ಲಿ ಅಲ್ಲಾಹನು ಅದನ್ನು ಹೀಗೆ ಸ್ಪಷ್ಟಪಡಿಸಿದ್ದಾನೆ. "ನಿಮ್ಮೊಡನೆ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವೂ ಯುದ್ಧ ಮಾಡಿರಿ. ಆದರೆ ನೀವು ಅತಿರೇಕವೆಸಗಬಾರದು." ಅಲ್ಲಾಹನ ಮಾರ್ಗವನ್ನು ಸ್ವೀಕರಿಸಿದವರ ವಿರುದ್ಧ ಯುದ್ಧ ಸಾರಿದವರೊಡನೆ ವಿಶ್ವಾಸಿಗಳು ಯುದ್ಧ ಮಾಡಬೇಕು. ಅಲ್ಲಾಹನ ಮಾರ್ಗವನ್ನು ಗ್ರಹಿಸದವರು ಅಥವಾ ಗ್ರಹಿಸಿಯೂ ತಿರಸ್ಕರಿಸುವವರೊಂದಿಗಲ್ಲ. ಯುದ್ಧಕ್ಕೆ ಕೈಹಾಕದವರೊಡನೆ ಯುದ್ಧ ಮಾಡಬಾರದು. ಅಲ್ಲಾಹನ ಮಾರ್ಗದಿಂದ ದೂರವಿರುವವರು ತೋರಿಸುವಂಥ ವಿರೋಧವನ್ನೇ ಅವರ ವಿರುದ್ಧ ಪ್ರಯೋಗಿಸಬೇಕು. ಆಯುಧದಿಂದ ಎದುರಿಸುವುದಿದ್ದರೆ ಯುದ್ಧವನ್ನೇ ಮಾಡಬೇಕು. ತತ್ವಸಿದ್ಧಾಂತಗಳಿಂದ ವಿರೋಧಿಸುವುದಿದ್ದರೆ ಅವುಗಳಿಂದಲೇ ಎದುರಿಸಬೇಕು. ಸಾಹಿತ್ಯ ಕಲೆಗಳಿಂದಾಗಿದ್ದರೆ ಅವುಗಳಿಂದ. ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರತಿರೋಧ ಮಾರ್ಗವನ್ನು ಯುಕ್ತಿಯಿಂದ ಆಯ್ಕೆ ಮಾಡಬೇಕು. ಯುದ್ಧ ಅಥವಾ ಕಾದಾಟವು ಅಲ್ಲಾಹನ ಮಾರ್ಗಕ್ಕೆ ಜನರನ್ನು ಸೇರಿಸುವ ಉಪಾಧಿಗಳಲ್ಲ. ಅದಕ್ಕಾಗಿ ಸಂದೇಶ ಮತ್ತು ಅಲ್ಲಾಹನ ವಚನಗಳ ಪ್ರಚಾರ ಮಾಡಬೇಕು. ಕೇವಲ ಜನರಿಗೆ ಸಂದೇಶ ತಲುಪಿಸುವುದೇ ಪ್ರವಾದಿಗಳ ಹೊಣೆಗಾರಿಕೆಯಾಗಿತ್ತು. ಅದನ್ನೇ ಅಲ್ಲಾಹನು ಅವರಿಗೆ ಆಜ್ಞಾಪಿಸಿದ್ದನು, "ಓ ಪ್ರವಾದಿಗಳೇ, ನಿಮ್ಮ ಪ್ರಭುವಿನಿಂದ ನಿಮಗೆ ಅವತೀರ್ಣವಾಗಿರುವುದನ್ನು ಬೋಧಿಸಿರಿ."



"ನಿಮ್ಮ ಜನರು– ಬೆನ್ನು ತೋರಿಸುವುದಿದ್ದರೆ ತಿಳಿದಿರಲಿ, ಕೇವಲ ಸಂದೇಶ ತಲುಪಿಸುವುದೇ ನಮ್ಮ ಪ್ರವಾದಿಯ ಕರ್ತವ್ಯವಾಗಿದೆ." (5:92)

"ಸಂದೇಶ ತಲುಪಿಸುವ ಹೊರತು ಅಲ್ಲಾಹನ ಪ್ರವಾದಿಗಳಿಗೆ ಬೇರೆ ಹೊಣೆಗಾರಿಕೆಯಿದೆಯೇ?" (16:35)




# ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ಅಲ್ಲಾಹನ ನೆರಳಿನ ವಕ್ತಾರರು

**373.** ಅಬೂಹುರೈರಾ ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು: ಅಲ್ಲಾಹನ ನೆರಳಲ್ಲದೆ ಬೇರಾವ ನೆರಳೂ ಇಲ್ಲದ ಆ ದಿನ ಏಳು ಮಂದಿಗೆ ಅಲ್ಲಾಹನು ತನ್ನ ನೆರಳಿನ ಆಶ್ರಯ ನೀಡುವನು. (1) ನ್ಯಾಯವಂತ ಆಡಳಿತಗಾರ (2) ಅಲ್ಲಾಹನ ಆರಾಧನೆಯಲ್ಲೇ ಬೆಳೆದ ಯುವಕ (3) ತನ್ನ ಮನಸ್ಸನ್ನು ಮಸೀದಿಯೊಂದಿಗೆ ಜೋಡಿಸಿದ ವ್ಯಕ್ತಿ (4) ಅಲ್ಲಾಹನಿಗಾಗಿ ಪರಸ್ಪರ ಭೇಟಿಯಾಗುವ ಮತ್ತು ಬೇರ್ಪಡುವ ಇಬ್ಬರು ಸ್ನೇಹಿತರು. (5) ಓರ್ವ ಸುಂದರಿಯಾದ ಸ್ತ್ರೀ ವ್ಯಭಿಚಾರಕ್ಕಾಗಿ ಕರೆದಾಗ ನಾನು ಅಲ್ಲಾಹನನ್ನು ಭಯ ಪಡುತ್ತೇನೆಂದು ಹೇಳಿ ನಿರಾಕರಿಸುವ ಚಾರಿತ್ರ್ಯವಂತ ವ್ಯಕ್ತಿ (6) ಬಲಗೈ ನೀಡಿದ್ದು ಎಡಗೈಗೂ ತಿಳಿಯದಷ್ಟು ಗುಪ್ತವಾಗಿ ದಾನ ಮಾಡುವ ವ್ಯಕ್ತಿ (7) ಏಕಾಂತದಲ್ಲಿ ಅಲ್ಲಾಹನನ್ನು ಸ್ಮರಿಸುವಾಗ ಕಣ್ಣೀರಿಳಿಸುವ ವ್ಯಕ್ತಿ.

## ಅಲ್ಲಾಹನ ಆತಿಥ್ಯ

**374.** ಅಬೂಹುರೈರಾ ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು: ಬೆಳಿಗ್ಗೆ ಮತ್ತು ಸಂಜೆ ಮಸೀದಿಗೆ ಹೋಗುವ ವ್ಯಕ್ತಿಗೆ ಅಲ್ಲಾಹನು ಸ್ವರ್ಗದಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಗೌರವಾರ್ಹ ಆತಿಥ್ಯವನ್ನು ಸಿದ್ಧಗೊಳಿಸಿಟ್ಟಿದ್ದಾನೆ.

## ಜಮಾಅತ್ ನಡೆಯುತ್ತಿರುವಾಗ ಬೇರೆ ನಮಾಝ್

**375.** ಅಝ್ದ್‌ಗೋತ್ರದ ಅಬ್ದುಲ್ಲಾ ಬಿನ್ ಮಾಲಿಕ್ ಬಿನ್ ಬುಹೈನಾ ಹೇಳುತ್ತಾರೆ- ನಮಾಝ್‌ಗಾಗಿ ಜಮಾಅತ್ ನಿಂತಿತ್ತು. ಆಗ ಒಬ್ಬ ವ್ಯಕ್ತಿ ಎರಡು ರಕಅತ್ ನಮಾಝ್ ನಿರ್ವಹಿಸುವುದನ್ನು ಪ್ರವಾದಿ(ಸ) ಕಂಡರು. ನಮಾಝ್ ಮುಗಿದಾಗ ಜನರು ಅವನನ್ನು ಸುತ್ತುವರಿದರು. ಪ್ರವಾದಿ(ಸ) ಅವನೊಂದಿಗೆ ಕೇಳಿದರು- ಬೆಳಿಗ್ಗೆ ನಾಲ್ಕು ರಕಅತ್ ಇದೆಯೇ, ಬೆಳಿಗ್ಗೆ ನಾಲ್ಕು ರಕಅತ್ ಇದೆಯೇ?

## ಅನುಕರಣೆ

**376.** ಆಯಿಶಾ(ರ) ವರದಿ ಮಾಡುತ್ತಾರೆ- ಪ್ರವಾದಿ(ಸ) ಮರಣ ಸಂಕಟದಲ್ಲಿದ್ದರು. ನಮಾಝ್‌ನ ಸಮಯವಾಯಿತು. ಅದಾನ್ ಕೊಡಲಾಯಿತು. ಪ್ರವಾದಿ(ಸ) ಜನರಿಗೆ ನಮಾಝ್ ಮಾಡಿಸುವಂತೆ ಅಬೂಬಕರ್‌ರಿಗೆ ಆದೇಶಿಸಿರಿ ಎಂದರು. ಜನರೆಂದರು- ಅಬೂಬಕರ್ ತುಂಬಾ ಮೃದು ಮನಸ್ಸಿನವ ರಾಗಿದ್ದಾರೆ. ಪ್ರವಾದಿವರ್ಯರ ಸ್ಥಳದಲ್ಲಿ ನಿಂತು ನಮಾಝ್ ಮಾಡಿಸಲಾರರು. ಆದರೆ ಪ್ರವಾದಿವರ್ಯರು ಅದನ್ನೇ ಆವರ್ತಿಸಿ ಹೇಳಿದರು. ಜನರೂ ಅದೇ ಉತ್ತರ ನೀಡಿದರು. ಪ್ರವಾದಿ(ಸ) ಅದೇ ಮಾತನ್ನು ಪುನರಾವರ್ತಿಸುತ್ತಾ, ಮಹಿಳೆಯರೇ! ನೀವು ಖಂಡಿತವಾಗಿಯೂ ಯೂಸುಫ್‌ರ ಸಂಗಾತಿಗಳಾಗಿರುವಿರಿ ಎಂದು ಹೇಳಿದರು. ತರುವಾಯ ಅಬೂಬಕರ್(ರ) ಹೊರಟು ನಮಾಝ್ ಆರಂಭಿಸಿದರು. ಅಷ್ಟರಲ್ಲಿ ಪ್ರವಾದಿವರ್ಯರಿಗೆ ಸಂಕಟವು ಸ್ವಲ್ಪ ಕಡಿಮೆಯಾಗಿ ಅವರು ಇಬ್ಬರು ವ್ಯಕ್ತಿಗಳನ್ನು ಆಧರಿಸಿಕೊಂಡು ಹೊರಟರು. ಪ್ರವಾದಿ(ಸ) ಸಂಕಟದಿಂದಾಗಿ ತಮ್ಮ ಕಾಲುಗಳನ್ನು ಎಳೆದು ಕೊಂಡು ನಡೆಯುತ್ತಿದ್ದ ಆ ದೃಶ್ಯ ಈಗಲೂ ನನ್ನ ಕಣ್ಣ ಮುಂದಿದೆ. ಅಬೂಬಕರ್ ಹಿಂದೆ ಸರಿಯಬಯಸಿದರು. ಆದರೆ ಪ್ರವಾದಿಯವರು ಅವರೊಂದಿಗೆ ತಮ್ಮ ಸ್ಥಳದಲ್ಲೇ ನಿಂತಿರುವಂತೆ ಕೈಸನ್ನೆ ಮಾಡಿದರು. ಪ್ರವಾದಿ(ಸ) ಅಲ್ಲಿಗೆ ತಲಪಿ ಅಬೂಬಕರ್‌ರ ಒಂದು ಬದಿಯಲ್ಲಿ ಕುಳಿತು ನಮಾಝ್ ಮಾಡತೊಡಗಿದರು. ಅಬೂಬಕರ್ ಪ್ರವಾದಿ ಯವರ ನಮಾಝ್‌ನಂತೆ ನಮಾಝ್ ಮಾಡಿದರು. ಜನರು ಅಬೂಬಕರ್‌ರ ನಮಾಝ್‌ನ ಅನುಕರಣೆ ಮಾಡುತ್ತಿದ್ದರು. ಇನ್ನೊಂದು ವರದಿಯ ಪ್ರಕಾರ, ಪ್ರವಾದಿ(ಸ) ಅಬೂಬಕರ್‌ರ ಎಡಬದಿಯಲ್ಲಿ ಕುಳಿತರು. ಅಬೂಬಕರ್ ನಿಂತುಕೊಂಡು ನಮಾಝ್ ಮಾಡುತ್ತಿದ್ದರು.

**377.** ಆಯಿಶಾರ ಒಂದು ವರದಿ ಪ್ರಕಾರ, ಪ್ರವಾದಿಯವರಿಗೆ ರೋಗ ಉಲ್ಬಣಗೊಂಡು ನಿತ್ರಾಣ ಬಾಧಿಸಿದಾಗ ತಮ್ಮ ಪತ್ನಿಯರೊಂದಿಗೆ ನನ್ನ ಮನೆಯಲ್ಲೇ ಉಳಕೊಳ್ಳಲು ಅನುಮತಿ ಕೇಳಿದರು. ಅವರಿಗೆ ಅನುಮತಿ ನೀಡಲಾಯಿತು.

## ಮನೆಯಲ್ಲಿ ನಮಾಝ್

**378.** ಅಬ್ದುಲ್ಲಾ ಬಿನ್ ಹಾರಿಸ್ ಹೇಳಿದರು. ಇಬ್ನು ಅಬ್ಬಾಸ್(ರ) ಜನರಿಗೆ ಪ್ರವಚನ ನೀಡಿದರು. ತರುವಾಯ ಮುಅದ್ದಿನ್‌ಗೆ ಅದಾನ್ ಕೊಡುವಂತೆ ಆದೇಶಿಸಿದರು. ಅಂದು ಮಳೆ ಬರುತ್ತಿತ್ತು. ಮುಅದ್ದಿನ್ ಹಯ್ಯ ಅಲಸ್ಸಲಾಃ ಎಂಬಲ್ಲಿಗೆ ತಲುಪಿದಾಗ, ಅವರು ಇಂದು ನಮಾಝ್ ಮನೆಗಳಲ್ಲೇ ಮಾಡಲಾಗುವುದು ಎಂದರು. (ಇದನ್ನು ಕೇಳಿ) ಜನರು ಪರಸ್ಪರ ಮುಖ ನೋಡತೊಡಗಿದರು. ಅವರಿಗೆ ಇದು ಇಷ್ಟವಾಗಲಿಲ್ಲವೋ ಎಂಬಂತೆ. ಇಬ್ನು ಅಬ್ಬಾಸ್ ಹೇಳಿದರು, ಬಹುಶಃ ನಿಮಗೆ ಅರೋಚಕವಾಗಿರಬಹುದು. ಆದರೆ ಇದನ್ನು ನನಗಿಂತ ಉತ್ತಮ ವ್ಯಕ್ತಿ ಹೇಳಿದ್ದರು. ಅಂದರೆ ಪ್ರವಾದಿ(ಸ) ಈ ವಿಷಯವನ್ನು ತಿಳಿಸುವಾಗ, ನಿಮ್ಮನ್ನು ಸಂಕಷ್ಟಕ್ಕೀಡು ಮಾಡುವುದು ನನಗಿಷ್ಟವಿಲ್ಲ ಎಂದು ಹೇಳಿದ್ದರು.

## ಸಿದ್ದೀಖುಲ್ ಅಕ್ಬರ್ - 17

ಇ.ಎನ್. ಇಬ್ರಾಹೀಮ್

# ಜನಕಲ್ಯಾಣಕ್ಕೆ ಮುಡಿಪು

ಅಬೂಬಕರ್ ಅಧಿಕಾರವನ್ನು ತಾನಾಗಿ ಕೇಳಿ ಪಡೆದುಕೊಂಡಿರಲಿಲ್ಲ. ಅಧಿಕಾರವೇ ಅವರನ್ನು ಹುಡುಕಿಕೊಂಡು ಬಂದಿತ್ತು. ಅದನ್ನು ಸರಿಯಾಗಿ ನಿಭಾಯಿಸದೇ ಹೋದರೆ ಇಹಪರಗಳೆರಡರಲ್ಲೂ ಸಂಭವಿಸಬಹುದಾದ ನಾಶ ನಷ್ಟಗಳ ಕುರಿತು ಅವರಿಗೆ ಅರಿವಿತ್ತು. ಈ ಅರಿವೇ ತನ್ನನ್ನು ರಾಷ್ಟ್ರ ಸೇವೆಗೆ ಅರ್ಪಿಸಲು ಪ್ರೇರೇಪಿಸಿತ್ತು. ತನ್ನೊಂದಿಗೆ ಬೈಅತ್ ಮಾಡಿದ ಬಳಿಕ ಅವರು ನೀಡಿದ ಪ್ರಪ್ರಥಮ ಉಪನ್ಯಾಸದಲ್ಲಿಯೇ ಹೀಗೆ ಪ್ರಸ್ತಾಪಿಸಿದ್ದಾರೆ,

"ನಿಮ್ಮ ಅಧಿಕಾರ ನನ್ನ ಕೈಯಲ್ಲಿ ಅರ್ಪಿಸಲ್ಪಟ್ಟಿದೆ. ನನಗಾದರೋ ಅದರಲ್ಲಿ ತೀರಾ ಆಸಕ್ತಿಯಿಲ್ಲ. ಆದುದರಿಂದ ಅಧಿಕಾರವನ್ನು ವಹಿಸಿಕೊಳ್ಳಲು ಬೇರೆ ಯಾರಾದರೂ ಮುಂದೆ ಬರುವುದಾದರೆ... ಎಂದು ನಾನು ಬಯಸುತ್ತಿದ್ದೇನೆ."

ಇನ್ನೊಮ್ಮೆ ಅವರು ಹೇಳಿದರು,

"ಇಹದ ಮನುಷ್ಯರಲ್ಲಿ ಅತಿಹೆಚ್ಚು ನತದೃಷ್ಟರು ಆಡಳಿತಗಾರರಾಗಿದ್ದಾರೆ."

ಅವರನ್ನು ಆ ಸಭೆಯು ಮಂತ್ರಮುಗ್ಧವಾಗಿ ನೋಡುತ್ತಿತ್ತು. ಆನಂತರ ಅವರು ಜನರನ್ನುದ್ದೇಶಿಸಿ ಹೀಗೆ ಪ್ರಶ್ನಿಸಿದ್ದರು,

"ಓ ಜನರೇ ನಿಮಗೇನಾಯಿತು? ನೀವು ಬರೇ



ಅನುಸರಿಸುವವರೇ ಅಲ್ಲ, ಪ್ರಶ್ನಿಸುವವರೂ ಆಗಿದ್ದೀರಿ. ನೀವು ಕೆಲವು ಆಡಳಿತಗಾರರನ್ನು ನೋಡಿಲ್ಲವೇ? ಅಧಿಕಾರವು ಅವರ ಕೈಯಲ್ಲಿ ಸಿಕ್ಕಿದ ಕೂಡಲೇ ತಮ್ಮ ಬಳಿಯಿರುವುದು ಕ್ಷುಲ್ಲಕವಾಗಿ ಕಾಣುತ್ತಾರೆ ಮತ್ತು ಅನ್ಯರ ಬಳಿಯಿರುವ ವಸ್ತುಗಳಲ್ಲಿ ಆಸಕ್ತಿ ಹೊಂದುತ್ತಾರೆ.. ಇವರು ಮರೀಚಿಕೆಗೆ ಸಮಾನವಾಗಿದ್ದಾರೆ. ಅವರ ವರ್ತನೆ ವಂಚನಾತ್ಮಕವಾಗಿದೆ. ಅವರೊಳಗೆ ವಂಚನೆ ಮತ್ತು ತುಟಿಯ ಮೇಲೆ ನಗು ಲಾಸ್ಯವಾಡುತ್ತಿರುತ್ತದೆ."

ಅಬೂಬಕರ್ ಮದೀನಾದ ಸುನ್‌ಹಿಯಲ್ಲಿ ವಾಸಿಸಲು ಪ್ರಾರಂಭಿಸಿದರು. ಅರಮನೆಯೆಂಬುದೊಂದು ಗುಡಿಸಲಾಗಿತ್ತು. ಅವರ ಪತ್ನಿ ಖಾರಿಜ್‌ರ ಪುತ್ರಿಯಾಗಿದ್ದಾರೆ. ಅಬೂಬಕರ್ ಇಸ್ಲಾಮೀ ರಾಷ್ಟ್ರದ ಅಧಿಪತಿಯಾದರೂ ಅವರಲ್ಲಿ ಸ್ವಲ್ಪವೂ ಬದಲಾವಣೆಯಾಗಿರಲಿಲ್ಲ. ಅವರ ಜೀವನ ಶೈಲಿಯಲ್ಲಿ ಅದ್ದೂರಿತನವಾಗಲಿ, ಧಾರಾಳಿತನವಾಗಲಿ ಸೋಂಕಿರಲಿಲ್ಲ. ಅವರು ನಯವಿನಯದಿಂದ ವರ್ತಿಸುತ್ತಿದ್ದಾರೆ. ಅವರದು ಬಹಳ ಸರಳವಾದ ಬದುಕಾಗಿದೆ. ಇಸ್ಲಾಮೀ ಆದರ್ಶದಲ್ಲಿ ಜನನಾಯಕ ಜನಸೇವಕನಾಗಿರುವನು. ಈ ತತ್ವವನ್ನು ಅಬೂಬಕರ್ ತನ್ನ ಜೀವನದಲ್ಲಿ ಅಳವಡಿಸಿಕೊಂಡು ಬರುತ್ತಿದ್ದಾರೆ. ಈ ಆದರ್ಶವನ್ನು ಅನ್ವರ್ಥವಾಗಿ ಪಾಲಿಸುತ್ತಿರುವ ದೇವದಾಸ ಅಬೂಬಕರ್ ಆಗಿರುವರು. ತನ್ನ ಸುನ್‌ಹಿಯಲ್ಲಿದ್ದ ಮನೆಯಿಂದ ಮದೀನಾಕ್ಕೆ ನಡೆದು ಬರುತ್ತಿದ್ದರು. ಅಪರೂಪಕ್ಕೊಮ್ಮೆ ಅವರು ವಾಹನವನ್ನು ತರುತ್ತಿದ್ದರು. ಹೀಗೆ ತಂದರೂ ಅದು ಅವರದೇ ಕುದುರೆಯಾಗಿರುತ್ತಿತ್ತು.

ಅಬೂಬಕರ್ ಖಲೀಫರಾಗಿ ಅಧಿಕಾರವಹಿಸಿಕೊಂಡ ನಂತರವೂ ವ್ಯಾಪಾರಕ್ಕೆ ಪ್ರಯತ್ನಿಸಿದರು. ಆಡಳಿತಗಾರನಿಗೆ ಇತರೆಲ್ಲ ವಿಚಾರಕ್ಕಿಂತ ಜನರ ಯೋಗಕ್ಷೇಮವೇ ಮುಖ್ಯವಾಗಿದೆಯೆಂದು ಅಬೂಬಕರ್‌ರಿಗೆ ಚೆನ್ನಾಗಿ ಗೊತ್ತಿತ್ತು. ಅವರ ಯೋಗಕ್ಷೇಮಕ್ಕಾಗಿ ಹೆಚ್ಚಿನ ಸಮಯ ವ್ಯಯಿಸುವುದು ಆಡಳಿತಗಾರನ ಕರ್ತವ್ಯವಾಗಿದೆ. ಹೀಗಿರುವಾಗ ವ್ಯಾಪಾರವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರುವುದಕ್ಕೆ ತ್ರಾಸವಿದೆ. ಅವರಿಗೆ ಆಡಳಿತ ಮತ್ತು ವ್ಯಾಪಾರ ಏಕ ಸಮಯದಲ್ಲಿ ಜತೆ ಜತೆಯಾಗಿ ಸಾಗಲಾರದೆಂದು ಅರಿವಾದೊಡನೆ ಅವರು ಯೋಚಿಸಿದರು, "ಏನಿದ್ದರೂ ಆಡಳಿತ ಮತ್ತು ವ್ಯಾಪಾರ ಇವೆರಡನ್ನು ಒಂದೇ ಸಮಯದಲ್ಲಿ ನಿರ್ವಹಿಸುವುದಕ್ಕೆ ಸಾಧ್ಯವಾಗಲಾರದು. ಆದರೆ ಜನರ ಕಲ್ಯಾಣಕ್ಕಾಗಿ ಶ್ರಮಿಸುವುದು ಅನಿವಾರ್ಯವಾಗಿದೆ. ಆದರೆ ಕುಟುಂಬದ ವಿಚಾರವನ್ನು ಕಡೆಗಣಿಸುವಂತಿಲ್ಲವಲ್ಲ."

ಕೊನೆಗೂ ತನ್ನ ಎಲ್ಲ ಸಮಯವನ್ನು ಜನಸೇವೆಗೆ ಅರ್ಪಿಸುವುದೆಂದು ಅವರು ನಿರ್ಧರಿಸಿದರು. ವ್ಯಾಪಾರ ನಡೆಸುವ ಯೋಚನೆಯನ್ನೇ ತೊರೆದರು. ಖಜಾನೆಯಿಂದ ವೇತನವಾಗಿ ಸರ್ವಸಮ್ಮತಿಯಿಂದ ಒಂದು ಮೊತ್ತವನ್ನು ಪಡೆದು ಜೀವನಯಾಪನೆ ನಡೆಸುವುದೆಂದು ಅವರು ನಿರ್ಧರಿಸಿದರು.

ಅಬೂಬಕರ್ ಸರಳವಾದ ಜೀವನವನ್ನು ಆಯ್ದುಕೊಂಡಿದ್ದರು. ಅವರು ಮನಸ್ಸು ಮಾಡಿದ್ದರೆ ತಕ್ಕಮಟ್ಟಿಗೆ ಉತ್ತಮ ರೀತಿಯಿಂದ ಜೀವಿಸಬಹುದಾಗಿತ್ತು. ಮಾತ್ರವಲ್ಲ ಅವರಿಗಿಂತ ಉತ್ತಮ ರೀತಿಯಿಂದ ಜೀವಿಸುವವರು ಅಲ್ಲಿದ್ದಾರೆ. ಆದರೆ ಸಾರ್ವಜನಿಕ ಬೊಕ್ಕಸವನ್ನು ಬಹಳ ಜಾಗರೂಕತೆಯಿಂದ ಬಳಸದಿದ್ದರೆ ನಾಳೆ ಪರಲೋಕದಲ್ಲಿ ದೇವನ ಸನ್ನಿಧಿಯಲ್ಲಿ ದೇವನಿಗೆ ಉತ್ತರ ನೀಡಬೇಕಾಗಬಹುದು ಎಂಬ ಅರಿವು ಅವರಲ್ಲಿತ್ತು. ಆದುದರಿಂದ ಅವರು ಸರಳವಾಗಿ ಬದುಕುವುದನ್ನು ಆಯ್ಕೆ ಮಾಡಿದರು. ಇಷ್ಟು ಸರಳವಾಗಿ ಬಹಳ ಜಾಗರೂಕತೆಯಿಂದ ಬದುಕಿದ ವ್ಯಕ್ತಿಯು ಮರಣ ಶಯ್ಯೆಯಲ್ಲಿ ನೀಡಿರುವ ವಸೀಯತ್ ತುಂಬ ಗಮನಾರ್ಹವಾದುದು.

"ನಮ್ಮ ಬಳಿ ಸಾರ್ವಜನಿಕ ಸೊತ್ತಿನಿಂದೇನಾದರೂ ಉಳಿದುಕೊಂಡಿದೆ ಎಂದಾದರೆ, ಅದನ್ನು ಮರಳಿಸಬೇಕು. ನಾನು ಸಾರ್ವಜನಿಕ ಬೊಕ್ಕಸವನ್ನು ಅನುಭವಿಸಿರುವುದಕ್ಕೆ ಪ್ರತಿಯಾಗಿ ಇಂತಹ ಸ್ಥಳದಲ್ಲಿರುವ ನನ್ನ ಭೂಮಿಯನ್ನು ಸಮಾಜದ ಹಕ್ಕಾಗಿ ಸೇರಿಸಿಕೊಳ್ಳಬೇಕಾಗಿದೆ."

ಆನಂತರದ ಕಾಲದಲ್ಲಿ ಅವರು ಸಾರ್ವಜನಿಕ ಹಕ್ಕಾಗಿ ನೀಡಿರುವ ಭೂಮಿಯನ್ನು ನಿರ್ವಹಿಸುವ ಸಂದರ್ಭವೆದುರಾದಾಗ, ಅವರ ಈ ವಸೀಯತ್ತನ್ನು ನೆನೆದು ಉಮರ್ ಹೀಗೆ ಪ್ರತಿಕ್ರಿಯಿಸಿದ್ದರು,

"ಅಬೂಬಕರ್ ತನ್ನ ಉತ್ತರಾಧಿಕಾರಿ ಸಂಕಟಪಡುವಂತೆ ಮಾಡಿದ್ದಾರೆ!"

ಅಬೂಬಕರ್‌ರದ್ದು ಸಂಪೂರ್ಣ ಅರ್ಪಣಾಪ್ರಜ್ಞೆ, ಹೊಳೆಯುವ ವಿಶ್ವಾಸ, ದೃಢವಾದ ದೇವ ಭಕ್ತಿ ಮುಂತಾದುವು ತುಂಬಿಕೊಂಡಿರುವ ವ್ಯಕ್ತಿತ್ವವಾಗಿದೆ. ಆದ್ದರಿಂದ ಅಬೂಬಕರ್‌ರ ಆಜ್ಞೆಯನ್ನು ಪಾಲಿಸಲು ಯಾರಿಗೂ ನಿರಾಸಕ್ತಿಯೆಂಬುದಿರಲಿಲ್ಲ. ಎಲ್ಲರೂ ಅವರನ್ನು ವಿನಯಾನ್ವಿತವಾಗಿ ಅನುಸರಿಸುತ್ತಲೂ ಗೌರವಿಸುತ್ತಲೂ ಇದ್ದರು.

### ಖಾಲಿದ್ ಬಿನ್ ವಲೀದ್

ಅಬೂಬಕರ್‌ರು ರೂಪಿಸಿರುವ ಹನ್ನೊಂದು ಸೇನಾದಳಗಳಲ್ಲಿ ಖಾಲಿದ್‌ರ ಸೇನೆಯು ಜನಬಲ ಮತ್ತು ಯುದ್ಧಕಲೆಯಲ್ಲಿ ಪ್ರಬಲವಾಗಿರುವ ಸೇನಾ ದಳವಾಗಿತ್ತು. ಆದುದರಿಂದ ಖಾಲಿದ್‌ರನ್ನು ಕೂಡಾ ಇಲ್ಲಿ ಆವಶ್ಯಕವಾಗಿ ಪರಿಚಯಿಸಬೇಕಾಗಿದೆ. ಸ್ವತಃ ಖಾಲಿದ್‌ರು ಯುದ್ಧಕಲೆಯಲ್ಲಿ ಸಾಕಷ್ಟು ನಿಪುಣರಾಗಿದ್ದರು ಮತ್ತು ಪರಾಕ್ರಮಿ ಸೇನಾನಿಯಾಗಿದ್ದರು. ಅವರಲ್ಲಿ ಸಾಹಸಿಕ ರಂಗಕ್ಕೆ ನುಗ್ಗುವುದಕ್ಕೆ ಕಿಂಚಿತ್ತೂ ಅಳುಕೆಂಬುದಿರಲಿಲ್ಲ. ಅವರಲ್ಲಿ ಸಮಯೋಚಿತವಾಗಿ ತಂತ್ರಗಳನ್ನು ಆವಿಷ್ಕರಿಸುವ ಸಾಮರ್ಥ್ಯಗಳಿದ್ದವು. ಖಾಲಿದ್‌ರ ಅಪ್ರತಿಮ ಸ್ಥೈರ್ಯ ಸಾಮರ್ಥ್ಯಗಳನ್ನು ಬಣ್ಣಿಸದವರೇ ಇರಲಿಲ್ಲ. ಅವರು ಯಾವ ಸಮಯದಲ್ಲಿದ್ದರೂ ಈ ರೀತಿಯೇ ಇರುತ್ತಿದ್ದರು.

ಖಾಲಿದ್‌ರು ಬದ್ರ್, ಉಹುದ್ ಮತ್ತು ಕಂದಕ್ ಯುದ್ಧಗಳಲ್ಲಿ ಮುಸ್ಲಿಮರ ಶತ್ರುಪಕ್ಷದ ನೇತೃತ್ವ ಸಾಲಿನಲ್ಲಿದ್ದರು. ರೋಮನರೊಂದಿಗೆ ನಡೆದಿರುವ ಮುಅತ್ತಾ ಯುದ್ಧದಲ್ಲಿ ಝೈದ್ ಬಿನ್ ಹಾರಿಸ ಮತ್ತು ಇತರ ಇಬ್ಬರು ಸೇನಾಧಿಪತಿಗಳು ವಧಿಸಲ್ಪಟ್ಟು ಮುಸ್ಲಿಮ್ ಸೈನ್ಯ ಅತಿದಾರುಣ ಪರಿಸ್ಥಿತಿಯನ್ನು ಎದುರಿಸುವಾಗ ಸ್ವಯಂ ಮುಂದೆ ಬಂದು ನಾಯಕತ್ವವನ್ನು ವಹಿಸಿಕೊಂಡು ಸ್ವತಃ ಸಿದ್ಧ ತಂತ್ರೋಪಾಯಗಳಿಂದ ಮುಸ್ಲಿಮ್ ಸೇನೆಯನ್ನು ರಕ್ಷಿಸಿ ಪಾರುಮಾಡುವಲ್ಲಿ ಯಶಸ್ವಿಯಾಗಿದ್ದರು. ಖಾಲಿದ್‌ರು ರೂಪಿಸಿದ ಸೇನಾ ನಿಯೋಜನೆಯ ಬದಲಾವಣೆಯಿಂದಾಗಿ ಮುಸ್ಲಿಮರ ಸೇನೆಯ ಬೆಂಬಲಕ್ಕೆ ಪೋಷಕ ಸೇನೆ ಆಗಮಿಸಿದೆ ಎಂದು ಶತ್ರುಗಳು ಭಾವಿಸಿ ಮೋಸಹೋದರು. ಅವರು ಹೆದರಿ ಯುದ್ಧರಂಗದಿಂದ ಪಲಾಯನವನ್ನೇ ಮಾಡಿದರು. ಆದುದರಿಂದ ಮುಸ್ಲಿಮರು ಯುದ್ಧರಂಗದಿಂದ ಹೆದರಿ ಓಡಿದ್ದಾರೆಂದು ಅಪಕೀರ್ತಿ ಬರುವುದು ಖಾಲಿದ್‌ರ ಉಪಾಯದಿಂದಾಗಿ ಇಲ್ಲದಾಯಿತು. ಹೀಗೆ ಮುಸ್ಲಿಮರು ಗೌರವಯುತವಾಗಿ ಯುದ್ಧರಂಗದಿಂದ ಮರಳಿ ಬರಲು ಅವರು ನೆರವಾದರು. ಆದುದರಿಂದ ಪ್ರವಾದಿವರ್ಯರು ಖಾಲಿದ್‌ರಿಗೆ ಅಲ್ಲಾಹನ ಖಡ್ಗವೆಂಬ ಬಿರುದು ನೀಡಿ ಗೌರವಿಸಿದರು.

ಖಾಲಿದ್‌ರದ್ದು ನಿಷ್ಠುರ ವರ್ತನೆಯಾಗಿದೆ. ಕಠಿಣ ನಿಲುವು. ಒರಟು ಸ್ವಭಾವ. ಹಾವಭಾವದಲ್ಲಿ ಗಡಸುತನ. ಹೀಗೆ ಓರ್ವ ಸೈನಿಕನಲ್ಲಿರಬೇಕಾದ ಸರ್ವಗುಣವು ಅವರಲ್ಲಿತ್ತು. ಶತ್ರು ಎಷ್ಟೇ ಪರಾಕ್ರಮಿಯಾದರೂ ಎಂದೂ ಖಾಲಿದ್‌ರು ಎದೆಗುಂದುವವರಲ್ಲ.

ಖಾಲಿದ್‌ರು ಇಸ್ಲಾಮ್ (10ನೇ ಪುಟಕ್ಕೆ)

## ಆತ್ಮಹತ್ಯೆ ಮತ್ತು ದೇವವಿಶ್ವಾಸ

ಸೋವಿಯತ್ ಯೂನಿಯನ್‌ನ ಖ್ಯಾತ ಸಾಹಿತಿ ಅಲೆಕ್ಸಾಂಡರ್ ಬೇಕ್ ಅವರ ಖಾಸಗಿ ದಾಖಲೆಗಳಿಂದ ತಿಳಿದು ಬಂದ ಪ್ರಕಾರ, ಲೆನಿನ್ ರೋಗಿಯಾಗಿ ಹಾಸಿಗೆ ಹಿಡಿದಾಗ ಸ್ಟಾಲಿನ್‌ಗೆ ಒಂದು ಪತ್ರ ಬರೆದಿದ್ದನು. ತನ್ನ ರೋಗವು ವಾಸಿಯಾಗದೆಂದು ಖಾತ್ರಿಯಾದಾಗ ಲೆನಿನ್ ಆತ್ಮಹತ್ಯೆಗೈಯುವ ಬಯಕೆಯನ್ನು ವ್ಯಕ್ತಪಡಿಸಿದ್ದನು. ಅದಕ್ಕಾಗಿ ಒಂದಿಷ್ಟು ಪೊಟಾಸಿಯಮ್ ಸಯನೈಡ್ ಕಳುಹಿಸಿ ಕೊಡಬೇಕೆಂದು ಸ್ಟಾಲಿನ್‌ನನ್ನು ಕೇಳಿಕೊಂಡಿದ್ದನು.

ತನ್ನ ಪತ್ರದಲ್ಲಿ ಲೆನಿನ್ ಹೀಗೆ ಬರೆದಿರುವರು, "ಶರೀರವು ನಿತ್ರಾಣಗೊಂಡಿದೆ. ಇನ್ನು ಮಾತನಾಡುವ ಶಕ್ತಿಯೂ ಇಲ್ಲವಾದರೆ ನಾನು ವಿಷ ಸೇವಿಸಿ ಜೀವನವನ್ನು ಕೊನೆಗೊಳಿಸುವೆನು. ಅದಕ್ಕಾಗಿ ಆದಷ್ಟು ಬೇಗ ಸಯನೈಡ್ ಕಳುಹಿಸಿ ಕೊಡಬೇಕು. ಅದು ನನ್ನ ಬಳಿಯೇ ಇರಬೇಕು. ನನಗೆ ಅದರಿಂದ ನಿಶ್ಚಿಂತೆ ಉಂಟಾದೀತು."

ಕಾರ್ಲ್ ಮಾರ್ಕ್ಸ್‌ನ ಪುತ್ರ ಮತ್ತು ಅಳಿಯನಿಗೆ ತಮ್ಮ ಜೀವನವು ಅಸಹನೀಯವಾದಾಗ ಅವರಿಬ್ಬರೂ ವಿಷ ಸೇವಿಸಿ ಸಾವನ್ನಪ್ಪಿದ್ದರು. ಇದುವೇ ಲೆನಿನ್‌ನನ್ನು ಆತ್ಮಹತ್ಯೆಗೆ ಪ್ರೇರೇಪಿಸಿರಬಹುದೆಂದು ಅಲೆಕ್ಸಾಂಡರ್ ಬೇಕ್ ಬರೆದಿರುವರು.

ಲೆನಿನ್ ಹೊಸ ವಿಶ್ವದ ಪ್ರಬಲ ಪ್ರತಿಪಾದಕರಾಗಿದ್ದರು. ಭೌತಿಕ ಜೀವನದ ನವನಿರ್ಮಾಣದ ಮೂಲಕ ಭೂಮಿಯನ್ನು ಸ್ವರ್ಗವಾಗಿ ಮಾರ್ಪಡಿಸ ಬಯಸಿದ್ದವರು. ಮಾನವನ ಮನಸ್ಸಿನ ಸಂತೃಪ್ತಿ ಮತ್ತು ಆನಂದವು ಆರ್ಥಿಕ ಸುಸ್ಥಿತಿ ಮತ್ತು ಸುಖ ಸೌಕರ್ಯಗಳನ್ನು ಅವಲಂಬಿಸಿದೆಯೆಂದು ಅವರು ನಂಬಿದ್ದರು. ಆತ್ಮ ಮತ್ತು ಅದರ ಬಯಕೆ-ಬೇಡಿಕೆಗಳನ್ನು ತೀರಾ ಕಡೆಗಣಿಸಿದರು. ಆರೋಗ್ಯವಂತರಾಗಿದ್ದಾಗ ಅದನ್ನು ದಯಪಾಲಿಸಿದವನನ್ನು ಮರೆತರು. ಆದ್ದರಿಂದ ರೋಗಪೀಡಿತರಾದಾಗ ಅತ್ಯಧಿಕ ದುಃಖಕ್ಕೀಡಾಗಿ ಆತ್ಮಹತ್ಯೆಗೆ ಮುಂದಾದರು.

ನಾಸ್ತಿಕರು ಅಸಹಾಯಕತೆಯ ಸ್ಥಿತಿಯಲ್ಲಿ ಅತ್ಯಧಿಕ ನಿರಾಶರಾಗುತ್ತಾರೆ. ಪ್ರತಿಕೂಲ ಪರಿಸ್ಥಿತಿಯಲ್ಲಿ ಅವರಿಗೆ ಅಭೌತಿಕವಾದ ಯಾವ ಆಶ್ರಯವೂ ಗೋಚರಿಸುವುದಿಲ್ಲ.

**ಚಿಂತನೆ**



ಇಬ್ರಾಹೀಮ್ ಸಈದ್

ಅನಿರೀಕ್ಷಿತ ಆಘಾತಗಳುಂಟಾದಾಗ ಅಭಯ ಯಾಚಿಸಲು ಅವರಿಗೆ ದೇವನಿಲ್ಲ. ನಿರೀಕ್ಷೆಯಿಡಲು ಪರಲೋಕ ಜೀವನದ ಕಲ್ಪನೆಯಿಲ್ಲ. ಆದ್ದರಿಂದ ಅವರ ಎಲ್ಲ ಕನಸುಗಳೂ ಭೌತಿಕ ಜೀವನಕ್ಕೆ ಸೀಮಿತವಾಗಿರುತ್ತದೆ. ಅದು ಕುಸಿಯುವಾಗ ಅವರು ಮಾನಸಿಕವಾಗಿ ಕ್ಷೀಣಿಸುತ್ತಾರೆ. ಜೀವನವು ಅವರ ಪಾಲಿಗೆ ಒಂದು ಪೀಡೆ ಮತ್ತು ಶಾಪವಾಗಿ ಮಾರ್ಪಡುತ್ತದೆ. ಆಗ ಆತ್ಮಹತ್ಯೆಗೆ ಶರಣಾಗುತ್ತಾರೆ. ಆಧುನಿಕ ಜಗತ್ತಿನಲ್ಲಿ ದಿನನಿತ್ಯ ಆತ್ಮಹತ್ಯೆ ಏರುತ್ತಿರುವ ಸಂಖ್ಯೆಗೆ ಕಾರಣ ಜೀವನದ ಅಪ್ಪಟ ಭೌತಿಕ ದೃಷ್ಟಿಕೋನವಾಗಿದೆ. ಭೌತಿಕ ಸುಖ ಸೌಕರ್ಯಗಳು ಲಭಿಸಿದಾಗ ಮಿತಿಮೀರಿ ಆನಂದಿಸುತ್ತಾರೆ. ಅಹಂಕಾರಿಗಳಾಗಿ ಮೆರೆಯುತ್ತಾರೆ. ಸಂಕಷ್ಟಗಳು ಎದುರಾದಾಗ ಚಿಂತಾಕ್ರಾಂತರಾಗಿ ವಿವೇಕ ರಹಿತವಾಗಿ ವರ್ತಿಸುತ್ತಾರೆ. ಆದರೆ ದೇವವಿಶ್ವಾಸಿಗಳು ಸುಖ, ದುಃಖ, ಸೌಲಭ್ಯ, ಸಂಕಷ್ಟ, ರೋಗ, ಆರೋಗ್ಯ, ಜೀವನ, ಮರಣವನ್ನೆಲ್ಲ ದೇವದತ್ತವೆಂದು ಬಗೆಯುತ್ತಾರೆ. ಅವರು ಈ ಎಲ್ಲ ಸ್ಥಿತಿಗಳಲ್ಲಿ ಸಮಚಿತ್ತದಿಂದ ವರ್ತಿಸುತ್ತಾರೆ. ದೇವರ ಮೇಲೆ ಭಾರ ಹಾಕಿ, ಪರಲೋಕದ ಪ್ರತಿಫಲವನ್ನು ಬಯಸಿ ಸಂತುಲಿತ ಜೀವನ ಸಾಗಿಸುತ್ತಾರೆ.



## ಮೂಸಾ v/s ಫಿರ್‌ಔನ್- 4

ಅಖ್ಲಾಕ್ ಹುಸೈನ್

# ಮೂಸಾರ(ಅ) ಜನನ

**ಸ**ರಕಾರದ ಬೇಹುಗಾರರು ಕೇರಿ ಕೇರಿಗಳಲ್ಲಿ ಬನೀ ಇಸ್ರಾಈಲರ ಮನೆಗಳನ್ನು ತಪಾಸಣೆಗೈಯುತ್ತಿದ್ದಂತಹ ಆ ಭಯಾನಕ ಪರಿಸ್ಥಿತಿಯಲ್ಲಿ, ಅದೇ ಜನಾಂಗದ ಇಮ್ರಾನ್ ಎಂಬವರ ಮನೆಯಲ್ಲಿ ಅಲ್ಲಾಹನು ಮೂಸಾರನ್ನು(ಅ) ಹುಟ್ಟಿಸಿದನು. ಈ ಮಗು ತಂದೆ ತಾಯಿಯರ ಮೂರನೇ ಪುತ್ರನಾಗಿತ್ತು. ಅವನಿಗೆ ಓರ್ವ ಹಿರಿಯ ಸಹೋದರಿ ಮತ್ತು ಸಹೋದರ ಇದ್ದರು. ಇವರು ಬಹುಶಃ ಮಕ್ಕಳ ವಧೆಯ ಶಾಸನ ಜಾರಿಗೊಳ್ಳುವುದಕ್ಕಿಂತ ಮುಂಚೆ ಹುಟ್ಟಿರಬೇಕು. ಆದ್ದರಿಂದ ಬದುಕುಳಿದಿದ್ದರು. ಆ ಕಾಲದ ಕಾನೂನು ಪೂರ್ವಾನ್ವಯ (with restrospective effect) ಆಗಿರಲಿಲ್ಲ. ಅನ್ಯಥಾ ಈ ಸಹೋದರ ಸಹೋದರಿಯರು ಎಂದೋ ವಿಧಿವಶರಾಗಿರುತ್ತಿದ್ದರು.

ಒಂದು ಬಲಿಷ್ಠ ಮತ್ತು ದುಷ್ಟ ಬೇಹುಗಾರರ ತಂಡವು ನಾಲ್ಕೂ ಸುತ್ತ ಹರಡಿಕೊಂಡಿದ್ದು ಮನೆಮನೆಯ ಶೋಧ ನಡೆಸುತ್ತಿದ್ದಂತಹ ಆ ಪರಿಸ್ಥಿತಿಯಲ್ಲಿ ಒಂದು ದುರ್ಬಲ ಮತ್ತು ಅಸಹಾಯಕ ಮನೆತನದಲ್ಲಿ ಒಂದು ಗಂಡು ಮಗು ಹುಟ್ಟಿದ್ದು ಬಹಿರಂಗವಾಗದೆ ಇರುವುದಾದರೂ ಹೇಗೆ? ಆದ್ದರಿಂದ ಅಲ್ಲಾಹನು ಜನನದ ಸಂದರ್ಭದಲ್ಲೇ ಮೂಸಾರ ತಾಯಿಗೆ ಈ ಅಪಾಯದ ಕುರಿತು ತಿಳಿಸಿದ್ದು ಮಾತ್ರವಲ್ಲ, ಅದರಿಂದ ಪಾರಾಗುವ ಉಪಾಯವನ್ನೂ ತಿಳಿಸಿದನು. ಮಗುವಿನ ರಕ್ಷಣೆಯ ಭಾರವನ್ನು ತಾನೇ ವಹಿಸಿಕೊಂಡು ಮುಂದೆ ಇದು ಪ್ರವಾದಿತ್ವದ ಉನ್ನತ ಪದವಿ ಪಡೆಯಲಿರುವ ಶುಭವಾರ್ತೆಯನ್ನೂ ಆಕೆಗೆ ನೀಡಿದನು. ಕುರ್‌ಆನ್ ಅದನ್ನು ಹೀಗೆ ವಿವರಿಸುತ್ತದೆ,

"ನಾವು ಮೂಸಾರ ತಾಯಿಗೆ, ಇದಕ್ಕೆ ಮೊಲೆ ಹಾಲುಣಿಸು. ಮುಂದೆ ನಿನಗೆ ಇದರ ಪ್ರಾಣದ ಬಗ್ಗೆ ಭಯವುಂಟಾದರೆ ಇದನ್ನು ನದಿಯಲ್ಲಿ ಹಾಕಿ ಬಿಡು. ನೀನು ಕೂಡ ಭಯ ಪಡಬೇಡ. ವ್ಯಥೆ ಪಡಬೇಡ. ನಾವು ಇದನ್ನು ನಿಮ್ಮ ಬಳಿಗೇ ಮರಳಿ ತರುವೆವು ಮತ್ತು ಇದನ್ನು ಸಂದೇಶವಾಹಕರಲ್ಲಿ ಸೇರಿಸುವೆವು ಎಂದು ಸೂಚನೆ ನೀಡಿದ್ದೆವು." (28:7)

"ಓ ಮೂಸಾ! ನಾವು ಇನ್ನೊಮ್ಮೆ ನಿಮ್ಮ ಮೇಲೆ ಅನುಗ್ರಹ ತೋರಿದೆವು. ನಾವು ನಿಮ್ಮ ತಾಯಿಗೆ ಸೂಚನೆಕೊಟ್ಟ ಸಂದರ್ಭವನ್ನೂ ಸ್ಮರಿಸಿರಿ. ಇಂತಹ ಸೂಚನೆಯನ್ನು 'ದಿವ್ಯವಾಣಿ'ಯ ಮುಖಾಂತರವೇ ಕೊಡಲಾಗುತ್ತದೆ." "ಈ ಮಗುವನ್ನು ಪೆಟ್ಟಿಗೆಯೊಳಗೆ ಇರಿಸಿ ಬಿಡು. ಪೆಟ್ಟಿಗೆಯನ್ನು ನದಿಯಲ್ಲಿ ಬಿಟ್ಟು ಬಿಡು. ನದಿಯು ಅದನ್ನು ದಡಕ್ಕೆ ಎಸೆದು ಬಿಡುವುದು ಮತ್ತು ಅದನ್ನು ನನ್ನ ಶತ್ರು ಹಾಗೂ ಈ ಮಗುವಿನ ಶತ್ರು ಎತ್ತಿಕೊಳ್ಳುವನು" (ಎಂಬ ಸೂಚನೆ). ನಾನು ನನ್ನ ಕಡೆಯಿಂದ ನಿಮ್ಮ ಮೇಲೆ ಅನುರಾಗವನ್ನು ಆವರಿಸಿ ಬಿಟ್ಟೆನು ಮತ್ತು ನನ್ನ ಮೇಲ್ನೋಟದಲ್ಲೇ ನಿಮ್ಮ ಪೋಷಣೆಯ ವ್ಯವಸ್ಥೆ ಮಾಡಿದೆನು. ನಿಮ್ಮ ಸಹೋದರಿ ನಡೆಯುತ್ತಲಿದ್ದ ಸಂದರ್ಭವನ್ನು ಸ್ಮರಿಸಿರಿ. ಅವಳು ಹೋಗಿ, "ಈ ಶಿಶುವನ್ನು ಅತ್ಯುತ್ತಮ ರೀತಿಯಿಂದ ಪಾಲನೆ ಪೋಷಣೆ ಮಾಡಬಲ್ಲವಳನ್ನು ನಿಮಗೆ ತೋರಿಸಿಕೊಡಲೇ?" ಎಂದು ಹೇಳುತ್ತಾಳೆ. ಹೀಗೆ ನಿಮ್ಮ ತಾಯಿಯ ಕಣ್ತಣಿಯುವಂತಾಗಲು ಹಾಗೂ ಅವಳು ದುಃಖಿತಳಾಗದಂತಾಗಲು ನಾವು ನಿಮ್ಮನ್ನು ಪುನಃ ನಿಮ್ಮ ತಾಯಿಯ ಬಳಿಗೆ ತಲುಪಿಸಿ ಬಿಟ್ಟೆವು. (20:37-40)

ಅಲ್ಲಾಹನು ಮೂಸಾರ ತಾಯಿಗೆ ಈ ಮಗುವನ್ನು ನದಿಯಲ್ಲಿ ಹಾಕಿ ಬಿಡು ಎಂದು ಮಾತ್ರ ಹೇಳಿಬಿಟ್ಟದ್ದಲ್ಲ. ಬದಲಾಗಿ ತನ್ನ ಎಲ್ಲ ಯೋಜನೆಗಳನ್ನು ಆಕೆಗೆ ತಿಳಿಸಿದನು. ಬಾಹ್ಯನೋಟಕ್ಕೆ ಇದು ಮಗುವನ್ನು ಕಳಕೊಳ್ಳುವ ಯೋಜನೆಯೆಂದು ತೋರಿದರೂ ಇದು ವಾಸ್ತವದಲ್ಲಿ ಈ ಮಗುವನ್ನು ತನ್ನ ಅಂತಿಮ ಗುರಿಯ ಕಡೆಗೆ ತಲುಪಿಸುವ ಮಾರ್ಗವಾಗಿದೆಯೆಂದು ಆಕೆಗೆ ಸಾಂತ್ವನ ನೀಡಿದನು.

ಅಲ್ಲಾಹನು ಮೂಸಾರಿಂದ ಯಾವ ಕೆಲಸವನ್ನು ಮಾಡಿಸಬೇಕಾಗಿತ್ತೋ ಅದಕ್ಕೆ ಅತ್ಯುತ್ಕೃಷ್ಟ ಪಾಲನೆ-ಪೋಷಣೆ ಹಾಗೂ ಆ ಕೆಲಸಕ್ಕೆ ಅಗತ್ಯವಾಗಿರುವ ಎಲ್ಲ ವಿದ್ಯೆ ಮತ್ತು ಗುಣಲಕ್ಷಣಗಳಿಂದ ಅವರು ಭೂಷಿತವಾಗಿರುವ ಅಗತ್ಯವಿತ್ತು. ಅದಕ್ಕೆ ಅರಮನೆಗಿಂತ ಉತ್ತಮ ಸ್ಥಳ ಅವರ ತರಬೇತಿಗೆ ಬೇರಾವುದಾಗಿರಲು ಸಾಧ್ಯವಿತ್ತು?

ಓರ್ವ ಇಸ್ರಾಈಲ್ ಜನಾಂಗದ ಮಗು ಅದರ ಬದ್ಧ ವೈರಿಯಾಗಿರುವ ಕಿಬ್ತಿ ವಂಶದ ಮನೆತನವೊಂದರಲ್ಲಿ, ಅದು ಕೂಡಾ ಅರಸು ಮನೆತನದಲ್ಲಿ ಬೆಳೆಯುವುದೆಂದರೆ ಅದು ಸಾಧ್ಯವೇ ಇಲ್ಲದ ಮಾತಾಗಿತ್ತು. ಅರಸು ಮನೆತನದಲ್ಲಿ ಬೆಳೆಯುವುದೆಂದರೆ ದೊಡ್ಡ ವಿಷಯವಾಯಿತು. ಅಲ್ಲಿಗೆ ತಲುಪುವಷ್ಟು ಪ್ರಭಾವ ಅವರಲ್ಲಿರಲಿಲ್ಲ. ಆದರೆ ಅಲ್ಲಾಹನ ವ್ಯವಸ್ಥೆ ನೋಡಿ! ಅವನು ಯಾವುದನ್ನು ಮಾಡಬಯಸುತ್ತಾನೋ ಅದನ್ನು ಮಾಡಿಯೇ ತೀರುವನು. ಆ ಕಾರ್ಯವನ್ನು ವಿರೋಧಿಸುವಲ್ಲಿ ಮುಂಚೂಣಿಯಲ್ಲಿರುವವರೇ ಅದನ್ನು ಪೂರ್ಣಗೊಳಿಸುವಲ್ಲಿ ಅರಿತೋ ಅರಿಯದೆಯೋ ತಲ್ಲಿನರಾಗಿರುತ್ತಾರೆ. ಅದು ಪೂರ್ಣಗೊಂಡಾಗಲೇ ಅವರ ಗಮನಕ್ಕೆ ಅದು ಬರುತ್ತದೆ. ಬಾಹ್ಯ ನೋಟಕ್ಕೆ ಕಣ್ಣುಗಳು ಯಾವುದೇ ಒಂದು ಫಲಿತಾಂಶದ ನಿರೀಕ್ಷೆಯಲ್ಲಿರುತ್ತದೆ. ಆದರೆ ಕಟ್ಟ ಕಡೆಗೆ ಯಾವ ಫಲಿತಾಂಶ ಪ್ರಕಟವಾಗುತ್ತದೋ ಅದು ಅವರ ನಿರೀಕ್ಷೆಗೆ ಸಂಪೂರ್ಣ ವಿರುದ್ಧವಾಗಿರುತ್ತದೆ. ಆದುದರಿಂದಲೇ ಅಲ್ಲಾಹನು, "ನನ್ನ ತಂತ್ರವು ಅತ್ಯಂತ ಅಭೇದ್ಯವಾದುದು" (ಅಲ್ ಅಅ್‌ರಾಫ್: 183) ಎಂದು ಹೇಳಿದ್ದಾನೆ.

ಮೂಸಾರನ್ನು ಪೆಟ್ಟಿಗೆಯಲ್ಲಿಟ್ಟು ನದಿಯಲ್ಲಿ ತೇಲಿ ಬಿಡಲಾಗುತ್ತದೆ. ಹೊರನೋಟಕ್ಕೆ ಇದೊಂದು ಭಯಂಕರ ಕೆಲಸವಾಗಿತ್ತು. ತನ್ನ ಕೈಯಾರೆ ಅದನ್ನು ಮರಣದ ಬಾಯೊಳಗೆ ನೂಕಿ ಬಿಡುವುದಕ್ಕೆ ಸಮವಾಗಿತ್ತು. ಆದರೆ ನೈಜ ರಕ್ಷಕನು ಯಾರನ್ನು ರಕ್ಷಿಸುತ್ತಾನೋ ಅವನಿಗೆ ಯಾರು ತಾನೇ ಹಾನಿ ಮಾಡಬಲ್ಲರು? ನದಿಯಲ್ಲಿ ತೆರೆಗಳು ಮಗುವನ್ನು ಓಲಾಡಿಸುತ್ತಾ ಫಿರ್‌ಔನ್ ತನ್ನ ಪತ್ನಿ ಮತ್ತು ಪರಿಚಾರಕರೊಂದಿಗೆ ವಿಹಾರದಲ್ಲಿದ್ದ ಆ ಸ್ಥಳಕ್ಕೆ ತಂದು ಮುಟ್ಟಿಸುತ್ತವೆ. ಪೆಟ್ಟಿಗೆಯು ದಡದಲ್ಲಿ ಬಂದು ನಿಂತು ಬಿಡುತ್ತದೆ.

## ಸಿದ್ದೀಕುಲ್ ಅಕ್ಬರ್

(9ನೇ ಪುಟದಿಂದ)

ಸ್ವೀಕರಿಸಿದ ವೃತ್ತಾಂತವು ಈ ರೀತಿಯಾಗಿದೆ.

ಪ್ರವಾದಿವರ್ಯರು ಹುದೈಬಿಯಾ ಸಂಧಿಯ ಬಳಿಕ ಉಮ್ರಾ ನಿರ್ವಹಿಸುವುದಕ್ಕೆ ಮಕ್ಕಾಗೆ ಬಂದರು. ಇದು ಖಾಲಿದ್‌ರ ವಿಶ್ವಾಸ ಮತ್ತು ದೃಷ್ಟಿಕೋನದಲ್ಲಿ ಪಲ್ಲಟ ಸಂಭವಿಸುತ್ತಿದ್ದ ಸಮಯವಾಗಿತ್ತು. ಖಾಲಿದ್ ತನ್ನ ಇಸ್ಲಾಮಿ ನಡೆಗಿನ ನಿಷ್ಠಾಂತರವನ್ನು ಬಹಿರಂಗವಾಗಿಯೇ ಪ್ರಕಟಿಸಿಬಿಟ್ಟರು.

ಅವರು ಮಕ್ಕಾದ ಪ್ರಮುಖರೆಲ್ಲ ಸೇರಿರುವಾಗ ಎದ್ದು ನಿಂತು ಹೀಗೆ ಹೇಳಿದರು,

"ಎಂದೂ ಮುಹಮ್ಮದ್‌ರು ಮಂತ್ರವಾದಿಯಾಗಿರಲಿಲ್ಲ. ಅವರು ದೇವ ವಚನವನ್ನು ಮಾತ್ರವೇ ತಂದಿರುವುದು. ಇದು ವಿವೇಕವಂತರಿಗೆ ಚೆನ್ನಾಗಿ ಅರಿತಿದೆ. ಆದುದರಿಂದ ಅವರನ್ನು ಅನುಸರಿಸುವುದಕ್ಕೆ ವಿವೇಕಿಗಳು ಸಿದ್ಧರಾಗಬೇಕಾಗಿದೆ."

ಖಾಲಿದ್‌ರ ಬಹಿರಂಗ ನಿಷ್ಠಾಂತರ ಘೋಷಣೆಯಾದ ಕೂಡಲೇ ಇಕ್ರಿಮಾ ಮತ್ತು ಖಾಲಿದ್‌ರ ನಡುವೆ ವಾಗ್ಯುದ್ಧವೇ ನಡೆಯಿತು. ಆದರೂ ಯಾವುದೇ ಅನಿಷ್ಟ ಸಂಭವಿಸುವಷ್ಟು ತೀವ್ರವಾಗಿರಲಿಲ್ಲ.

ಅಬೂಸುಫ್‌ಯಾನ್‌ರು ಖಾಲಿದ್ ತನ್ನ ನಿಷ್ಠಾಂತರವನ್ನು ಘೋಷಿಸುವ ವೇಳೆ ಉಪಸ್ಥಿತರಿರಲಿಲ್ಲ. ಖಾಲಿದ್‌ರ ಇಸ್ಲಾಮ್ ಸ್ವೀಕಾರದ ಸುದ್ದಿ ಕೇಳಿ ಅವರು ಖಾಲಿದ್‌ರನ್ನು ಕರೆಸಿಕೊಂಡರು.

ಅಬೂಸುಫ್‌ಯಾನ್‌ರು ಖಾಲಿದ್‌ರನ್ನು ವಿಚಾರಿಸಿದರು, "ನಾನು ನಿಮ್ಮ ಕುರಿತು ಕೇಳಿರುವುದು ನಿಜವೇ?"

ಖಾಲಿದ್ ನಿಜವೆಂದು ಉತ್ತರಿಸಿದರು. ಅಷ್ಟು ಮಾತ್ರವಲ್ಲ ಅಬೂಸುಫ್‌ಯಾನ್‌ರ ಎದುರಿನಲ್ಲಿಯೇ ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ಸಮರ್ಥಿಸಿಕೊಂಡರು. ಇದನ್ನು ಕೇಳಿದಾಗ ಅಬೂಸುಫ್‌ಯಾನ್ ಆಘಾತಗೊಂಡರು. ಅವರು ಹೌಹಾರಿದರು. ಖಾಲಿದ್‌ರ ವಿರುದ್ಧ ಘರ್ಜಿಸಿದರು,

"ಲಾತ ಉಝ್ಝಾದಾಣೆಗೂ ಇದು ಸ್ವಲ್ಪ ಮೊದಲು ತಿಳಿದಿದ್ದರೆ, ಮುಹಮ್ಮದ್‌ರನ್ನು ಬಿಟ್ಟು ನಿಮ್ಮಿಂದಲೇ ಪ್ರಾರಂಭವಾಗುತ್ತಿತ್ತು."

ಆದರೆ ಅಬೂಸುಫ್‌ಯಾನ್‌ರ ಬೆದರಿಕೆಗೆ ಖಾಲಿದ್ ಸೊಪ್ಪು ಹಾಕುವರೇ? ಅವರು ಕೂಡಾ ಬಿಟ್ಟುಕೊಡಲಿಲ್ಲ. ಅವರು ಇನ್ನಷ್ಟು ಉಜ್ವಲ ವಾದ ಸ್ವಾಭಿಮಾನದಿಂದ ತಿರುಗೇಟನ್ನು ನೀಡಿದರು-

"ಅಲ್ಲಾಹನಾಣೆಗೂ ನಿಂದಕರು ನಿಂದಿತರಾಗಿಯೇ ಬಿಡುತ್ತಾರೆಂಬುದು ಸತ್ಯವಾಗಿದೆ."

ಆಮೇಲೆ ಖಾಲಿದ್‌ರು ಹೆಚ್ಚು ಕಾಲ ಮಕ್ಕಾದಲ್ಲಿ ಉಳಿಯಲಿಲ್ಲ. ಅವರು ಮದೀನಕ್ಕೆ ಹೊರಟು ಹೋದರು. ಅಲ್ಲಿಯೂ ಅವರಿಗೆ ಸಮಾಜದಲ್ಲಿ ಸೂಕ್ತವಾದ ಸ್ಥಾನಮಾನಗಳು ಲಭ್ಯವಾದುವು. ಆನಂತರ ಅವರು ಶತ್ರುಗಳ ವಿರುದ್ಧ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಯುದ್ಧರಂಗದಲ್ಲಿ ವಹಿಸಿರುವ ಪಾತ್ರ ಹಿರಿದಾಗಿದೆ. ರೋಮ್ ಮತ್ತು ಪರ್ಶಿಯಗಳೆಂಬ ಅಂದಿನ ಎರಡು ಬಲಿಷ್ಠ ಸಾಮ್ರಾಜ್ಯಗಳ ಪತನದಲ್ಲಿ ಖಾಲಿದ್ ಬಿನ್ ವಲೀದ್ ನಿರ್ವಹಿಸಿರುವ ಪಾತ್ರವು ಸುವ್ಯಕ್ತವಾಗಿದೆ. ಖಾಲಿದ್ ಒಬ್ಬ ಸೇನಾಧಿಪತಿಗೆ ಎಲ್ಲ ರೀತಿಯಿಂದಲೂ ಸೂಕ್ತ ವ್ಯಕ್ತಿಯಾಗಿದ್ದರು. ಆದುದರಿಂದಲೇ ಒಂದು ಪ್ರಬಲವಾದ ಸೇನಾ ದಳಕ್ಕೆ ಖಾಲಿದ್‌ರನ್ನು ಅಬೂಬಕರ್ ನೇಮಿಸಿದ್ದರು.

# ಈ ಬ್ಯಾಂಕು ಎಲ್ಲರಿಗೂ ಬೇಕು

## ಇಸ್ಲಾಮೀ ಬ್ಯಾಂಕಿಂಗ್- 51

ಡಾ| ಮುಹಮ್ಮದ್ ಆರಿಫ್

**ಬ**ಹ್ರೈನ್‌ನಲ್ಲಿರುವ ಅಕೌಂಟಿಂಗ್ ಆ್ಯಂಡ್ ಆಡಿಟಿಂಗ್ ಆರ್ಗನೈಝೇಶನ್ಸ್ ಫಾರ್ ಇಸ್ಲಾಮಿಕ್ ಫೈನಾನ್ಶಿಯಲ್ ಇನ್‌ಸ್ಟಿಟ್ಯೂಟ್ಸ್ (AAOIFI) ಇಸ್ಲಾಮಿಕ್ ಬ್ಯಾಂಕುಗಳ ಎಕೌಂಟಿಂಗ್, ಆಡಿಟಿಂಗ್ ರೀತಿಗಳ ಏಕೀಕರಣಕ್ಕೆ ಕ್ರಮ ಕೈಗೊಳ್ಳುತ್ತಿದೆ. ಕೌಲಾಲಂಪುರದಲ್ಲಿ ಇತ್ತೀಚೆಗೆ ಆರಂಭವಾದ ಇಸ್ಲಾಮಿಕ್ ಫೈನಾನ್ಶಿಯಲ್ ಸರ್ವಿಸ್ ಬೋರ್ಡ್ (IFSB) ಈ ಕ್ರಮವನ್ನು ಆರಂಭಿಸಿದೆ. ಇಸ್ಲಾಮೀ ಹಣಕಾಸು ಸಂಸ್ಥೆಗಳನ್ನು ನಿಯಂತ್ರಿಸುವುದಕ್ಕೆ ಮತ್ತು ಸೂಚನೆಗಳನ್ನು ನೀಡುವುದಕ್ಕೆ ಹಾಗೂ ಈ ಕ್ಷೇತ್ರದಲ್ಲಿ ನಡೆಯುವ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಕೆಲವಾರು ಸಂಸ್ಥೆಗಳು ಜೊತೆಗೂಡಿ ಈ ಸಂಸ್ಥೆಗೆ ರೂಪು ನೀಡಿದೆ.

ಇಸ್ಲಾಮೀ ಹಣಕಾಸು ವಿನಿಮಯ ಮಾರುಕಟ್ಟೆ ಹಲವು ಕಾರಣಗಳಿಂದಾಗಿ ಒಂದೇ ರಾಷ್ಟ್ರಕ್ಕೆ ಸೀಮಿತವಾಗಿದೆ. ಇದಕ್ಕೆ ಶರೀಅತ್ ನಿಯಮಗಳ ವಿವಿಧ ರೀತಿಯ ವ್ಯಾಖ್ಯಾನಗಳು, ಕಾನೂನು ವ್ಯವಸ್ಥೆಗಳು, ವಿವಿಧ ರೀತಿಯ ಹಣಕಾಸು ವಿನಿಮಯದ ರೀತಿಗಳು ಕಾರಣವಾಗಿವೆ. ಜಾಗತೀಕರಣವು ತನ್ನ ನಿಯಂತ್ರಣಗಳಿಂದ ಈ ರೀತಿ ಒತ್ತಟ್ಟಿಗಿರಿಸಿದೆ. ಅಂತಾರಾಷ್ಟ್ರೀಯ ಇಸ್ಲಾಮಿಕ್ ಸಂಸ್ಥೆಗಳಾದ AAQIFI ಮತ್ತು IFSBಯ ಬೆಂಬಲ IMF, BISಗಳ ಅಂಗೀಕಾರ ಲಭಿಸಿದರೆ ಪರಂಪರಾಗತ ಬ್ಯಾಂಕುಗಳ ಮುಂದೆ ಇಸ್ಲಾಮಿಕ್ ಬ್ಯಾಂಕುಗಳಿಗೆ ಗಟ್ಟಿಯಾಗಿ ತಳವೂರುವಂತೆ ಬೆಳೆಯುವುದಕ್ಕೆ ಸಾಧ್ಯವಾಗಬಹುದು.

ಜಾಗತೀಕರಣದಿಂದಾದ ಲಾಭವೆಂದರೆ ಇಸ್ಲಾಮಿಕ್ ಹಣಕಾಸಿನ ವಿನಿಮಯ ರೀತಿಗಳು ಮುಸ್ಲಿಮರ ನಡುವೆಯಾದಂತೆ ಮುಸ್ಲಿಮೇತರರ ನಡುವೆಯೂ ಅಂಗೀಕಾರ ಹೆಚ್ಚಿಸಿಕೊಳ್ಳುವುದಕ್ಕೆ ಸಾಧ್ಯವಾಗಿರುವುದಾಗಿದೆ. ಆರ್ಥಿಕ ಕ್ಷೇತ್ರದಲ್ಲಿ ನೈತಿಕತೆಯನ್ನು ಬಯಸುವ ಎಲ್ಲರೂ ಆಶ್ರಯಿಸಬಹುದಾದ ವಿಚಾರವಾಗಿ ಇಸ್ಲಾಮಿಕ್ ಹಣಕಾಸಿನ ವಿನಿಮಯಗಳು ಪರಿವರ್ತನೆಗೊಂಡಿವೆ. ಬಡ್ಡಿ ನಿಷೇಧ ಮಾತ್ರವಲ್ಲ, ಮಾನವರನ್ನು ವಂಚಿಸುವ ಎಲ್ಲ ಆರ್ಥಿಕ ವ್ಯವಹಾರಗಳನ್ನು ಇಸ್ಲಾಮೀ ರೀತಿಯು ನಿಷೇಧಿಸುತ್ತದೆ. ಶೋಷಣೆ, ಭ್ರಷ್ಟಾಚಾರ, ವಂಚನೆ ಮುಂತಾದವುಗಳಿಂದ ಇಸ್ಲಾಮೀ ಹಣಕಾಸಿನ ನಿಯಮಗಳು ಮುಕ್ತವಾಗಿವೆ. ಇದು ಧರ್ಮವೊಂದರ ಬಯಕೆ ಮಾತ್ರವಾಗಿಲ್ಲ. ನ್ಯಾಯ ನೀತಿಯನ್ನು ಬಯಸುವ ಎಲ್ಲರ ಬಯಕೆ ಕೂಡಾ ಆಗಿದೆ. ಆದುದರಿಂದ ಮುಸ್ಲಿಮೇತರರ ನಡುವೆ ಇಸ್ಲಾಮೀ ಹಣಕಾಸಿನ ವಿನಿಮಯ ರೀತಿಗಳನ್ನು ಅವಲಂಬಿಸುವವರ ಸಂಖ್ಯೆ ಹೆಚ್ಚುತ್ತಿದೆ. ಮಲೇಶ್ಯಾದ HSBC ಅಯಾನ ಫೈನಾನ್ಶಿಯಲ್‌ನಲ್ಲಿ ವ್ಯವಹರಿಸುವ ಐವರಲ್ಲಿ ಒಬ್ಬರು ಮುಸ್ಲಿಮೇತರರು ಎಂಬ ವಿಚಾರ ಇಲ್ಲಿ ಉಲ್ಲೇಖವಾಗಿದೆ.

# ನೀವು ಹೇಗಿರುತ್ತೀರೋ ಹಾಗೆ ‘ಅವಳು’ ಇರುತ್ತಾಳೆ

ಮ ಹಿ ಳಾ ವೇ ದಿ ಕೆ

ಮರ್ಯಮ್ ಜಮೀಲಾ, ಚೊಕ್ಕಬೆಟ್ಟು.



ಒಂದು ಸುಂದರ, ಸುಶಿಕ್ಷಿತ, ಶುಚಿತ್ವದ ಕುಟುಂಬದ ತಯಾರಿಗೆ ಅಡಿಪಾಯವಾಗಿರುವುದು ಒಬ್ಬ ಮಹಿಳೆ ಎಂದು ಹೇಳಬಹುದು. ಈ ಸಮಾಜದಲ್ಲಿ ಒಬ್ಬ ಮಹಿಳೆ ಮೊದಲು ಮಗಳಾಗಿ, ನಂತರ ಪತ್ನಿಯಾಗಿ, ತಾಯಿಯಾಗಿ ಮತ್ತೆ ಅತ್ತೆಯಾಗಿ, ಕೊನೆಗೆ ಅಜ್ಜಿಯಾಗಿ ಕಾರ್ಯ ನಿರ್ವಹಿಸುತ್ತಾಳೆ. ಮಗಳಾಗಿ ಕಾರ್ಯ ನಿರ್ವಹಿಸುವುದು ಜೀವನದ ಮೊದಲ ಹಂತ. ಆದ್ದರಿಂದ ಓರ್ವ ಹೆಣ್ಣು ಮಗಳಿಗೆ ಮನೆಯಲ್ಲಿ ಒಳ್ಳೆಯ ಪರಿಸರವನ್ನು ನಿರ್ಮಿಸಿ ಕೊಡಬೇಕು. ಮನೆಯಲ್ಲಿ ತಂದೆ-ತಾಯಿಯೊಂದಿಗೆ, ಸಹಪಾಠಿಗಳೊಂದಿಗೆ ಹಿರಿಯ, ಕಿರಿಯರೊಂದಿಗೆ ಹೇಗೆ ವರ್ತಿಸುತ್ತಾಳೆ ಎಂಬುದನ್ನು ಗಮನಿಸುತ್ತಿರಬೇಕು. ಮಕ್ಕಳು ಮನೆಯಲ್ಲಿರುವಾಗ ಅವರ ಎದುರು ನೆರೆಕರೆಯವರದ್ದಾಗಲಿ ಅಥವಾ ಸಂಬಂಧಿಕರ ವಿಷಯವಾಗಲಿ ಮಾತನಾಡಬಾರದು. ಇದರಿಂದ ಮಕ್ಕಳು ಕೂಡ ಅದೇ ಅಭ್ಯಾಸವನ್ನು ಮುಂದುವರಿಸಬಹುದು. ಮಕ್ಕಳ ಎದುರು ಒಳ್ಳೆಯ ಮಾತನ್ನೇ ಆಡಬೇಕು. ಮನೆಯಲ್ಲಿ ಕೆಟ್ಟ ಮಾತಿನ ಬಳಕೆ ಇದ್ದರೆ ಅದನ್ನೇ ಆ ಮಗು ಕಲಿಯುತ್ತದೆ. ಯಾವುದು ಸರಿ, ಯಾವುದು ತಪ್ಪು ಎಂಬುದರ ಬಗ್ಗೆ ತಿಳುವಳಿಕೆ ನೀಡಬೇಕು.

ಇನ್ನು ಮಗು ಬೆಳೆಯುತ್ತಿದ್ದಂತೆ ವಯಸ್ಸಿಗೆ ತಕ್ಕಂತೆ ಅವರಿಗೆ ಅವರ ಜವಾಬ್ದಾರಿಯನ್ನು ವಹಿಸಿಕೊಡಬೇಕು. ಬೆಳೆಯುತ್ತ ಹೋದಂತೆ ಮನೆ ಕೆಲಸದಲ್ಲಿ ಕೈ ಜೋಡಿಸುವಂತೆ ತಿಳಿಸಿ ಕೊಡಬೇಕು. ತಾಯಿ ಕೆಲಸ ಮಾಡುವಾಗ ಚಿಕ್ಕ ಚಿಕ್ಕ ಕೆಲಸಗಳಿಗೆ ಮಗಳನ್ನು ಸೇರಿಸಬೇಕು. ಅವಳಿಗೆ ಮದುವೆಯ ವಯಸ್ಸಾಗುತ್ತಿದ್ದಂತೆ ಅಡುಗೆ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ಕಲಿಸಿ ಕೊಡಬೇಕು. ನಮ್ಮಲ್ಲಿ ಕೆಲವು ತಾಯಂದಿರ ಮಾತಿದೆ- “ಮದುವೆ ಆದ ಮೇಲೆ ಅಡುಗೆ ಕೆಲಸವನ್ನು ಕಲಿಯುತ್ತಾರೆ” ಎಂದು. ಆದರೆ ಇದರಿಂದ ನಿಮ್ಮ ಮಗಳು ಮದುವೆಯಾದ ಹೊಸದರಲ್ಲಿ ಪತಿಯ ಮನೆಯಲ್ಲಿ ಅವಹೇಳನಕ್ಕೆ ಗುರಿಯಾಗಬಹುದು. ಒಳ್ಳೆಯ ರುಚಿಕರವಾದ ಅಡುಗೆಯನ್ನು ಮಾಡಿ ಬಡಿಸುವುದರಿಂದ ಪತಿಯ ಮನೆಯವರ ಪ್ರೀತಿಗೆ ಪಾತ್ರರಾಗಬಹುದು. ಪಾಕ ಶಾಸ್ತ್ರವನ್ನು ಕಲಿಯಲು ಈಗ ಟಿ.ವಿ.ಗಳನ್ನು, ಪುಸ್ತಕಗಳನ್ನು ಉಪಯೋಗಿಸಬಹುದು. ಆದ್ದರಿಂದ ಒಬ್ಬ ಹೆಣ್ಣು ಮಗಳಿಗೆ ಲೌಕಿಕ ಶಿಕ್ಷಣ, ಧಾರ್ಮಿಕ ಶಿಕ್ಷಣದ ಜೊತೆಗೆ ಪಾಕಶಾಸ್ತ್ರವನ್ನು ಕಲಿಸಿದರೆ ಅವಳೊಬ್ಬ ಉತ್ತಮ ಪತ್ನಿಯಾಗಿ ತನ್ನ ಪತಿಯೊಂದಿಗೆ ಜೀವನ ನಡೆಸಲು ಸಾಧ್ಯ.

ಇನ್ನು ಪತಿಯ ಮನೆಯಲ್ಲಿ ಒಬ್ಬ ಹೆಣ್ಣು ಬಹಳ ಜಾಗರೂಕತೆಯಿಂದ ಜೀವನ ನಡೆಸಬೇಕಾಗುತ್ತದೆ. ಪತಿಯನ್ನು, ಪತಿಯ ಮನೆಯವರನ್ನು ಆದರಿಸಬೇಕಾದುದು ಅವಳ ಕರ್ತವ್ಯವಾಗಿದೆ. ಒಂದು ಹೆಣ್ಣಿನಿಂದ ಒಂದು ಮನೆ ಬೆಳಗಲು ಬಹಳ ದಿನ ಬೇಕಾಗುತ್ತದೆ. ಅದರೆ ಅದೇ ಹೆಣ್ಣಿನಿಂದ ಒಂದು ಮನೆ ನಾಶವಾಗಲು ಕೆಲವೇ ಗಳಿಗೆ ಸಾಕಾಗುತ್ತದೆ. ಇಂದಿನ ಕಾಲದಲ್ಲಿ ನಾವು ತುಂಬು ಸಂಸಾರವನ್ನು ಕಾಣುವುದು ತುಂಬಾ ಕಡಿಮೆ. ಒಂದು ಹೆಣ್ಣು ಮನೆಗೆ ಬಂದ ಕೆಲವೇ ದಿನಗಳಲ್ಲಿ ಅಲ್ಲಿ ಒಡಕು, ಪರಸ್ಪರ ಭಿನ್ನಾಭಿಪ್ರಾಯಗಳು ಪ್ರಾರಂಭವಾಗುತ್ತವೆ. ಅತ್ತೆಯನ್ನು ಕಂಡರೆ ಸೊಸೆಗೆ ಆಗೋಲ್ಲ, ಸೊಸೆಯ ಮಾತು ಅತ್ತೆಗೆ ಹಿಡಿಸಲ್ಲ. ಏಕೆಂದರೆ ತಾಯಿ ಮನೆಯಲ್ಲಿ ತನ್ನ ಇಚ್ಛೆಗೆ ಬಂದಂತೆ ಬೆಳೆದ ಹೆಣ್ಣು, ಅತ್ತೆ ಮನೆಯಲ್ಲಿ ಕೂಡ ತನ್ನ ಅದೇ ಅಭ್ಯಾಸವನ್ನು ಮುಂದುವರಿಸುತ್ತಾಳೆ. ಅಲ್ಲಿ ಅವಳಿಗೆ ತಾಯಿ ಬುದ್ಧಿ ಹೇಳಿ ಸರಿಪಡಿಸುವುದಿಲ್ಲ. ಆದ್ದರಿಂದ ಪತಿಯ ಮನೆಯಲ್ಲಿ ಯಾವ ರೀತಿ ವರ್ತಿಸಬೇಕೆಂದು ತಾಯಿ ಮೊದಲೇ ಅವಳಿಗೆ ತಿಳಿ ಹೇಳಬೇಕು.

ಇನ್ನು ಮದುವೆಯಾದ ಮೇಲೆ ಪತಿಯೊಂದಿಗಿನ ಸಂಬಂಧವನ್ನು ಬಲಿಷ್ಠಗೊಳಿಸಬೇಕು. ಪತಿಯ ಮನೆಯವರು ಕೂಡ ಅವಳ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಅವಳೂ ಕೂಡ ತನ್ನ ತಂದೆ ತಾಯಿಯನ್ನು, ತನ್ನ ಕುಟುಂಬವನ್ನು ಬಿಟ್ಟು ಹೊಸ ಪರಿಸರಕ್ಕೆ ಹೊಂದಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಮದುವೆಯಾದ ಮೇಲೆ ಅವರು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಬಾಳುವಂತೆ ಅವರಿಗೆ ಅವಕಾಶ ಒದಗಿಸಿ ಕೊಡಬೇಕು. ಅವರ ಬೇಕು ಬೇಡಗಳಿಗೆ ಅತ್ತೆಯೂ ಸ್ಪಂದಿಸಬೇಕು. ಅತ್ತೆ ಸೊಸೆಯನ್ನು ಪ್ರೀತಿಸಬೇಕು.

ಇತ್ತೀಚೆಗೆ ಟಿ.ವಿ.ಯಲ್ಲಿ “ಪತಿಯು ತಾಯಿಯ ಮಾತು ಕೇಳಬೇಕೆ ಅಥವಾ ಪತ್ನಿಯ ಮಾತು ಕೇಳಬೇಕೆ” ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅದರಲ್ಲಿ ಶೇ. 40 ಮಹಿಳೆಯರು ತಾಯಿಯ ಮಾತನ್ನು ಕೇಳಬೇಕು ಎಂದರು. ಇನ್ನು ಶೇ. 40 ಮಹಿಳೆಯರು ಇಬ್ಬರ ಮಾತನ್ನೂ ಅರ್ಥ ಮಾಡಿಕೊಂಡು ಸುಧಾರಿಸಿಕೊಂಡು ಹೋಗಬೇಕು. ಏಕೆಂದರೆ ಮಗನನ್ನು ಹೆತ್ತು ಹೊತ್ತು ಪೋಷಿಸಿದ ತಾಯಿಯು ಒಂದು ಕಡೆಯಾದರೆ, ತನ್ನ ಮನೆಯವರನ್ನೆಲ್ಲಾ ಬಿಟ್ಟು ಪತಿಯೇ ನನಗೆ ಆಧಾರ ಎಂದು ನಂಬಿ ಬಂದಿರುವ ಪತ್ನಿಯು ಇನ್ನೊಂದು ಕಡೆ. ಆದ್ದರಿಂದ ಇಬ್ಬರನ್ನೂ ಸಮ ಪ್ರಮಾಣದಲ್ಲಿ ನೋಡಬೇಕಾದುದು ಮಗನ ಕರ್ತವ್ಯವಾಗಿದೆ. ಪದೇ ಪದೇ ಪತಿಯ ಮನೆಯಿಂದ ತಾಯಿಯ ಮನೆಗೆ ಬಂದು ಕುಳಿತುಕೊಳ್ಳುವುದನ್ನು ಮಾಡಬಾರದು. ಪತಿ ಕೆಲಸ ಮುಗಿಸಿ ಬರುವಾಗ ಮುಗುಳ್ನಗೆಯಿಂದ ಬರಮಾಡಿಕೊಳ್ಳಿರಿ. ಇದರಿಂದ ಅರ್ಧಕ್ಕೆ ಅರ್ಧದಷ್ಟು ಅವರಿಗೆ ಸಮಾಧಾನ ಸಿಗಬಹುದು. ಅವರಿಗೆ ಕುಡಿಯಲು ನೀರು ಕೊಟ್ಟು ಪ್ರೀತಿಯಿಂದ ಮಾತನಾಡಿಸಿ. ನಮ್ಮಲ್ಲಿ ಕೆಲವರಿದ್ದಾರೆ. ಮನೆಗೆ ಬಂದರೂ ಅವರು ಯಾವುದೇ ಪರಿವೆ ಇಲ್ಲದೇ ಟಿ.ವಿ. ಧಾರಾವಾಹಿಗಳಲ್ಲಿ ಮುಳುಗಿರುತ್ತಾರೆ.

ಇನ್ನು ಪತಿ ತನ್ನ ಕೆಲಸ ಕಾರ್ಯಗಳ ನಡುವೆಯೂ ಒಂದಷ್ಟು ಸಮಯ ತನ್ನ ಪತ್ನಿಗಾಗಿ ಕಾದಿರಿಸಬೇಕು. ಏಕೆಂದರೆ ಯಾವಾಗಲೂ ಅಡುಗೆ, ಮಕ್ಕಳು, ಉಪಚಾರ ಎಂದು ಕಾಲ ಕಳೆಯುವ ಮಹಿಳೆಗೂ ಸ್ವಲ್ಪ ಬದಲಾವಣೆ ಬೇಕು ಅನ್ನಿಸಬಹುದು. ಸಮಯವಿದ್ದಾಗ ಪತ್ನಿಯನ್ನು, ಮಕ್ಕಳನ್ನು ಹೊರಗಡೆ ಸುತ್ತಾಡಲು ಕರೆದುಕೊಂಡು ಹೋಗಿ. ಆದರೆ ಪತ್ನಿಯು ಪತಿಯ ಪರಿಸ್ಥಿತಿಯನ್ನು ಕೂಡ ಅರ್ಥಮಾಡಿ ಕೊಳ್ಳಬೇಕು. ನಮ್ಮಲ್ಲಿ ಕೆಲವು ಮಹಿಳೆಯರಿದ್ದಾರೆ. ಪತಿ ಹೇಗೆ ಬೇಕಾದರೂ ಇರಲಿ, ನನಗೆ ಮಾತ್ರ ಹೇಳಿದ್ದೆಲ್ಲವನ್ನೂ ತಂದು ಕೊಡಬೇಕು. ಪತಿ ಸಾಲ ಮಾಡಿಯಾದರೂ ಪಕ್ಕದ ಮನೆಯಲ್ಲಿ ಯಾವೆಲ್ಲ ಸಾಮಾನು ಇದೆಯೋ ಅದನ್ನು ತನ್ನ ಮನೆಗೂ ತರಬೇಕು. ‘ಹಾಸಿಗೆ ಇದ್ದಷ್ಟು ಕಾಲು ಚಾಚು’ ಎಂಬೊಂದು ಗಾದೆ ಇದೆ. ಈ ಗಾದೆಯನ್ನು ಅರ್ಥ ಮಾಡಿಕೊಂಡ ಮಹಿಳೆಯರ ಜೀವನ ಖಂಡಿತ ಸುಖಮಯವಾಗಿರಲು ಸಾಧ್ಯವಿದೆ. ಆದ್ದರಿಂದ ಜೀವನಬಂಡಿ ಸಾಗಬೇಕಾದರೆ ಇಬ್ಬರ ಕೈಗಳೂ ಸೇರಬೇಕು. ಆಗಲೇ ಸುಖಕರವಾದ ಜೀವನ ನಡೆಸಲು ಸಾಧ್ಯ. ಪತಿ-ಪತ್ನಿಯರು ಸುಖ ಶಾಂತಿಯಿಂದ ಯಾವುದೇ ಭಿನ್ನಾಭಿಪ್ರಾಯವಿಲ್ಲದೇ ಜೀವನ ನಡೆಸುತ್ತಿದ್ದರೆ, ಅಂತಹ ಕುಟುಂಬದಿಂದ ಬಂದ ಮಕ್ಕಳು ಕೂಡ ಮುಂದೆ ತಮ್ಮ ಸಂಸಾರವನ್ನು ಒಳ್ಳೆಯ ರೀತಿಯಿಂದ ನಡೆಸಿಕೊಂಡು ಹೋಗುವ ಸಾಧ್ಯತೆ ಇದೆ.

# ಕುಟುಂಬ ತರಬೇತಿ

## ಕುಟುಂಬ ಒಂದು ಅಧ್ಯಯನ-34

ಮುಶ್ತಾಕ್ ತಿಜಾರವಿ

ಈ ಸರಣಿಯಲ್ಲಿ ಮಹತ್ವಪೂರ್ಣವಾದ ಒಂದು ಮಾತೆಂದರೆ, ಈಮಾನನ್ನು (ವಿಶ್ವಾಸವನ್ನು) ಬೌದ್ಧಿಕ ಕಸರತ್ತು ಮತ್ತು ಧ್ಯಾನ ಜ್ಞಾನಗಳಿಂದ ಸರಿಯಾದ ರೀತಿಯಲ್ಲಿ ಅರಿತುಕೊಳ್ಳುವುದು ಅಸಾಧ್ಯವಿದೆ ಎಂಬುದಾಗಿದೆ. ಅಲ್ಲಾಹನ ಸಂದೇಶವಾಹಕರಿಗೆ ವಹ್ಯ್‌ನ ಮೂಲಕ ಜ್ಞಾನವು ತಲುಪುತ್ತಿತ್ತು. ಈ ವಹ್ಯ್‌ನ ಶೃಂಖಲೆಯು (ಪ್ರವಾದಿತ್ವದ ಸರಪಣಿಯು) ಹಝ್ರತ್ ಮುಹಮ್ಮದರಲ್ಲಿಗೆ(ಸ) ಕೊನೆಗೊಂಡಿದೆ.

ಇನ್ನೊಂದು ಮುಖ್ಯ ವಿಚಾರವೆಂದರೆ, ಪುಸ್ತಕದ ಮಾರ್ಗದರ್ಶನಕ್ಕಾಗಿ ವಿದ್ಯಾರ್ಥಿಯು ಶಿಕ್ಷಕ ಮತ್ತು ಪುಸ್ತಕಗಳ ಮಾರ್ಗದರ್ಶನವನ್ನು ಅವಲಂಬಿಸುತ್ತಾನೋ ಅದೇ ರೀತಿ ನಾವು ಪವಿತ್ರ ಕುರ್‌ಆನ್, ಹದೀಸ್, ಪ್ರವಾದಿ ಚರ್ಯೆ, ಧಾರ್ಮಿಕ ಪುಸ್ತಕಗಳು ಮತ್ತು ಧಾರ್ಮಿಕ ವಕ್ತಾರರ ಮಾರ್ಗದರ್ಶನದ ಮೇಲೆ ಬುದ್ಧಿಯನ್ನು ಬಳಸಬೇಕಾಗಿದೆ. ಆಧುನಿಕ ಸಂಶೋಧನೆ ಮತ್ತು ಅಧ್ಯಯನಗಳು ತಿಳಿಸುವಂತೆ ಧರ್ಮ ಮತ್ತು ಈಮಾನ್ ಮಾನವ ಪ್ರಕೃತಿಯಾಗಿದೆ. ಮಾನವನಿಗೆ ಸರಿಯಾದ ಮಾರ್ಗದರ್ಶನ ಸಿಕ್ಕಿದರೆ ಅವರೊಳಗೆ ಅಡಗಿರುವ ಈಮಾನ್‌ನ ವಾಸ್ತವಿಕತೆಯು ಅನುಭವ ವೇದ್ಯವಾಗುವುದು. ಅದನ್ನು ಜೀವನ ಪದ್ಧತಿಯಾಗಿ ಮಾಡಿ ತನ್ನ ವ್ಯವಹಾರ ಮತ್ತು ಕರ್ಮದಲ್ಲಿ ಕಾರ್ಯರೂಪಕ್ಕಿಳಿಸುವುದು ಆಗ ಗೋಚರಕ್ಕೆ ಬರುತ್ತದೆ.

ಈಮಾನ್‌ನ ನಂತರ ಕರ್ತವ್ಯವು ಅತಿ ಪ್ರಾಮುಖ್ಯವಾಗಿದೆ. ಈ ಆರಾಧನೆಯಲ್ಲಿ ದಿನದ ಐದು ಹೊತ್ತು ವ್ಯಕ್ತಿ ದೇವನ ದರ್ಶನ ಪಡೆಯುವುದು ಎಂದು ಅರ್ಥವಾಗಿದೆ. ಆದುದರಿಂದ ಮಕ್ಕಳಿಗೆ ಪ್ರಾರಂಭದಿಂದ ನಮಾಝ್ ಮಾಡುವುದನ್ನು ಅಭ್ಯಾಸ ಮಾಡಬೇಕು.

"ಮಕ್ಕಳಿಗೆ 10 ವರ್ಷ ಪ್ರಾಯವಾದ ಅವರನ್ನು ಹಾಸಿಗೆಯಿಂದ ಬೇರ್ಪಡಿಸಿರಿ" (ಅಬೂದಾವೂದ್) ಎಂಬುದು ಪ್ರವಾದಿ ಶಿಕ್ಷಣವಾಗಿದೆ.

"ತಮ್ಮ ಮಕ್ಕಳು ಮತ್ತು ಮನೆಯವರ ಒಳಿತಿಗಾಗಿ ಶಿಕ್ಷಣವನ್ನು ನೀಡಿರಿ ಮತ್ತು ಅವರ ತರಬೇತಿಯನ್ನು ಮಾಡಿರಿ" (ವರದಿ: ಇಬ್ನು ಅಬ್ದುರ್ರಝ್ಝಾಕ್) ಎಂದು ಕೂಡಾ ಪ್ರವಾದಿವರ್ಯರು(ಸ) ಹೇಳಿದ್ದಾರೆ. ಮಕ್ಕಳಲ್ಲಿ ಉತ್ತಮ ಅಭ್ಯಾಸವನ್ನು ಬೆಳೆಸುವ ಪ್ರಯತ್ನವನ್ನು ಆರಂಭಿಸಬೇಕಾಗಿದೆ. ಅವರ ಆರೋಗ್ಯದ ಕುರಿತು ಅತೀವ ಕಾಳಜಿಯಿರಿಸಬೇಕಾಗಿದೆ. ಅದರಲ್ಲಿ ಸಾಮಾಜಿಕ ಶಿಷ್ಟಾಚಾರ, ಉನ್ನತ ಶಿಕ್ಷಣ, ಉತ್ತಮ ಕಲಾತ್ಮಕ ತರಬೇತಿ, ಆತ್ಮಸ್ಥೈರ್ಯ, ಸಾಹಸ, ಶೌರ್ಯ, ಧೈರ್ಯ, ಮಿತವ್ಯಯ, ಸಂತೋಷ, ಪ್ರಾಮಾಣಿಕತೆ ಮುಂತಾದ ಸದ್ಗುಣಗಳು ಅವರಲ್ಲಿ ಮೂಡಿ ಬರಬೇಕಾಗಿದೆ. ಅದು ಹುಟ್ಟಿಕೊಳ್ಳುವುದಕ್ಕಾಗಿ ಹಲವು ರೀತಿಯ ಮತ್ತು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಬೇಕಾಗಿದೆ. ಈ ಜಗತ್ತು ಮತ್ತು ಪರಲೋಕದಲ್ಲಿ ಮಕ್ಕಳಿಗೆ ಅದು ಪ್ರಯೋಜನಕಾರಿಯಾಗುವಂತಿರಬೇಕು. ಸೂರಃ ಲುಕ್ಮಾನ್‌ನಲ್ಲಿ ಮಕ್ಕಳಿಗೆ ಯಾವ ರೀತಿ ಉಪದೇಶಿಸಬೇಕೆಂದು ವಿವರಿಸಲಾಗಿದೆ. ಪವಿತ್ರ ಕುರ್‌ಆನ್‌ನ ಮಾರ್ಗದರ್ಶನವನ್ನು ಹೆತ್ತವರು ಮಕ್ಕಳ ಮೇಲೆ ಪ್ರಾಯೋಗಿಕಗೊಳಿಸಬೇಕು. "ಮಗನೇ, ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡಬೇಡ. ನಿಜವಾಗಿಯೂ ಬಹುದೇವ ವಿಶ್ವಾಸ ಮಹಾ ಅಕ್ರಮವಾಗಿದೆ... ಮಗನೇ! ಸಾಸಿವೆ ಕಾಳಿನಷ್ಟಿರುವ ಒಂದು ವಸ್ತುವೇ ಇರಲಿ, ಅದು ಒಂದು ಬಂಡೆಯಲ್ಲಿ, ಆಕಾಶಗಳಲ್ಲಿ ಅಥವಾ ಭೂಮಿಯೊಳಗೆ ಎಲ್ಲಾದರೂ ಅಡಗಿರಲಿ, ಅಲ್ಲಾಹನು ಅದನ್ನು ಹೊರ ತರುವನು. ಅವನು ಸೂಕ್ಷ್ಮದರ್ಶಿ ಮತ್ತು ವಿವರಪೂರ್ಣನಾಗಿರುತ್ತಾನೆ... ಮಗನೇ, ನಮಾಝನ್ನು ಸಂಸ್ಥಾಪಿಸು. ಒಳಿತಿನ ಆದೇಶ ನೀಡು, ಕೆಡುಕಿನಿಂದ ತಡೆ ಮತ್ತು ಯಾವ ಕಷ್ಟವೇ ಬರಲಿ, ಸಹನೆ ವಹಿಸು. ಇವು ಅತಿ ಹೆಚ್ಚು ತಾಕೀತು ಮಾಡಲ್ಪಟ್ಟ ವಿಷಯಗಳು... ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ. ದುರಭಿಮಾನ ಹಾಗೂ ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ. ನಿನ್ನ ನಡೆಯಲ್ಲಿ ಇತಿಮಿತಿ ಇರಿಸಿಕೋ. ನಿನ್ನ ಸ್ವರವನ್ನು ಸ್ವಲ್ಪ ತಗ್ಗಿಸು. ಎಲ್ಲ ಸ್ವರಗಳಿಗಿಂತ ಕೆಟ್ಟ ಸ್ವರ ಕತ್ತೆಯ ಸ್ವರವಾಗಿರುತ್ತದೆ... ಎಂತಹ ತರಬೇತಿ! ಅಲ್ಲಾಹನಿಂದ ನೇರವಾಗಿ ಅವತೀರ್ಣಗೊಂಡಿರುವ ತರಬೇತಿಯಾಗಿದೆ ಇದು.

## ಬಾಲಪಂಕ್ತಿ



✍ ಜಿ.ಎಮ್.

# ಜೋಡಿ ಎತ್ತು

ಒಂದು ಊರಿನಲ್ಲಿ ರಾಮು ಎಂಬ ರೈತನಿದ್ದನು. ಆತನಿಗೆ ಎತ್ತಿನಗಾಡಿಯೊಂದಿತ್ತು. ಗಾಡಿ ಎಳೆಯುವ ಎರಡು ಎತ್ತುಗಳಲ್ಲಿ ಒಂದರ ಹೆಸರು ಭೀಮ, ಇನ್ನೊಂದರ ಹೆಸರು ಸೋಮ ಎಂದಾಗಿತ್ತು. ಭೀಮ ಆರೋಗ್ಯದಲ್ಲಿ ಗಟ್ಟಿಮುಟ್ಟಾಗಿದ್ದರೆ, ಸೋಮ ಸಲ್ಪ ಸಪೂರವಾಗಿದ್ದ.



ಭೀಮ ಯಾವಾಗಲೂ ಸೋಮನನ್ನು ಅಣಕಿಸುತ್ತಾ ಮೂದಲಿಸುತ್ತಿದ್ದನು. “ನೀನು ಕಡ್ಡಿಯ ಹಾಗೆ ಇದ್ದಿ. ನನ್ನನ್ನು ನೋಡು ಹೇಗಿದ್ದೇನೆಂದು” ಎಂದು ಜಂಬ ಕೊಚ್ಚಿ ಕೊಳ್ಳುತ್ತಾ ಮೂದಲಿಸುತ್ತಿದ್ದನು.

ಒಂದು ದಿನ ಎತ್ತಿನ ಗಾಡಿಯೊಂದಿಗೆ ರಾಮು ಸಂತೆಗೆ ಹೊರಟನು. ಅಂದು ಗಾಡಿಯಲ್ಲಿ ತುಂಬಾ ಮೂಟೆಗಳಿದ್ದವು. ಸಪೂರದವನಾದ ಸೋಮನಿಗೆ ನಡೆಯಲು ಕಷ್ಟವಾಗುತ್ತಿತ್ತು. ಆತ ಮೆಲ್ಲ ಮೆಲ್ಲನೆ ನಡೆಯ ತೊಡಗಿದ.

ಸಲ್ಪ ಮೆಲ್ಲಗೆ ನಡೆಯಪ್ಪಾ ನನಗೆ ಭಾರೀ ಸುಸ್ತಾಗುತ್ತಿದೆ. ಅಯ್ಯೋ ಎಂದು ಭೀಮನೊಂದಿಗೆ ಹೇಳಿದನು.

ಕೂಡಲೇ ಭೀಮ ಕೋಪದಿಂದ “ಹೂಂ! ಆಗಲೇ ದಣಿವು ಶುರುವಾಯಿತಾ? ನೀನು ಇದಕ್ಕೆ ಲಾಯಕ್ಕಲ್ಲಾ. ನಿನ್ನನ್ನು ಕಸಾಯಿಖಾನೆಗೆ ಕೊಡಬೇಕು. ನಡಿಯೋ” ಎನ್ನುತ್ತಾ ಜೋರಾಗಿ ನಡೆಯ ತೊಡಗಿದ.

ಸುಸ್ತು ಸಹಿಸಲಾರದೆ ಸೋಮ ಕಾಲೆಳೆಯುತ್ತಾ ನಡೆಯ ತೊಡಗಿದ. ಇದನ್ನು ನೋಡಿದ ರೈತ ರಾಮುನಿಗೆ ಬೇಸರವಾಯಿತು. ಆತ ಕೂಡಲೇ ಗಾಡಿ ನಿಲ್ಲಿಸಿದ.

ಸೋಮುವನ್ನು ಗಾಡಿಯಿಂದ ಬಿಡಿಸಿ ಒಂದು ಮರಕ್ಕೆ ಕಟ್ಟಹಾಕಿ, “ನೋಡು ಸೋಮು, ನಾನು ಸಂತೆಗೆ ಹೋಗಿಬರುತ್ತೇನೆ. ಅಲ್ಲಿಯ ವರೆಗೆ ನೀನು ಇಲ್ಲಿಯೇ ನಿಲ್ಲು” ಎಂದನು.

ಭೀಮನನ್ನೂ ಹಗ್ಗ ಬಿಚ್ಚಿಸಿದಾಗ ಅವನಿಗೂ ಸಂತೋಷವಾಯಿತು. ಆದರೆ ಭೀಮನನ್ನು ಗಾಡಿ ಮಧ್ಯಕ್ಕೆ ತಂದು ನಿಲ್ಲಿಸಿ ಕಟ್ಟಿದನು. ಆಗ ಗೊತ್ತಾಯಿತು ಈ ಗಾಡಿಯನ್ನು ನಾನೊಬ್ಬನೇ ಎಳೆಯಬೇಕೆಂದು. ಹೋಗುವಾ ಎಂದು ಹೇಳಿ ರೈತ ಸಂತೆಗೆ ಹೊರಟನು.

ಈಗ ಎಲ್ಲ ಮೂಟೆಗಳನ್ನು ಭೀಮನೊಬ್ಬನೇ ಹೊರಬೇಕಾಗಿತ್ತು. ಮೊದ ಮೊದಲು ಬಹಳ ಉತ್ಸಾಹದಿಂದ ಹೊರಟ ಭೀಮನು ಬರ ಬರುತ್ತಾ ನಿದಾನವಾಗತೊಡಗಿದನು. ಆಗ ಚಾಟಿ ತೆಗೆದ ರಾಮು ಎರಡೇಟು ಬಿಗಿದು, “ನಡಿ ನಡೀ ಮಧ್ಯಾಹ್ನಕ್ಕಿಂತ ಮುಂಚೆ ಸಂತೆಗೆ ತಲುಪಬೇಕು” ಎಂದು ಗದರಿಸಿದ.

ಭೀಮ ಅಳತೊಡಗಿದನು. ಸೋಮು ಇದ್ದಿದ್ದರೆ ಈ ಕಷ್ಟ ನನಗೆ ಬರುತ್ತಿರಲಿಲ್ಲ. ಸುಮ್ಮನೆ ಅಹಂಕಾರದಿಂದ ಆತನನ್ನು ಎಳೆಯುತ್ತಾ ಅವಮಾನಿಸಿದೆ. ಅಯ್ಯೋ ಎಂದು ಯೋಚಿಸುತ್ತಿರುವಾಗ ಮತ್ತೆರಡು ಏಟು ಬಿತ್ತು.

ತನ್ನ ವಿಧಿಯನ್ನು ಆಲೋಚಿಸುತ್ತಾ ಭೀಮ ಗಾಡಿಯನ್ನು ಎಳೆಯ ತೊಡಗಿದನು.

## ಅರಬಿ ಸುಡೊಕು 70

| | | | | | |
|---|---|---|---|---|---|
| | ح | | ث | | ا |
| ت | | ث | | ج | |
| | ث | | ح | | ب |
| ح | | ا | | ث | |
| | ث | | ا | | ج |
| ا | | ب | | ح | |

ಅರಬಿ ಸುಡೊಕು 69ರ ಉತ್ತರ ಕಳುಹಿಸಿದವರು
**ಮುಹಮ್ಮದ್ ಅರ್ಝ್ಮಾಲ್, 9ನೇ ತರಗತಿ, ರೊಝಾರಿಯೋ ಹೈಸ್ಕೂಲ್**

ಆಟದ ನಿಯಮ:
ಖಾಲಿ ಜಾಗದಲ್ಲಿ ا ನಿಂದ ح ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!

**ಅರಬಿ ಸುಡೊಕು 69ರ ಉತ್ತರ**

| | | | | | |
|---|---|---|---|---|---|
| ت | ا | ث | ب | ح | ج |
| ب | ح | ج | ا | ث | ت |
| ث | ت | ا | ح | ج | ب |
| ح | ج | ب | ت | ا | ث |
| ا | ث | ت | ج | ب | ح |
| ج | ب | ح | ث | ت | ا |

## ಜಾಗತಿಕ ರಾಷ್ಟ್ರಗಳ ಪಕ್ಷಿನೋಟ

### 10) ಆಸ್ಟ್ರಿಯಾ

| | |
|---|---|
| ಸರಕಾರಿ ಹೆಸರು | : ರಿಪಬ್ಲಿಕ್ ಆಫ್ ಆಸ್ಟ್ರಿಯಾ |
| ರಾಜಧಾನಿ | : ವಿಯೆನ್ನಾ |
| ಒಟ್ಟು ವಿಸ್ತೀರ್ಣ | : 83,855 ಚದರ ಕಿಲೋ ಮೀಟರ್ |
| ಅಂದಾಜು ಜನಸಂಖ್ಯೆ | : 83,61,000 |
| ಸ್ಥಳ | : ಮಧ್ಯ ಯುರೋಪು |
| ಪ್ರಚಲಿತ ಭಾಷೆಗಳು | : ಜರ್ಮನ್, ಕ್ರೊವೇಶಿಯನ್, ತುರ್ಕಿಶ್ |
| ಧರ್ಮಗಳು | : ಪ್ರೊಟೆಸ್ಟೆಂಟ್, ರೊಮನ್ ಕೆಥೊಲಿಕ್ |
| ಚಲಾವಣೆಯಲ್ಲಿರುವ ನಾಣ್ಯ | : ಯೂರೊ |
| ಸಂಘಟನೆಗಳು | : ವಿಶ್ವಸಂಸ್ಥೆ, ಆರ್ಗನೈಝೇಶನ್ ಫಾರ್ ಇಕನಾಮಿಕ್ ಕೊ–ಓಪರೇಶನ್ ಆಂಡ್ ಡೆವಲಪ್‌ಮೆಂಟ್, ಯುರೋಪಿಯನ್ ಯೂನಿಯನ್ |

ಜಗತ್ತಿನ 114ನೇ ದೊಡ್ಡ ದೇಶ (ವಿಸ್ತೀರ್ಣ)

### 11) ಆಝುರ್‌ಬೈಜಾನ್

| | |
|---|---|
| ಸರಕಾರಿ ಹೆಸರು | : ರಿಪಬ್ಲಿಕ್ ಆಫ್ ಆಝುರ್‌ಬೈಜಾನ್ |
| ರಾಜಧಾನಿ | : ಬಾಕು |
| ಒಟ್ಟು ವಿಸ್ತೀರ್ಣ | : 86,600 ಚದರ ಕಿಲೋ ಮೀಟರ್ |
| ಅಂದಾಜು ಜನಸಂಖ್ಯೆ | : 84,67,000 |
| ವ್ಯಾಪ್ತಿ/ಪ್ರದೇಶ | : ಯುರೇಶಿಯಾದ ದಕ್ಷಿಣ ಪರ್ವತ ಪ್ರದೇಶ |
| ಪ್ರಚಲಿತ ಭಾಷೆಗಳು | : ಅರ್ಮೇನಿಯನ್, ಆಝೆರಿ, ಲೆಝ್ಗಿಯನ್, ರಷ್ಯನ್ |
| ಧರ್ಮಗಳು | : ಮುಸ್ಲಿಮ್, ರಷ್ಯನ್ ಮತ್ತು ಅರ್ಮೇನಿಯನ್ ಆರ್ಥಡಾಕ್ಸ್ |
| ನಾಣ್ಯ | : ಆಝುರ್‌ಬೈಜಾನಿ ಮನಾತ್ |
| ಸಂಘಟನೆಗಳು | : ವಿಶ್ವಸಂಸ್ಥೆ, ಕಾಮನ್‌ವೆಲ್ತ್ ಆಫ್ ಇಂಡಿಪೆಂಡೆಂಟ್ ಸ್ಟೇಟ್ಸ್ |

ಜಗತ್ತಿನ 113ನೇ ದೊಡ್ಡ ದೇಶ (ವಿಸ್ತೀರ್ಣ)

### 12) ದಿ ಬಹಾಮಾಸ್

| | |
|---|---|
| ಸರಕಾರಿ ಹೆಸರು | : ಕಾಮನ್‌ವೆಲ್ತ್ ಆಫ್ ದಿ ಬಹಾಮಾಸ್ |
| ರಾಜಧಾನಿ | : ನಸ್ಸಾವ್ |
| ಒಟ್ಟು ವಿಸ್ತೀರ್ಣ | : 13,939 ಚದರ ಕಿಲೋ ಮೀಟರ್ |
| ಅಂದಾಜು ಜನಸಂಖ್ಯೆ | : 3,31,000 |
| ವ್ಯಾಪ್ತಿ/ಪ್ರದೇಶ | : ದಿ ಕ್ಯಾರಿಬಿಯನ್, ಅಟ್ಲಾಂಟಿಕ್ |
| ಪ್ರಚಲಿತ ಭಾಷೆಗಳು | : ಇಂಗ್ಲಿಷ್, ಕ್ರಿಯೊಲ್ (Creole) |
| ಧರ್ಮಗಳು | : ಪ್ರೊಟೆಸ್ಟೆಂಟ್, ರೊಮನ್ ಕೆಥೊಲಿಕ್ |
| ನಾಣ್ಯ | : ಬಹಮಿಯನ್ ಡಾಲರ್ |
| ಸಂಘಟನೆಗಳು | : ವಿಶ್ವಸಂಸ್ಥೆ, ಕಾಮನ್‌ವೆಲ್ತ್ ಆಫ್ ನೇಶನ್ಸ್, ಕೆರಿಬಿಯನ್ ಕಮ್ಯುನಿಟಿ |

ಜಗತ್ತಿನ 159ನೇ ದೊಡ್ಡ ದೇಶ (ವಿಸ್ತೀರ್ಣ)

## ನಾಲಗೆಯ ನಿಯಂತ್ರಣ (5ನೇ ಪುಟದಿಂದ)

ಎನಿಸಿಕೊಂಡರೂ ಈ ದುರ್ಗುಣದಿಂದ ದೂರವಿರಲು ನಮ್ಮಿಂದ ಸಾಧ್ಯವಾಗುತ್ತಿಲ್ಲ ಎಂಬುದು ದುರಂತ.

ಸಾವಿರಗಟ್ಟಲೆ ಹಣ ಖರ್ಚು ಮಾಡಿ, ದೊಡ್ಡ ಬ್ಯಾನರ್‌ಗಳಡಿಯಲ್ಲಿ ಧಾರ್ಮಿಕ ಪ್ರವಚನವೆಂಬ ಕಾರ್ಯಕ್ರಮಗಳು ಕೇವಲ ನಿಂದನೆಯ ವೇದಿಕೆಗಳಾಗುತ್ತಿರುವುದು; ಕುಟುಂಬ ಸದಸ್ಯರೆಲ್ಲ ಒಟ್ಟು ಸೇರಿದ್ದಾಗ ತನಗಾಗದ ವ್ಯಕ್ತಿಯನ್ನು ನಿಂದಿಸಿ, ಅದರಿಂದ ಆತ ಕಸಿವಿಸಿಗೊಳ್ಳುವುದನ್ನು ಕಂಡು ಮನದಲ್ಲೇ ಖುಷಿ ಪಡುವುದು ಇತ್ಯಾದಿಗಳಾವುವೂ ಸತ್ಯವಿಶ್ವಾಸಿಗಳಿಗೆ ಹೇಳಿ ಮಾಡಿಸಿದ್ದಲ್ಲ.

ನಿಮಗೆ ಜನರನ್ನು ಟೀಕಿಸಲು, ವಿಮರ್ಶಿಸಲು ಅರ್ಹತೆಯಿದೆ. ಆದರೆ ಅದು ಒಂದು ನಿಯಮಕ್ಕೆ ಬದ್ಧವಾಗಿರಬೇಕು. ಯಾವ ವಿಷಯದಲ್ಲಿ ಒಬ್ಬನನ್ನು ಟೀಕಿಸುತ್ತೇನೋ ಆ ವಿಷಯ ಆತನಲ್ಲಿ ಇದೆ ಎಂಬುದು ನನಗೆ ಸ್ಪಷ್ಟವಾಗಿ ತಿಳಿದಿರಬೇಕು. ಬೇರೆ ಯಾರೋ ಹೇಳಿದ್ದಾಗಿರಬಾರದು. ಎರಡನೆಯದಾಗಿ, ನಾನು ಈ ಟೀಕೆಯಲ್ಲಿ ಪ್ರಾಮಾಣಿಕನಾಗಿದ್ದೇನೆ ಎಂದೂ ನನಗೆ ಸ್ಪಷ್ಟವಾಗಿರಬೇಕು. ಅವನು ಸಮಾಜದಲ್ಲಿ ಅವಮಾನಿತನಾಗಬೇಕೆಂಬ ಉದ್ದೇಶ ಇರಬಾರದು. ಬದಲಾಗಿ ಅವನ ಇಹ-ಪರ ಒಳಿತು ಉದ್ದೇಶವಾಗಿರಬೇಕು. ಮೂರನೆಯದಾಗಿ, ನಾನು ಬಳಸುವ ಪದ ಅವನ ಮನ ನೋಯಿಸುವಂತೆ ಇರಬಾರದು. ಈ ಶಿಷ್ಟಾಚಾರಗಳನ್ನು ಪಾಲಿಸಿಕೊಂಡು ಮಾತ್ರ ಒಬ್ಬನನ್ನು ಟೀಕಿಸಬಹುದಾಗಿದೆ. ಅನ್ಯಥಾ ಅದು ಟೀಕೆಯಲ್ಲ ನಿಂದನೆಯಾಗುವುದು. ಅದೇ ರೀತಿ, ಜನರನ್ನು ಅನಾಗರಿಕವಾಗಿ ಅಡ್ಡ ಹೆಸರಿನಿಂದ ಕರೆಯುವವರು ಸಮಾಜದಲ್ಲಿದ್ದಾರೆ. ಕೋಪ ಗೊಂಡಾಗ ಪತ್ನಿಯ ತವರು ಮನೆಯವರನ್ನು ನಿಂದಿಸಿ, ವಿಕೃತ ಸಂತೋಷ ಪಡುವವರಿದ್ದಾರೆ. ವಿಶ್ವಾಸಿಗಳ ಹೃದಯದಲ್ಲಿರುವ ಈಮಾನಿಗೆ ತಕ್ಕುದಲ್ಲದ ಸಂಸ್ಕೃತಿ ಅದು.

ನಾಲಗೆಯು ದಾರಿ ತಪ್ಪಿಸುವ ಮತ್ತೊಂದು ದುರ್ಗುಣ ಪರದೂಷಣೆಯಾಗಿದೆ. "ನಿಮ್ಮಲ್ಲಿ ಯಾರೂ ಯಾರ ಬಗ್ಗೆಯೂ ಪರದೂಷಣೆ ಮಾಡಬಾರದು. ನಿಮ್ಮಲ್ಲಿ ಯಾರಾದರೂ ತನ್ನ ಮೃತ ಸಹೋದರನ ಮಾಂಸ ತಿನ್ನುವುದನ್ನು ಇಷ್ಟಪಡುವನೇ? ನೀವು ಸ್ವತಃ ಅದನ್ನು ಅಸಹ್ಯ ಪಡುತ್ತೀರಿ" (49:12) ಎಂದು ಪವಿತ್ರ ಕುರ್‌ಆನ್ ಹೇಳುತ್ತದೆ.

ಅದೇ ರೀತಿ ನಾಲಗೆ ದಾರಿತಪ್ಪಲು ಇನ್ನೊಂದು ಕಾರಣ ತರ್ಕವಾಗಿದೆ. "ಅತಿ ಹೆಚ್ಚು ತರ್ಕ ಮಾಡುವವನೇ ಪರಲೋಕದಲ್ಲಿ ಅಲ್ಲಾಹನ ಬಳಿ ಅತ್ಯಂತ ನಿಕೃಷ್ಟನಾಗಿರುತ್ತಾನೆ" ಎಂದು ಪ್ರವಾದಿಯವರು ಎಚ್ಚರಿಸಿದ್ದಾರೆ. ನಿಷ್ಫಲವಾದ ಚರ್ಚೆಯಿಂದ ದೂರವಿರಿ, ಸ್ವರ್ಗವೇ ನಿಮ್ಮ ನಿವಾಸವಾಗುವುದು ಎಂದೂ ಅವರು ಹೇಳಿದ್ದಾರೆ.

ಒಟ್ಟಿನಲ್ಲಿ ನಾಲಗೆಯು ಬಹಳ ಪವಿತ್ರವಾದ ಅಂಗವಾಗಿದೆ. ಅದನ್ನು ಗೀಬತ್, ಸುಳ್ಳು, ಅಪಹಾಸ್ಯ, ಅಡ್ಡ ಹೆಸರು, ತರ್ಕ-ಕುತರ್ಕಗಳಿಂದ ದೂರವಿಡಲು ನಮಗೆ ಸಾಧ್ಯವಾದರೆ ನಾವು ಪರಲೋಕದಲ್ಲಿ ಯಶಸ್ವಿಯಾಗಬಲ್ಲೆವು. ನಾಲಗೆಯ ಮೇಲೆ ನಿಯಂತ್ರಣವಿದ್ದಾಗ ಮಾತ್ರ ಸಮಾಜದಲ್ಲಿ ಗೌರವ ಹೊಂದಲು ನಮಗೆ ಸಾಧ್ಯ.



# ಬ್ಯುಝ... ಬ್ಯುಝ... ಬ್ಯುಝ....

ಕಥೆ

✍ ಅಬ್ದುಲ್ ರಶೀದ್ ವಿ.ಕೆ.

**ಫ**ಕೀರಬ್ಬರು ಅತಿಯಾದ ಸಿಗರೇಟ್ ಸೇವನೆಯ ಕಾರಣದಿಂದ ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಇನ್ನೊಂದೆಡೆ ರಕ್ತದೊತ್ತಡ, ಮಧುಮೇಹದಂತಹ ಹೃದ್ರೋಗದಿಂದ ಬಳಲುತ್ತಿದ್ದರು. ವೈದ್ಯರು ಪರಿಶೀಲಿಸಿ "ಇನ್ನೇನು ಕೆಲವು ಗಂಟೆಗಳ ಕಾಲ ಮಾತ್ರವೇ ಸಿಗಬಹುದು. ಬದುಕುವ ಸಾಧ್ಯತೆಗಳು ಬಹಳ ಕಡಿಮೆ ಇದೆ. ಎದೆ ನಾಡಿ ಮಿಡಿತಗಳು ಬಹಳ ಕಡಿಮೆಯಾಗುತ್ತಾ ಬರುತ್ತಿದೆ" ಎಂದಾಗ ಮನೆಯವರು ತಮ್ಮ ಮಕ್ಕಳು ಬಂಧು ಮಿತ್ರಾದಿಗಳಿಗೆ ವಿಷಯವನ್ನು ತಿಳಿಸತೊಡಗಿದರು. ಮಕ್ಕಳೆಲ್ಲರೂ ಬಂದು ತನ್ನ ತಂದೆಯ ಅಂತಿಮ ದರ್ಶನವನ್ನು ಮಾಡತೊಡಗಿದರು. ತನಗಾಗುತ್ತಿದ್ದ ಯಾತನೆಯು ಸಹಿಸಲು ಸಾಧ್ಯವಾಗಿತ್ತು. ಮಾತನಾಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಕೈ ಸನ್ನೆ ಮೂಲಕ ಎಲ್ಲವನ್ನು ತಿಳಿಸುತ್ತಿದ್ದರು. ಅಂತಿಮ ದರ್ಶನ ಮಾಡಲು ಬಂದಂತಹ ಮಕ್ಕಳು ಹಾಗೂ ಬಂಧು ಮಿತ್ರಾದಿಗಳು ಮಂಚದ ಸುತ್ತಮುತ್ತಲೂ ಕುಳಿತು ಸೂರಃ ಯಾಸೀನ್ ಪಠಿಸುತ್ತಿದ್ದರು. ಇನ್ನು ಕೆಲವರು ಬಾಯಿಗೆ ನೀರು ಹಾಕುತ್ತಾ ಶಹಾದತ್ ಕಲಿಮ ಉಚ್ಚರಿಸಲು ಹೇಳುತ್ತಿದ್ದರು. ವೈದ್ಯರು ನೀಡಿದ ಚುಚ್ಚು ಮದ್ದಿನ ಅಮಲಿನಲ್ಲಿ ನಿದ್ದೆಯು ಅವರನ್ನು ಆವರಿಸಿ ಬಿಟ್ಟಿತು. ಉಸಿರಾಟ ಚಿಕ್ಕದಾಗಿ ಕೇಳಿ ಬರುತ್ತಿತ್ತು. ಎಲ್ಲರೂ ಬಹಳ ದುಃಖದಿಂದ ಸೂಕ್ಷ್ಮವಾಗಿ ಅವರ ಚಲನವಲನಗಳನ್ನು ವೀಕ್ಷಿಸುತ್ತಿದ್ದರು.

❖ ❖ ❖

ಅಂದು ನಾನು ಚಿಕ್ಕ ಮಗುವಾಗಿದ್ದೆ. ಅಂಬೆಗಾಲಿಡುತ್ತಾ ಮಲಗಿದಲ್ಲಿಂದ ಮುಂದೆ ಹೋಗಲು ಪ್ರಯತ್ನಿಸುತ್ತಿದ್ದೆ. ನನ್ನ ಮನಸ್ಸಿನಲ್ಲಿಯೇ ನಾನು ನಿಲ್ಲುತ್ತಿದ್ದರೆ ನಾನು ನಡೆಯುತ್ತಿದ್ದರೆ ಎಂದು ಭಾವಿಸುತ್ತಿದ್ದೆ. ಅದಾದ ಕೆಲವು ದಿನಗಳ ನಂತರ ಎಲ್ಲರ ಸಹಾಯದಿಂದ ನಿಲ್ಲಲು, ನಡೆಯಲು, ತಿನ್ನಲು ಕುಡಿಯಲು ಕಲಿತೆ. ಅದಾಗಲೇ ಶಾಲೆಗೆ ಹೋಗಬೇಕೆಂದು, ಗೆಳೆಯರೊಂದಿಗೆ ಆಟ ಆಡಬೇಕೆಂದು ಆಶಿಸಿದೆ ನನ್ನ ಅತ್ಯಾಸೆಯಂತೆ ಮೊದಲು ನರ್ಸರಿಗೂ, ನಂತರ ಸ್ಕೂಲಿನ ಮೆಟ್ಟಲೇರಿದೆ. ನನ್ನ ಅತ್ಯಾನಂದಕ್ಕೆ ಮಿತಿಯೇ ಇರಲಿಲ್ಲ. ಗೆಳೆಯರೊಂದಿಗೆ, ಸಹಪಾಠಿಗಳೊಂದಿಗೆ ಆಡಿದೆ. ಹಾರಾಡಿದೆ. ಸಂತೋಷದಿಂದ ಕುಣಿದಾಡಿದೆ. ಗೆಳೆಯರೊಂದಿಗೆ ಆಡಿಯೋ, ವೀಡಿಯೋ, ತ್ರಿಡಿ ಹಾಗೂ ಮೊಬೈಲ್ ಗೇಮ್ಸ್‌ಗಳನ್ನು ಕಲಿತು ಆಡಿ ಉತ್ಸಾಹಗೊಂಡೆ. ಅದಾದ ಕೆಲವು ದಿನಗಳ ನಂತರ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣನಾಗಬೇಕೆಂದು ಆಗ್ರಹಿಸಿದೆ. ಹಾಗೆ ತನ್ನ ಅತ್ಯಾಗ್ರಹದಂತೆ ಮೆಟ್ರಿಕ್ ಪರೀಕ್ಷೆಯನ್ನು ಕೂಡ ಅತ್ಯುತ್ತಮ ಅಂಕಗಳೊಂದಿಗೆ ಯಶಸ್ವಿಯಾಗಿ ಮುಗಿಸಿದೆ. ಅದಲ್ಲದೆ ಎಲ್ಲಾ ರೀತಿಯ ಕಲೆ, ಸಾಹಿತ್ಯ, ಸಾಂಸ್ಕೃತಿಕ, ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ಹರ್ಷೋಲ್ಲಾಸದಿಂದ ಅನೇಕಾನೇಕ ಚಿನ್ನ, ಬೆಳ್ಳಿ, ತಾಮ್ರ ಮುಂತಾದ ವಿವಿಧ ಪದಕಗಳನ್ನು ತನ್ನದಾಗಿಸಿಕೊಂಡು ಧನ್ಯನಾದೆ.

ನನ್ನ ಕೆಲವು ಸಜ್ಜನ ಗೆಳೆಯರು ಕುರ್‌ಆನ್ ಹದೀಸ್ ಹಾಗೂ ಧಾರ್ಮಿಕ ವಿದ್ಯಾಭ್ಯಾಸ ಕಲಿಯಬೇಕೆಂದು ಅದರಂತೆ ನಡೆಯಬೇಕೆಂದು ಹೇಳುತ್ತಿದ್ದರು. ನಮಾಝ್ ನಿರ್ವಹಿಸಬೇಕೆಂದು ಉಪದೇಶಿಸುತ್ತಿದ್ದರು. ಹಣವಿದ್ದರೆ ಝಕಾತ್, ಸದಕಾ ನೀಡಬೇಕೆಂದು ಸವಿ-ನುಡಿಯುತ್ತಿದ್ದರು. ಧಾರ್ಮಿಕತೆಯನ್ನು, ನೈತಿಕತೆಯನ್ನು ಭೋದಿಸುತ್ತಿದ್ದರು. ಕೆಲವೊಮ್ಮೆ ಇಸ್ಲಾಮಿ ಸಾಹಿತ್ಯ, ಚರಿತ್ರೆ ಇನ್ನಿತರ ಸಮಾರಂಭಗಳನ್ನು ನಡೆಸುತ್ತಿದ್ದರು. ಅದಕ್ಕಾಗಿ ಒತ್ತಾಯ ಪೂರ್ವಕವಾಗಿ ಆಹ್ವಾನಿಸುತ್ತಿದ್ದರು. ಓದಲಿಕ್ಕಾಗಿ ಇಸ್ಲಾಮಿ ಸಾಹಿತ್ಯಗಳನ್ನು ನೀಡುತ್ತಿದ್ದರು. ಆದರೆ ನಾನು ಸಮಯದ ಅಭಾವವಿದೆ. ಇನ್ನೊಮ್ಮೆ ಬರುತ್ತೇನೆ. ಎಂದೆಲ್ಲಾ ಕುಂಟು ನೆಪಗಳನ್ನು ಒಡ್ಡುತ್ತಿದ್ದೆ.

ಅದಾದ ನಂತರ ನಾನು ಪದವಿಯನ್ನು ಪಡೆಯಬೇಕೆಂದು ಇಂಜಿನಿಯರ್ ಆಗಬೇಕೆಂದು ಆಗ್ರಹಿಸಿದೆ. ಅದಕ್ಕಾಗಿ ನಾನು ಸಂಪೂರ್ಣ ಶ್ರಮಪಟ್ಟು ಉತ್ತಮ ಅಂಕಗಳೊಂದಿಗೆ ಉತ್ತೀರ್ಣನಾದೆ. ಆ ನಂತರ ಉತ್ತಮ ಉದ್ಯೋಗ ಸಿಗಬೇಕೆಂದು ಆಗ್ರಹಿಸಿದೆ. ಹಾಗೆ ಉದ್ಯೋಗವೂ ಸಿಕ್ಕಿತು. ಉದ್ಯೋಗದಲ್ಲಿಯೂ ಉನ್ನತ ದರ್ಜೆ ಸಿಗಬೇಕೆಂದು ಆಶಿಸಿದೆ. ಕೆಲವು ವರ್ಷಗಳಲ್ಲಿ ಉನ್ನತ ದರ್ಜೆಯ ಉದ್ಯೋಗವು ಸಿಕ್ಕಿಯೇ ಬಿಟ್ಟಿತು. ನಂತರ ಅತ್ಯುನ್ನತ ಕಾರು ಖರೀದಿಸಬೇಕೆಂದು ಆಶೆ ಉಂಟಾಯಿತು. ಕೆಲವು ಸಮಯದ ದುಡಿಮೆಯ ನಂತರ ಬ್ಯಾಂಕ್‌ನಿಂದ ಕಾರ್‌ಲೋನ್ ಪಡೆದು ತನ್ನ ಮನಸ್ಸಿನಲ್ಲಿ ಆರಾಧಿಸುವಂತಹ ಆ ಕಾರನ್ನು ತನ್ನದಾಗಿಸಿದೆ. ಆ ನಂತರ ಅತ್ಯಾಕರ್ಷಣೀಯ ಮನೆ ನಿರ್ಮಿಸಬೇಕೆಂದು ಹಗಲು ಕನಸು ಕಾಣುತ್ತಿದ್ದೆ. ಸಮುದ್ರ ಕಿನಾರೆಯಲ್ಲಿ ಶುದ್ಧ ತಂಗಾಳಿ ಬೀಸುವ ನೈಸರ್ಗಿಕ, ಪ್ರಕೃತಿ ರಮಣೀಯ ಸ್ಥಳದಲ್ಲಿ ಈಜುಕೊಳವನ್ನೊಳಗೊಂಡ ಚಿಲುಮೆಗಳನ್ನು ಹೊಂದಿದ, ಹೂದೋಟಗಳಿಂದ ಆವೃತವಾದ, ಸಕಲ-ಸೌಕರ್ಯಗಳನ್ನೊಳಗೊಂಡ ಬಹು ಮಹಡಿಯ ಸುಂದರವಾದ ಲಕ್ಸುರಿ ಅರಮನೆಯು ಎದ್ದು ನಿಂತಿತು. ಹಣಕಾಸಿನ ಕೊರತೆಯಾದಾಗ ಬ್ಯಾಂಕ್‌ನ ಹೌಸ್‌ಲೋನ್ ಪಡೆದಾದರೂ ತನ್ನ ಕನಸಿನ ಸೌಧ ಸಿದ್ಧವಾಯಿತು.

ಈ ಬೃಹತ್ ಅರಮನೆಯಲ್ಲಿ ನೆಲೆಸುವಾಗ ಒಂಟಿತನ ಅನುಭವವಾಗ ತೊಡಗಿತು. ಒಂದು ಸುಂದರ ಸುಶೀಲೆಯಾದ ಉತ್ತಮ ವಿದ್ಯಾಭ್ಯಾಸ ಹೊಂದಿದ ಕುಮಾರಿಯನ್ನು ಮದುವೆಯಾಗಬೇಕೆಂದು ಆಲೋಚಿಸಿದೆ. ಅದಕ್ಕಾಗಿ ವಿವಿಧ ರೀತಿಯಲ್ಲಿ ಪತ್ರಿಕಾ ಪ್ರಕಟನೆಗಳನ್ನು ನೀಡಿ ಅರ್ಜಿಗಳನ್ನು ಆಹ್ವಾನಿಸಿ ಅದರಿಂದ ತನ್ನ ಮನಸ್ಸಿಗೆ ಒಪ್ಪುವಂತಹ ಹುಡುಗಿಯನ್ನು ಆರಿಸಿದೆ. ಮಾತ್ರವಲ್ಲದೆ ತನ್ನ ಬಂಧು ಮಿತ್ರಾದಿಗಳನ್ನೆಲ್ಲಾ ಕರೆದು ಅದ್ದೂರಿಯಿಂದ ಮದುವೆಯಾದೆ.

ಮದುವೆಯ ನಂತರ ಮಕ್ಕಳಾಗಬೇಕೆಂದು ಮನಸ್ಸಿನಂತರಾಳದಿಂದ ಆಗ್ರಹಿಸಿದೆ. ಕೆಲವು ದಿನಗಳ ನಂತರ ನನ್ನ ಆಗ್ರಹವು ಸಂಪೂರ್ಣವಾಗಿ ಸಫಲವಾಯಿತು. ಇನ್ನು ಬೇಕೆಂದು ಆಶಿಸಿದೆ. ಮುಗ್ಧ ಸುಂದರ ಮಕ್ಕಳನ್ನು ಪಡೆದು ಧನ್ಯನಾದೆ. ಅವರೊಂದಿಗೆ ಆಡಿದೆ, ಓಡಿದೆ, ಹಾಡಿದೆ, ಕುಣಿದು ಕುಪ್ಪಳಿಸಿದೆ. ನನ್ನ ಹರ್ಷ ಆನಂದಗಳಿಗೆ ಇತಿಮಿತಿಯೇ ಇರಲಿಲ್ಲ. ಅವರ ಪ್ರಸನ್ನವಾದ ಭಾವೀ ಭವಿಷ್ಯದ ಬಗ್ಗೆ ಚಿಂತಿಸಿ ಅವರಿಗೆ ಬೇಕಾದ ಸಕಲ ಸೌಕರ್ಯಗಳನ್ನು ಏರ್ಪಡಿಸಿದೆ. ಅವರ ನೋವು ನಲಿವುಗಳಲ್ಲಿಯೂ ಸೋಲುಗೆಲುವುಗಳಲ್ಲಿಯೂ ಸುಖ ದುಃಖಗಳಲ್ಲಿಯೂ ಆಟ ಓಟ ಪಾಠಗಳಲ್ಲಿಯೂ ನೆರವಾಗಿದ್ದೆ.

ಆಫೀಸಿನಲ್ಲಿ ಉನ್ನತ ಹುದ್ದೆಯಿಂದ ಅತ್ಯುನ್ನತ ಹುದ್ದೆಗಾಗಿ ಆಗ್ರಹಿಸಿದೆ. ಅತ್ಯುನ್ನತ ಹುದ್ದೆಯನ್ನು ತನ್ನದಾಗಿಸಿದೆ. ಲಕ್ಷಾಂತರ ರೂಪಾಯಿ ಬ್ಯಾಂಕ್ ಬ್ಯಾಲೆನ್ಸ್ ತನ್ನದಾಗಿಸಲು ಕಠಿಣ ಪರಿಶ್ರಮದಲ್ಲಿ ತೊಡಗಿದೆ. 40-50 ಲಕ್ಷ ರೂಪಾಯಿ ಬ್ಯಾಂಕ್ ಠೇವಣಿ ಸಿದ್ಧವಾದರೂ ಇನ್ನೂ ಇನ್ನೂ ಬೇಕೆಂದು ಶ್ರಮಿಸಿದೆ. ತಲೆಕೂದಲು ಬೆಳ್ಳಗಾಗತೊಡಗಿತು. ಅದನ್ನು ಕಪ್ಪಾಗಿಸಲು ಬಣ್ಣ ಹಚ್ಚತೊಡಗಿದೆ.

ಆಫೀಸಿನಲ್ಲಿ ಅತ್ಯುನ್ನತ ಹುದ್ದೆಯಾದ್ದರಿಂದ ಹೆಚ್ಚಿನ ಕೆಲಸದ ಚಿಂತೆ ಕಾಡತೊಡಗಿತು. ಚಿಂತೆ ಕಡಿಮೆಗೊಳಿಸಲಿಕ್ಕಾಗಿ ಸಿಗರೇಟು ಸೇದಲು ಆರಂಭಿಸಿದೆ. ದಿನವೊಂದಕ್ಕೆ ಒಂದೆರಡು ಪ್ಯಾಕೆಟ್‌ನಿಂದ ಆರಂಭವಾಗಿ ಹತ್ತಾರು ಪ್ಯಾಕೆಟ್‌ಗಳ ತನಕ ತಲುಪಿತು. ಇನ್ನೂ ಚಿಂತೆಯನ್ನು ಕಡಿಮೆಗೊಳಿಸಲಿಕ್ಕಾಗಿ ಮದ್ಯಪಾನ ಚಟವನ್ನು ಆರಂಭಿಸಿದೆ. ಮದ್ಯ ಲಹರಿ ಪದಾರ್ಥಗಳಿಲ್ಲದೇ ನಿದ್ದೆ ಹತ್ತುತ್ತಿರಲಿಲ್ಲ. ಒಂದು ಕೈಯಲ್ಲಿ ಸಿಗರೇಟು ಇನ್ನೊಂದು ಕೈಯಲ್ಲಿ ಮದ್ಯ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾದವು. ಅತಿಯಾದ ಮದ್ಯಪಾನ ಹಾಗೂ ಧೂಮಪಾನದಿಂದ ಬುದ್ಧಿಶಕ್ತಿ ಕಡಿಮೆಯಾಗ ತೊಡಗಿದವು. ರಕ್ತದ ಒತ್ತಡ, ಹೃದಯ, ಮದುಮೇಹದಂತಹ ರೋಗಗಳು ದಿನದಿಂದ ದಿನಕ್ಕೆ ಉಲ್ಬಣಗೊಳ್ಳತೊಡಗಿತು. ಆಫೀಸಿನಿಂದ ಮುಕ್ತಿ ಪಡೆಯಲು ಆಗ್ರಹಿಸಿದೆ. ಕೊನೆಗೊಂದು ದಿನ ರಾಜಿನಾಮೆ ನೀಡಿ ವೃತ್ತಿ ಜೀವನಕ್ಕೆ ವಿದಾಯ ಹೇಳಿದೆ. ಸಮಾಧಾನವಾಗಿರೋಣವೆಂದು ನಿವೃತ್ತ ಜೀವನ ಆರಂಭಿಸಿದೆ.

ನಂತರ ಒಂದು ದಿನ ರೋಗ ಉಲ್ಬಣಗೊಂಡಾಗ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯರು ಪರಿಶೀಲಿಸಿ ಶ್ವಾಸಕೋಶದಲ್ಲಿ ಕ್ಯಾನ್ಸರ್ ಎಂದು ತಿಳಿಸಿದರು. ಮಧುಮೇಹ, ರಕ್ತದ ಒತ್ತಡ ಇರುವುದರಿಂದ ಕ್ಯಾನ್ಸರ್‌ಗೆ ಔಷಧಿ ಫಲಕಾರಿಯಾಗಲಿ. ಚಿಕಿತ್ಸೆ ಪಡೆಯುತ್ತಾ 4-5 ತಿಂಗಳು ಆಸ್ಪತ್ರೆಯಲ್ಲೇ ಕಳೆದು ಜೀವನ ಪೂರ್ತಿ ಕಷ್ಟ ಪಟ್ಟು ಸಂಪಾದಿಸಿದ ಲಕ್ಷಾಂತರ ರೂಪಾಯಿ ಖರ್ಚಾದರೂ ಪ್ರಯೋಜನವಾಗಲಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಮತ್ತೆಯೂ ಹಣ ಬೇಕಾದಾಗ ಸ್ವಂತ ಮನೆಯನ್ನೂ ಕಾರನ್ನೂ ಬಳಿಕ ಸರ್ವಸ್ವವನ್ನು ಮಾರಾಟ ಮಾಡಬೇಕಾಯಿತು.

ಈ ಅನಾರೋಗ್ಯದ ವಿಷಯ ತಿಳಿದ ಹಳೆಯ ಸ್ನೇಹಿತರು ರೋಗಿಯ ಸಂದರ್ಶನಕ್ಕೆಂದು ಆಗಮಿಸಿದರು. ಸುಖ ಸಮಾಚಾರವನ್ನು ವಿಚಾರಿಸಿದ ನಂತರ ಮಾತನ್ನು ಮುಂದುವರಿಸುತ್ತಾ, ಈ ಲೋಕವು ನಶ್ವರವಾಗಿದ್ದು ಇಹಲೋಕ ಜೀವನವು ಅಲ್ಲಾಹನು ಪರೀಕ್ಷೆಗೆಂದು ನೀಡಿದಂತಹ ಚಿಕ್ಕ ಸಮಯವಾಗಿದೆ. ನಮ್ಮ ಶಾಶ್ವತ ಜೀವನವು ಪರಲೋಕವಾಗಿದೆ. ಈ ಲೋಕದಲ್ಲಿ ನಮಗೆ ಲಭಿಸಿದ ಸಮಯದಲ್ಲಿ ಅಲ್ಲಾಹನು ನೀಡಿದ ಕುರ್‌ಆನ್ ಮತ್ತು ಆತನ ಪ್ರವಾದಿ ತೋರಿಸಿದ ಮಾರ್ಗವನ್ನು ಅನುಸರಿಸಿದರೆ ಮಾತ್ರ ಪರಲೋಕದಲ್ಲಿ ಸ್ವರ್ಗ ಪ್ರಾಪ್ತಿಯಾಗ ಬಹುದು. ಅದಕ್ಕೆ ಬದಲಾಗಿ ಇಹಲೋಕದ ಸುಖಭೋಗಗಳನ್ನು ಅನುಭವಿಸುತ್ತಾ ಅಲ್ಲಾಹನ ಆಜ್ಞೆಗಳನ್ನು ಧಿಕ್ಕರಿಸಿ ಶೈತಾನನ ಆಜ್ಞೆಗಳನ್ನು ಅನುಸರಿಸುತ್ತಾ ಜೀವನ ನಡೆಸುವವರು ಶಾಶ್ವತವಾಗಿ ನರಕವಾಸಿಗಳಾಗುತ್ತಾರೆ. ಅಲ್ಲದೆ ಅವರಿಗೆ ಕಠೋರವಾದ ಶಿಕ್ಷೆಯಿದೆ. ಮಾತ್ರವಲ್ಲ ಮುಸಲ್ಮಾನನಾಗಿಯೂ ನಮಾಝ್ ನಿರ್ವಹಿಸದವನಿಗೆ; ಹಣವಿದ್ದೂ ಝಕಾತ್, ಸದಕಾ ನೀಡದವನಿಗೆ; ಸಂಪತ್ತು, ಸೌಕರ್ಯ, ಆರೋಗ್ಯವಿದ್ದೂ ಹಜ್ಜ್ ನಿರ್ವಹಿಸದವನಿಗೆ; ರಮಝಾನ್‌ನಲ್ಲಿ ಉಪವಾಸ ಆಚರಿಸದವನಿಗೆ ನರಕ ಯಾತನೆಯು ಖಂಡಿತ" ಎಂದು ಹೇಳಿ ದುಆ ಮಾಡಿ ಹೊರಟು ಹೋದರು.

ಈ ಮಾತುಗಳು ಒಂದೊಂದಾಗಿ ಹರಿತವಾದ ಬಾಣಗಳಂತೆ ಮನಸ್ಸಿನಂತರಾಳಗಳಲ್ಲಿ ಚುಚ್ಚಿದವು. ಮಿಂಚಿನಂತೆ ಬಡಿದೆಬ್ಬಿಸಿದವು. ಸಿಡಿಲಿನಂತೆ ಗುಡುಗಿದವು. ಭೂಕಂಪದಂತೆ ನಡುಗಿದವು. ಸುನಾಮಿಯ ಅಲೆಗಳಂತೆ ಭೋರ್ಗರೆಯುತ್ತಾ ಅಪ್ಪಳಿಸಿದವು. ದೇಹದಲ್ಲೆಡೆ ವಿದ್ಯುತ್ ಶಾಕ್ ಎಂಬಂತೆ ಭಾಸವಾಗುತ್ತಾ ಒಮ್ಮೆಲೆ ಮಲಗಿದಲ್ಲಿಂದ ಎದ್ದು ಕುಳಿತುಕೊಂಡರು. ತಾನು ಕಂಡ ಕನಸಿನ ಸತ್ಯಾವಸ್ಥೆಯನ್ನು ಕುರಿತು ಆಲೋಚಿಸತೊಡಗಿದರು.

ಆಗಲೇ ತನ್ನ ಬಳಿ ಕುಳಿತು ಕುರ್‌ಆನ್‌ನ ಸೂರಃ ಯಾಸೀನ್ ನ "...ನಿಮಗೆ ಎಚ್ಚರಿಕೆ ನೀಡಲಾಗುತ್ತಿದ್ದ ನರಕವು ಇದುವೇ ಆಗಿದೆ. ನೀವು ಭೂಲೋಕದಲ್ಲಿ ಮಾಡುತ್ತಿದ್ದ ಸತ್ಯ ನಿಷೇಧದ ಫಲವಾಗಿ ಈಗ ಇದರ ಇಂಧನವಾಗಿರಿ..." ಎಂಬ ಸೂಕ್ತಗಳನ್ನು ಕೇಳುತ್ತಲೇ ತನ್ನ ಜೀವಮಾನವನ್ನು ನೆನೆದು ದುಃಖದಿಂದ ಕಣ್ಣೀರು ಸುರಿಸುತ್ತಾ ತನ್ನೆಲ್ಲಾ ಮಕ್ಕಳನ್ನು ಹತ್ತಿರಕ್ಕೆ ಕರೆದು, "ಮಕ್ಕಳೇ ಈ ಇಹಲೋಕದ ಜೀವನದ ಹಿಂದೆ ಓಡೋಡಿ ನಾನು ನನ್ನ ನಿಜವಾದ ಜೀವನವನ್ನೇ ಮರೆತಿದ್ದೆ. ಆದ್ದರಿಂದ ನನಗೆ ಇಹಲೋಕವೂ ಪರಲೋಕವೂ ನಷ್ಟ ವಾದಂತೆ ಭಾಸವಾಗುತ್ತಿದೆ. ಆದ್ದರಿಂದ ನನ್ನ ಈ ಗತಿ ಇನ್ನು ಮುಂದೆ ನಿಮಗಾರಿಗೂ ಬರದಂತೆ ನಿಮ್ಮನ್ನೆಲ್ಲಾ ರಕ್ಷಿಸಿಕೊಳ್ಳಿ. ಅಲ್ಲಾಹನು ನಿಮ್ಮನ್ನು ಅನುಗ್ರಹಿಸಲಿ. ಅಲ್ಲಾಹನೇ ನಾನು ಮಾಡಿದಂತಹ ತಪ್ಪುಗಳನ್ನು ಕ್ಷಮಿಸು. ಎನ್ನುತ್ತಿರುವಾಗಲೇ ಅವರಿಗರಿವಾಗದಂತೆ ಪ್ರಾಣಪಕ್ಷಿ ಹಾರಿ ಹೋಯಿತು.

# ಅಫಘಾನಿಸ್ತಾನ ಮುಂದಿನ ವಿಯೆಟ್ನಾಮ್!



ಜಿನೇವಾ: ಅಫಘಾನಿಸ್ತಾನವು ಅಮೇರಿಕದ ಮಟ್ಟಿಗೆ ಇನ್ನೊಂದು ವಿಯೆಟ್ನಾಮ್ ಆಗಲಿದೆ. ಏಕೆಂದರೆ ಅದು ಭಾರತ-ಚೀನಾ ವಿಚಾರದಲ್ಲಿ ನಡೆಸಿದಂಥದ್ದೇ ತಪ್ಪನ್ನೆಸಗುತ್ತಿದೆ ಎಂದು ಇರಾನ್ ಪಾರ್ಲಿಮೆಂಟ್ ಸ್ಪೀಕರ್ ಅಲಿ ಲರಿಜಾನಿಯವರು ಸಂದರ್ಶನ ವೊಂದರಲ್ಲಿ ಹೇಳಿದ್ದಾರೆ.

"ಅಮೇರಿಕನ್ನರು ವಿಯೆಟ್ನಾಮಿನಲ್ಲಿ ಗಳಿಸಿದಂತಹುದೇ 'ವಿಜಯ'ವನ್ನು ಅಫಘಾನಿಸ್ತಾನದಲ್ಲೂ ಗಳಿಸಲಿದ್ದಾರೆ" ಎಂದು ಅವರು ಕಾಬೂಲ್‌ನಲ್ಲಿ ಅಂತಾರಾಷ್ಟ್ರೀಯ ದಾನಿಗಳ ಸಮಾವೇಶದಲ್ಲಿ ಭಾಗವಹಿಸಿದ ಮರುದಿನ ಫ್ರೆಂಚ್ ಟಿ.ವಿ. ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

"ವರ್ಷಗಳ ಹಿಂದೆ ಸೋವಿಯತ್ ಯೂನಿಯನ್ ಕೂಡಾ ಇಂತಹುದೇ ತಪ್ಪನ್ನೆಸಗಿತ್ತು. ಅಸಂಖ್ಯಾತ ಮಾನವ ಪ್ರಾಣ ಹತ್ಯೆ ನಡೆಯಿತು. ಬಳಿಕ ಅದಕ್ಕೆ ಹಿಂದೆ ಸರಿಯಲೇ ಬೇಕಾಯಿತು" ಎಂದು ಹೇಳಿದ ಅವರು, "ಇತಿಹಾಸ ಮರುಕಳಿಸುತ್ತದೆ. ನಮಗೆ ಅಫಘಾನಿಸ್ತಾನದ ಬಗ್ಗೆ ತಿಳಿದಿದೆ. ಅಫಘಾನಿಸ್ತಾನವು ಎಂದಿಗೂ ವಿದೇಶಿ ಸೇನೆಗೆ ತನ್ನನ್ನು ಅರ್ಪಿಸದು" ಎಂದಿದ್ದಾರೆ.

## ಹಿಲರಿ ಅಮೇರಿಕದ ಇಷ್ಟವನ್ನು ಹೇರುತ್ತಿದ್ದಾರೆ-ಪಾಕ್ ಜಮಾಅತ್



ಇಸ್ಲಾಮಾಬಾದ್: ಅಮೇರಿಕದ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಪಾಕಿಸ್ತಾನದ ಮೇಲೆ ಅಮೇರಿಕದ ಇಷ್ಟವನ್ನು ಹೇರಲು ಉನ್ನತ ಮಟ್ಟದಲ್ಲಿ ಪ್ರಯತ್ನಿಸುತ್ತಿದ್ದಾರೆ ಎಂದು ಪಾಕ್ ಜಮಾಅತೆ ಇಸ್ಲಾಮಿಯ ಉಪಾಧ್ಯಕ್ಷ ಮತ್ತು ಸೆನೆಟರ್ ಪ್ರೊ ಖುರ್ಷಿದ್ ಅಹ್ಮದ್ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ ಎಂದು ಅಹ್ಲುಲ್ ಬೈತ್ ವಾರ್ತಾ ಸಂಸ್ಥೆ (ಎ.ಬಿ.ಎನ್.ಎ.) ವರದಿ ಮಾಡಿದೆ.

ಅಮೇರಿಕದ ಭಯೋತ್ಪಾದನಾ ವಿರೋಧಿ ಯುದ್ಧವು ಪಾಕಿಸ್ತಾನದ ಆರ್ಥಿಕತೆಯ ಮೇಲೆ ಹೊರೆ ಮತ್ತು ಸುರಕ್ಷಾ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮಬೀರಿದ್ದು ಅದನ್ನು 2008 ಅಕ್ಟೋಬರ್ 22ರಂದು ಪಾಕ್ ಸಂಸತ್ತು ಒಮ್ಮತದಿಂದ ಮಂಜೂರು ಮಾಡಿರುವ ಮಸೂದೆಯಂತೆ ಪರಿಷ್ಕರಿಸ ಬೇಕೆಂದೂ ಅವರು ಆಗ್ರಹಿಸಿದ್ದಾರೆ.

## ಅಫಘಾನಿನಲ್ಲಿ ತಾಲಿಬಾನ್ ಪ್ರಬಲ: ನ್ಯಾಟೋ ಆತಂಕ

ಇಸ್ಲಾಮಾಬಾದ್: ಅಫಘಾನಿಸ್ತಾನ ವನ್ನು ಅಂತಾರಾಷ್ಟ್ರೀಯ ಸೇನೆಗಳು ಸಮಯಕ್ಕೆ ಮೊದಲೇ ತೊರೆದು ಬಿಟ್ಟರೆ, ಅಲ್ಲಿ ತಾಲಿಬಾನ್ ಪ್ರಬಲವಾಗಿ ಅಧಿಕಾರಕ್ಕೇರುವ ಸಾಧ್ಯತೆ ಹೆಚ್ಚಿದೆ ಎಂದು ನ್ಯಾಟೋ ಪ್ರಧಾನ ಕಾರ್ಯದರ್ಶಿ ಆಂದ್ರೆಸ್ ಫೋಗ್ ರಾಸ್ ಮುಸೆನ್ ಎಚ್ಚರಿಸಿದ್ದಾರೆ.

ನಮ್ಮ ಕೆಲಸವನ್ನು ಮುಗಿಸುವುದಕ್ಕೆ ಮುಂಚೆಯೇ ನಾವು ಅಫಘಾನಿಸ್ತಾನ ವನ್ನು ತೊರೆಯಲಾರೆವು. ಹಾಗೊಂದು ವೇಳೆ ತೊರೆದರೆ ತಾಲಿಬಾನ್ ಸುಲಭದಲ್ಲಿ ಅಧಿಕಾರಕ್ಕೆ ಮರಳಬ ಹುದು ಹಾಗೂ ಮತ್ತೊಮ್ಮೆ ಭಯೋತ್ಪಾದಕ ದಾಳಿಗಳಿಗೆ ವೇದಿಕೆ ಯಾಗಿ ಮಾರ್ಪಡಬಹುದು ಎಂದು ರಾಸ್ ಮುಸೆನ್ ಇಲ್ಲಿ ಪಾಕಿಸ್ತಾನಿ ವಿದೇಶಮಂತ್ರಿ ಶಾಹ್ ಮಹ್ಮೂದ್ ಕುರೈಶಿಯವರೊಡಗೂಡಿ ನಡೆಸಿದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.


ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ. ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು. ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.

(ಕುರ್‌ಆನ್ 2:29)

*Managing Partner*

**RAJA BRICKS & TILE INDUSTRIES**

*P.B. No. 34, Rajanagar, Sira Road,*
*Tumkur - 572 101. Karnataka, India*
*Ph: 0816 - 6531933/44/55, Fax: 0816 - 2211633*


## ವಿಲ್ಡರ್ಸ್‌ರಿಂದ ಇಸ್ಲಾಮ್ ವಿರೋಧಿ ಬಣ

ಹೇಗ್: ನೆದರ್‌ಲ್ಯಾಂಡ್ಸ್‌ನ ಇಸ್ಲಾಮ್ ವಿರೋಧಿ ಸಚಿವ ಗೀರ್ಟ್‌ವಿಲ್ಡರ್ಸ್ ತನ್ನ ಕುಯುಕ್ತಿಯ ಈಡೇರಿಕೆಗಾಗಿ ಅಂತಾರಾಷ್ಟ್ರೀಯ ಬಣವೊಂದನ್ನು ರಚಿಸಲು ಮುಂದಾಗಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳಾದ್ಯಂತ ಮುಸ್ಲಿಮ್ ದೇಶಗಳಿಂದ ವಲಸೆ ಬರುವವರನ್ನು ತಡೆಯುವುದು ಮತ್ತಿತರ ಉದ್ದೇಶಗಳೊಂದಿಗೆ ಪ್ರಸ್ತುತ ಇಸ್ಲಾಮ್ ವಿರೋಧಿ ಬಣವನ್ನು ರೂಪಿಸಲಾಗುತ್ತಿದೆ.

ಪ್ರಸಕ್ತ ವರ್ಷಾಂತ್ಯದಲ್ಲಿ ಈ ಕುರಿತಾಗಿ ಆಂದೋಲನವೊಂದಕ್ಕೆ ಅಮೇರಿಕ, ಕೆನಡ, ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿ ಎಂಬೀ ದೇಶಗಳಲ್ಲಿ ರೂಪು ನೀಡುವುದಾಗಿ ಗೀರ್ಟ್ ವಿಲ್ಡರ್ಸ್ ಜುಲೈ 15ರಂದು ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ. ಅಂತೆಯೇ, "ಇಸ್ಲಾಮನ್ನು ತಡೆಯಿರಿ. ಸ್ವಾತಂತ್ರ್ಯವನ್ನು ರಕ್ಷಿಸಿರಿ" ಎಂಬುದು ಕೇವಲ ನೆದರ್‌ಲ್ಯಾಂಡ್ಸ್‌ಗೆ ಮಾತ್ರ ವಲ್ಲ, ಇಡೀ ಪಾಶ್ಚಾತ್ಯ ರಾಷ್ಟ್ರಗಳಿಗೆ ಅನ್ವಯಿಸುವ ಘೋಷಣೆಯಾಗಿದೆ ಎಂದು ವಿಲ್ಡರ್ಸ್ ಡಚ್ ಪಾರ್ಲಿಮೆಂಟಿಗೆ ತಿಳಿಸಿದ್ದಾರೆ.

## ಅಫಘಾನ್ ಯುದ್ಧ ಸಂದಿಗ್ಧ ಘಟ್ಟದಲ್ಲಿ: ಸೇನಾ ಜನರಲ್

ಕಾಬೂಲ್: ಅಫಘಾನ್ ಕಾರ್ಯಾಚರಣೆಯು ಅತ್ಯಂತ ಸಂದಿಗ್ಧ ಘಟ್ಟಕ್ಕೆ ತಲುಪಿದೆ ಎಂದು ಅಮೇರಿಕದ ನೂತನ ಸೇನಾ ಜನರಲ್ ಡೇವಿಡ್ ಪೀಟರ್ಸ್ ಹೇಳಿದ್ದಾರೆ. ಅವರು ಅಫಘಾನ್‌ನಲ್ಲಿರುವ 1 ಲಕ್ಷದ 50 ಸಾವಿರ ನ್ಯಾಟೋ ಪಡೆಯ ನೇತೃತ್ವವನ್ನು ವಹಿಸಿಕೊಂಡಿದ್ದಾರೆ.

"ನಾವು ಅತ್ಯಂತ ಕಠಿಣ ಹೋರಾಟದಲ್ಲಿ ನಿರತರಾಗಿದ್ದೇವೆ. ನಾವು ತಾಲಿಬಾನ್ ಮತ್ತು ಅಲ್‌ಕೈದಾಗಳಿಂದ ತೀವ್ರತರವಾದ ಪ್ರತಿರೋಧವನ್ನು ಎದುರಿಸುತ್ತಿದ್ದೇವೆ. ಅಫಘಾನ್‌ನಲ್ಲಿ ಹೋರಾಡುವುದು ಸಣ್ಣ ಸವಾಲಲ್ಲ" ಎಂದು ಅವರು ಹೇಳಿದ್ದಾರೆ.

## ಬಾಂಗ್ಲಾ: 173 ಜಮಾಅತ್-ಶಿಬಿರ್ ಕಾರ್ಯಕರ್ತರಿಗೆ ಜಾಮೀನು

ಢಾಕ್ಕಾ: ಪೊಲೀಸ್ ಕಾರ್ಯಾಚರಣೆಗೆ ಭಂಗ ತಂದ ಮತ್ತು ಸರಕಾರಿ ವಿರೋಧಿ ರ್‍ಯಾಲಿಯಲ್ಲಿ ತೊಡಗಿಕೊಂಡಿದ್ದ ಆರೋಪದಲ್ಲಿ ಬಂಧಿತರಾದ ಬಾಂಗ್ಲಾ ಜಮಾಅತೆ ಇಸ್ಲಾಮಿ ಮತ್ತು ಇಸ್ಲಾಮಿ ಛಾತ್ರ ಶಿಬಿರ್‌ನ ಒಟ್ಟು 173 ಮಂದಿ ಕಾರ್ಯಕರ್ತರಿಗೆ ಇಲ್ಲಿನ ಉಚ್ಚ ನ್ಯಾಯಾಲಯವು ನಿರೀಕ್ಷಣಾ ಜಾಮೀನು ನೀಡಿದೆ. ಖುಲ್ನಾ ನಗರದ ಜಮಾಅತ್ ನಾಯಕ ರಫೀಉದ್ದೀನ್, ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಗುಲಾಮ್ ಕುದ್ದೂಸ್ ಮತ್ತು ಕುಶ್ತಿಯಾ ಸರಕಾರಿ ಕಾಲೇಜಿನ ಮಾಜಿ ಪ್ರಾಂಶುಪಾಲರಾದ ಎ.ಕೆ. ಅಲೀಮ್ ನಿರೀಕ್ಷಣಾ ಜಾಮೀನು ಪಡೆದವರಲ್ಲಿ ಪ್ರಮುಖರಾಗಿದ್ದಾರೆ.

## ಹಿಜಾಬ್ ನಿಷೇಧ-ಬ್ರಿಟಿಷರ ನಡೆ



ಲಂಡನ್: "ಸಾರ್ವಜನಿಕ ಸ್ಥಳಗಳಲ್ಲಿ ಮುಸ್ಲಿಮ್ ಮಹಿಳೆಯರು ಹಿಜಾಬ್ ಧರಿಸುವುದರ ಮೇಲೆ ನಿಷೇಧ ಹೇರುವ ವಿಷಯದಲ್ಲಿ ಬ್ರಿಟನ್ ಎಂದಿಗೂ ಫ್ರಾನ್ಸನ್ನು ಅನುಸರಿಸಲಾರದು. ಅಂತಹ ನಡೆಯು ದೇಶದ ಸಹಿಷ್ಣುತೆ ಮತ್ತು ಗೌರವಯುತ ಸಮಾಜಕ್ಕೆ ಧಕ್ಕೆ ತರುತ್ತದೆ" ಎಂದು ಬ್ರಿಟನ್‌ನ ವಲಸೆ (Immigration) ಮಂತ್ರಿ ಡಾಮಿಯಾನ್ ಗ್ರೀನ್ ಹೇಳಿದ್ದಾರೆ.

'ದಿ ಸಂಡೇ ಟೆಲಿಗ್ರಾಫ್'ಗೆ ನೀಡಿದ ಸಂದರ್ಶನದಲ್ಲಿ ಹಿಜಾಬ್ ನಿಷೇಧವು ಬ್ರಿಟಿಷೇತರ ಕೃತ್ಯವೆನಿಸುವುದು ಎಂದು ಅವರು ಅಭಿಪ್ರಾಯಪಟ್ಟರು.

ಅದೇ ವೇಳೆ 'ಯುಗೊ' (Yougov) ಸಮೀಕ್ಷೆಯು ವರದಿ ಮಾಡಿರುವಂತೆ ದೇಶದಲ್ಲಿ ಹಿಜಾಬ್‌ಗೆ ಹೆಚ್ಚಿನ ವಿರೋಧ ವಿಲ್ಲದಿದ್ದರೂ ಮುಖ ಪರದೆಯನ್ನು ಕಾನೂನು ಬಾಹಿರಗೊಳಿಸಬೇಕೆಂದು 67% ಮಂದಿ ಅಭಿಪ್ರಾಯಪಡುತ್ತಾರೆ.

## ಬೊಸ್ನಿಯ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಬಾಕಿರ್ ಬೆಗೋವಿಚ್

ಬೊಸ್ನಿಯಾದ ಮಾಜಿ ಅಧ್ಯಕ್ಷ ದಿ| ಇಝ್ಝತ್ ಅಲಿ ಬೆಗೋವಿಚ್‌ರ ಪುತ್ರ ಬಾಕಿರ್ ಬೆಗೋವಿಚ್ ಬೋಸ್ನಿಯನ್ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮೋಕ್ರಾಟಿಕ್ ಲೇಬರ್ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆ ಆಗಿದ್ದಾರೆಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಈಗಿನ ಅಧ್ಯಕ್ಷರಾದ ಹಾರಿಸ್ ಸಿಲಾಜಿಚ್‌ರಿಗೆ ತೀವ್ರ ಸ್ಪರ್ಧೆ ನೀಡಲು ಬಾಕಿರ್ ಸೂಕ್ತ ಅಭ್ಯರ್ಥಿಯಾಗಿದ್ದಾರೆಂದು ಪಕ್ಷ ಮನಗಂಡಿದೆ. ಪಕ್ಷದ ಸಭೆಯಲ್ಲಿ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಹೆಚ್ಚು ಮತ ಪಡೆದ ಸುಲೈಮಾನ್‌ರವರು ತನ್ನ ಬದಲು ಬಾಕಿರ್‌ರನ್ನು ಅಭ್ಯರ್ಥಿಯಾಗಲು ಸೂಚಿಸಿದರು. ಸ್ಪರ್ಧೆಯಲ್ಲಿದ್ದ ಮತ್ತೊರ್ವ ಅಭ್ಯರ್ಥಿ ಖಾಲಿದ್ ಕೂಡಾ ಬಾಕಿರ್‌ರನ್ನು ಬೆಂಬಲಿಸಿದರು.

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8 ❖ ಸಂಚಿಕೆ: 20 ❖ 1985 ಸೆಪ್ಟಂಬರ್ 1-7

### ಬುದ್ಧಿಜೀವಿಗಳ ನಾಲ್ಕಂಶ ಸೂತ್ರ?

ಯೋಜನಾ ಆಯೋಗದ ನಿಯತಕಾಲಿಕದ ಸ್ವಾತಂತ್ರ್ಯೋತ್ಸವ ಸಂಚಿಕೆಯಲ್ಲಿ ದೇಶದ ಕೆಲವು ಬುದ್ಧಿಜೀವಿಗಳು ಮತಭ್ರಾಂತಿ, ಕೋಮುದ್ವೇಷ ಮತ್ತು ಪ್ರತ್ಯೇಕತಾ ವಾದದ ಅಪಾಯವನ್ನು ಎದುರಿಸಲಿಕ್ಕಾಗಿ ನಾಲ್ಕಂಶ ನೀತಿ ಸೂತ್ರವೊಂದನ್ನು ಸೂಚಿಸಿದ್ದಾರೆ. ಆ ಪೈಕಿ ಪಿ.ಎನ್. ಹಕ್ಸರ್, ಜಸ್ಟಿಸ್ ಕೃಷ್ಣ ಅಯ್ಯರ್, ಖುಶ್ವಂತ್ ಸಿಂಗ್, ಪ್ರೊ ಇರ್ಫಾನ್ ಹಬೀಬ್ ಮತ್ತು ವಸಂತ ಸಾಠೆ ಪ್ರಮುಖರು. ಅವರು ನೀಡಿರುವ ಸಲಹೆಗಳು ಇಂತಿವೆ. 1. ಧರ್ಮವನ್ನು ಕೇವಲ ಕ್ಷೇತ್ರ ಮತ್ತು ಮನೆಗಳಿಗೆ ಸೀಮಿತಗೊಳಿಸಬೇಕು. 2. ಮಾನವೀಯ ಮತ್ತು ವೈಚಾರಿಕ ಧೋರಣೆಗಳಿಗೆ ಪ್ರೋತ್ಸಾಹ ನೀಡಬೇಕು. 3. ಸರಕಾರವು ಧರ್ಮ ಪ್ರಚಾರಕ್ಕೆ ತೊಡಗಬಾರದು. 4. ಈ ಧ್ಯೇಯ ಸಾಧನೆಗಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಮತ್ತು ಪ್ರಚಾರ ಮಾಧ್ಯಮಗಳಿಗೆ ಕಾರ್ಯಸೂಚಿಯೊಂದನ್ನು ರಚಿಸಬೇಕು.

ಧಾರ್ಮಿಕ ಭ್ರಾಂತಿಯಿಂದ ರೋಸಿರುವ ಈ ಬುದ್ಧಿಜೀವಿಗಳು ದೇಶದ ಹಿತ ದೃಷ್ಟಿಯಿಂದ ನೀಡಿರುವ ಸಲಹೆಗಳು ಗಮನಾರ್ಹವಾಗಿವೆ. ಆದರೂ ಅವರು ಧರ್ಮವನ್ನು ಒಮ್ಮೆಲೆ ಕೈಬಿಡುವ ಬದಲಿಗೆ ಸಮಸ್ಯೆಯ ಮೂಲ ದೋಷವನ್ನು ಮನಗಂಡಿದ್ದರೆ ಉತ್ತಮವಿತ್ತು. ಸಾಮಾನ್ಯವಾಗಿ ರಾಜಕಾರಣಿಗಳು ಸಂದರ್ಭಕ್ಕೆ ತಕ್ಕಂತೆ ಧರ್ಮವನ್ನು ದೂಷಿಸುತ್ತಾರೆ. ಅದೇ ವೇಳೆ ಸ್ವಾರ್ಥ ಹಿತ ಸಾಧನೆಗಾಗಿ ಜನರ ಧಾರ್ಮಿಕ ಭಾವನೆಗಳನ್ನು ಶೋಷಿಸುತ್ತಾರೆ. ಆದರೆ ಬುದ್ಧಿಜೀವಿಗಳೆನಿಸಿಕೊಂಡವರು ಧರ್ಮದ ಬಗ್ಗೆ ವಿಶಾಲ ದೃಷ್ಟಿಕೋನವನ್ನು ಇರಿಸಿಕೊಳ್ಳಬೇಕು. ಧರ್ಮದ ಬಗೆಗಿನ ದೋಷಪೂರ್ಣ ಕಲ್ಪನೆಯಿಂದಾಗಿಯೇ ಬುದ್ಧಿಜೀವಿಗಳಲ್ಲಿ ಧರ್ಮದ ಬಗ್ಗೆ ತಪ್ಪು ಕಲ್ಪನೆ ಮೂಡುವಂತಾಗಿದೆ. ದೇವಾಸ್ತಿತ್ವದ ನಿರಾಕರಣೆಯೂ ಧರ್ಮದ ತುಚ್ಛೀಕರಣಕ್ಕೆ ಕಾರಣವಾಗಿದೆ. ಸೃಷ್ಟಿಕರ್ತ ಮತ್ತು ಪರಿಪಾಲಕನಾಗಿರುವ ದೇವನನ್ನೇ ನಿರಾಕರಿಸುವವರ ಮನದಲ್ಲಿ ಧಾರ್ಮಿಕ ಸದ್ಭಾವನೆ ಮೂಡಲು ಸಾಧ್ಯವಿಲ್ಲ. ಆದ್ದರಿಂದ ಅಂಥವರು ಸಾಮಾಜಿಕ ಮತ್ತು ರಾಜಕೀಯ ಕೆಡುಕುಗಳಿಗೆ ಧರ್ಮವನ್ನೇ ಆರೋಪಿಸುತ್ತಾರೆ. ಬುದ್ಧಿಜೀವಿಗಳು ನೈಜ ದೇವ ಕಲ್ಪನೆಯ ಬಗ್ಗೆ ನಿಷ್ಪಕ್ಷಪಾತವಾಗಿ ವಿಚಾರ ಮಾಡಿದರೆ ಮಾನವರನ್ನೂ ಸಕಲ ಚರಾಚರ ವಸ್ತುಗಳನ್ನೂ ಸೃಷ್ಟಿಸಿರುವ ದೇವನು ಖಂಡಿತವಾಗಿಯೂ ಒಂದು ಜೀವನ ವ್ಯವಸ್ಥೆಯನ್ನು ನೀಡಿರಲೇ ಬೇಕೆಂಬ ನಿರ್ಧಾರಕ್ಕೆ ತಲುಪದಿರಲಾರರು. ಇಡೀ ಮಾನವಕುಲವು ಒಬ್ಬನೇ ದೇವನ ದಾಸ್ಯಾನುಸಾರಿಗಳಾಗಿ ಆತನು ಆದೇಶಿಸಿರುವ ಜೀವನ ಸಂಹಿತೆಗೆ ಬದ್ಧವಾಗಿ ಜೀವಿಸಿದರೆ ಸಮಸ್ಯೆಗಳು ಉದ್ಭವಿಸಲಾರವು. ಒಂದು ವೇಳೆ ಮಾನವೀಯ ದೌರ್ಜನ್ಯಗಳಿಂದಾಗಿ ಏನಾದರೂ ಸಮಸ್ಯೆ ಉದ್ಭವಿಸಿದರೂ ಆ ಜೀವನ ಸಂಹಿತೆಯ ಆಧಾರದಲ್ಲಿಯೇ ಅದನ್ನು ಪರಿಹರಿಸಬಹುದು.

# ಸಮಾಜ ಸೇವಾ ಘಟಕದಿಂದ ನೆರವು



● ಶಸ್ತ್ರಚಿಕಿತ್ಸೆಯ ಮೊದಲು ● ಶಸ್ತ್ರಚಿಕಿತ್ಸೆಯ ನಂತರ

**ಮಂಗಳೂರು:** ಆಕೆಯ ವಯಸ್ಸು 28. ಮೂರು ಮಕ್ಕಳ ತಾಯಿ. ಮೊದಲ ಪತಿ ನಿಧನರಾಗಿದ್ದಾರೆ. ದೂರದ ಮಂಜೇಶ್ವರಕ್ಕೆ ಮರು ಮದುವೆ ಮಾಡಿಸಿಯೂ ಸುಖವಿಲ್ಲ. ಸಮಸ್ಯೆಗಳು ಮುಗಿದಿಲ್ಲ. ಜತೆಗೆ ಕಿತ್ತು ತಿನ್ನುವ ಬಡತನ ಮತ್ತು ಬಲಕಾಲಿನಲ್ಲಾದ ಮಾರಕ ಕ್ಯಾನ್ಸರ್ ರೋಗ. ತಂಗಲು ಆಸರೆಯಾಗಿದ್ದ ಮನೆಯನ್ನೂ ಚಿಕಿತ್ಸೆಗಾಗಿ ಮಾರಲಾಯಿತು. ಆದರೂ ಗುಣಮುಖವಾಗಿಲ್ಲ. ಈಗಿರುವ ಏಕ ಕೋಣೆಯ ಪುಟ್ಟ ಮನೆಯಲ್ಲಿ ಮೂಲಭೂತ ಸೌಕರ್ಯಗಳಿಲ್ಲ. ಶೌಚಾಲಯವೂ ಇಲ್ಲ. ಆರ್ಥಿಕ ಅಡಚಣೆಯಿಂದ ಬಹಳ ನಿರಾಶರಾಗಿದ್ದ ಕುಟುಂಬವದು.

ಆದರೆ ಬಹಳಷ್ಟು ಚಿಕಿತ್ಸೆ ನಡೆಸಿಯೂ ಕಾಲಿನ ಕ್ಯಾನ್ಸರ್ ದಿನದಿಂದ ದಿನಕ್ಕೆ ಉಲ್ಬಣವಾಗಿದ್ದು ಕೂಡಲೇ ಶಸ್ತ್ರಚಿಕಿತ್ಸೆಯ ಮೂಲಕ ಬಲಕಾಲು ಕತ್ತರಿಸಬೇಕೆಂದೂ ತಪ್ಪಿದಲ್ಲಿ ಜೀವಕ್ಕೆ ಅಪಾಯವಿದೆಯೆಂದೂ ನಗರದ ಎ.ಜೆ. ಆಸ್ಪತ್ರೆಯ ವೈದ್ಯರು ಸೂಚಿಸಿದಾಗ 'ಹಣವನ್ನು ಎಲ್ಲಿಂದ ಜೋಡಿಸುವುದು' ಎಂದು ಕಂಗಾಲಾಗಿದ್ದ ಝೊಹರಾಳಿಗೆ ಜಮಾಅತೆ ಇಸ್ಲಾಮೀ ಹಿಂದ್ ಮಂಗಳೂರಿನ ಸಮಾಜ ಸೇವಾ ಘಟಕವು ಶಸ್ತ್ರಚಿಕಿತ್ಸೆಯ ಸಂಪೂರ್ಣ ವೆಚ್ಚ ಭರಿಸಿ, ವೈದ್ಯಕೀಯ ಸಹಾಯವನ್ನೂ ಒದಗಿಸಿ, ಮನೆಗೆ ಶೌಚಾಲಯ ಮತ್ತು ಸ್ನಾನದ ಕೊಠಡಿಯನ್ನು ಹೊಸದಾಗಿ ನಿರ್ಮಿಸಿ ಕೊಟ್ಟಿದೆ. ಜತೆಗೆ ಝೊಹರಳ ಕುಟುಂಬಕ್ಕೆ ಪ್ರತಿ ತಿಂಗಳು ಸಾವಿರ ರೂಪಾಯಿಯಂತೆ 1 ವರ್ಷ ರೇಶನ್ ವಿತರಿಸುವ ನೆರವಿಗೂ ಚಾಲನೆ ನೀಡಿದೆ.

ತನ್ನ ಬಲಗಾಲನ್ನು ಕಳೆದುಕೊಂಡಿರುವ ಝೊಹರ ಇದೀಗ ಚೇತರಿಸಿಕೊಳ್ಳುತ್ತಿದ್ದು ರೋಗಿಯನ್ನು ಮನೆ ಬಾಗಿಲಿಗೆ ಬಹಳ ಗೌರವದಿಂದ ತಲುಪಿಸಲಾಗಿದೆ. ಆರ್ಥಿಕ ಅಡಚಣೆಯಿಂದ ಕಂಗಾಲಾಗಿದ್ದ ಈ ಕುಟುಂಬಕ್ಕೆ ಈಗಾಗಲೇ ಸುಮಾರು 50,000 ರೂಪಾಯಿಯನ್ನು ಖರ್ಚು ಮಾಡಲಾಗಿದೆ. ರೋಗಿಯ ಮುಂದಿನ ಖರ್ಚುವೆಚ್ಚಕ್ಕೂ ಹಣದ ಅಗತ್ಯವಿದೆ ಎಂದು ಕಾರ್ಯದರ್ಶಿ ಸಿದ್ದೀಕ್ ಜಕ್ರಿಬೆಟ್ಟು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶೈಖ್ ಬುಡಾನ್ ಸಾಹೇಬರಿಗೆ ರಾಷ್ಟ್ರೀಯ ಪ್ರಶಸ್ತಿ



**ವಾಸ್ಕೊ:** ಗೋವಾ ರಾಜ್ಯ ಸರಕಾರದ ಆದರ್ಶ ಶಿಕ್ಷಕ ಹಾಗೂ ಉತ್ಕೃಷ್ಟ ಸಮಾಜ ಸೇವಕ ಪ್ರಶಸ್ತಿ ವಿಜೇತರಾಗಿರುವ ನಿವೃತ್ತ ಶಿಕ್ಷಕ ಶೈಖ್ ಬುಡಾನ್ ಸಾಹೇಬರಿಗೆ ಗೋವಾ ಸರಕಾರ ಮಹಾತ್ಮಾ ಜ್ಯೋತಿ ರಾಜ್ ಫುಲೆ ರಾಷ್ಟ್ರೀಯ ಪ್ರಶಸ್ತಿ(ನಾಗಪುರ) ನೀಡಿ ಗೌರವಿಸಿದೆ. ಇವರು ಜಮಾಅತೆ ಇಸ್ಲಾಮೀ ಹಿಂದ್‌ನ ಹಿತೈಷಿಯಾಗಿದ್ದು ಸನ್ಮಾರ್ಗದ ಓದುಗರಾಗಿದ್ದಾರೆ.

## ಪ್ರತಿಭಾ ಸ್ಪರ್ಧೆ

**ಕಾಪು:** ಎಸ್.ಐ.ಓ. ಕಾಪು ಶಾಖೆಯ ವತಿಯಿಂದ ಅಗಸ್ಟ್ 1ರಂದು ಇಲ್ಲಿನ ಜಾಫರ್ ಟವರ್‌ನಲ್ಲಿ (ಹಳೇ ಪೊಲೀಸ್ ಸ್ಟೇಷನ್ ಬಳಿ) ಪ್ರತಿಭಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. 5ರಿಂದ 10ನೇ ತರಗತಿ ವರೆಗಿನ ಕಾಪು ಶಾಖೆಯ ಎಲ್ಲ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಕಾರ್ಯಕ್ರಮದಲ್ಲಿ ಪ್ರಬಂಧ, ಕ್ವಿಝ್, ಡ್ರಾಯಿಂಗ್ ಸ್ಪರ್ಧೆಗಳಿವೆ. ಬೆಳಿಗ್ಗೆ 10ರಿಂದ ಸ್ಪರ್ಧೆ ಆರಂಭವಾಗಲಿದೆ.

ಹೆಚ್ಚಿನ ವಿವರಗಳಿಗಾಗಿ 9844155051 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಉನ್ನತ ದರ್ಜೆ



ಈ ಬಾರಿಯ ಬಿಎಸ್ಸಿ (ಬಯೋಟೆಕ್) ಅಂತಿಮ ಪರೀಕ್ಷೆಯಲ್ಲಿ ಇಲ್ಲಿನ ಸೈಂಟ್ ಆಗ್ನೆಸ್ ಕಾಲೇಜಿನ ಮಿನಾಝ್ 93% ಅಂಕ ಪಡೆದಿದ್ದಾರೆ. ಇವರು ಮುಲ್ಲಾರ್‌ನ ಮುಹಮ್ಮದ್ ಖೈರುಲ್ಲಾಹ್ ಮತ್ತು ಫರ್ಝಾನ ಬೇಗಂರ ಪುತ್ರಿ.

## ಸಾರ್ವಜನಿಕ ಸಭೆ

**ಪಾಣೆಮಂಗಳೂರು:** ಜಮಾಅತೆ ಇಸ್ಲಾಮೀ ಹಿಂದ್ ಪಾಣೆಮಂಗಳೂರು ಶಾಖೆಯ ಆಶ್ರಯದಲ್ಲಿ 'ವಿಸ್ಮಯಕಾರಿ ಕುರ್‌ಆನ್ ಮತ್ತು ಮುಸ್ಲಿಮರು' ಎಂಬ ವಿಷಯದಲ್ಲಿ ಇತ್ತೀಚೆಗೆ ಅಲ್ ಹಸನಾತ್ ಮಸೀದಿಯಲ್ಲಿ ಸಾರ್ವಜನಿಕ ಸಭೆ ಜರಗಿತು. ಮುಖ್ಯ ಭಾಷಣಗಾರರಾಗಿ ಮಡಿಕೇರಿಯ ಜ| ಉಮರ್ ಮೌಲವಿ ಆಗಮಿಸಿದ್ದರು. ಸ್ಥಳೀಯ ಕಾರ್ಯದರ್ಶಿ ಮುಖ್ತಾರ್ ಅಹ್ಮದ್ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆರಂಭದಲ್ಲಿ ಇಸ್ಮಾಈಲ್ ಶಾಕಿರ್ ಕುರ್‌ಆನ್ ಪಠಿಸಿದರು. ಅಬ್ದುಶ್ಶುಕೂರ್ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

# ಸಮಾಲೋಚನಾ ಸಭೆ




**ಕೋಟೆಕಾರ್:** "ಎಲ್ಲಾ ಧರ್ಮ ಬಾಂಧವರು ತಮ್ಮ ತಮ್ಮ ಧರ್ಮಗಳನ್ನು ಆಚರಿಸುವುದರೊಂದಿಗೆ ಇನ್ನಿತರ ಧರ್ಮಗಳ ತಿಳುವಳಿಕೆಯನ್ನು ಪಡೆದುಕೊಳ್ಳುವ ಮುಖಾಂತರ ಧಾರ್ಮಿಕ ಸೌಹಾರ್ದತೆಯನ್ನು ಬೆಳೆಸಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿ ಧರ್ಮದಲ್ಲಿ ಆಚರಿಸುವ ಮೂರು ಹಬ್ಬಗಳಾದ ಈದ್, ದೀಪಾವಳಿ ಮತ್ತು ಕ್ರಿಸ್ಮಸ್‌ಗಳ ಒಳ ಸಂದೇಶವನ್ನು ಪರಿಚಯಿಸುವ ಕೆಲಸ ನಡೆಯಲಿ" ಎಂದು ಬಸ್ತಿ ವಾಮನ ಶೆಣೈ ಹೇಳಿದರು.

ಅವರು ಧಾರ್ಮಿಕ ಸೌಹಾರ್ದ ವೇದಿಕೆ ದ.ಕ. ಜಿಲ್ಲೆ ಆಯೋಜಿಸಿದ ಸೋಮೇಶ್ವರ ಕೋಟೆಕಾರ್ ಪಂಚಾಯತ್ ಮಟ್ಟದ ಸಮಿತಿಯ ಪೂರ್ವ ಸಮಾಲೋಚನಾ ಸಭೆಯಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದರು.

ಈ ಸಭೆಯಲ್ಲಿ ಸರ್ವಧರ್ಮೀಯ ಸದಸ್ಯರ ವಿಚಾರ ವಿನಿಮಯ ನಡೆದು ಎಲ್ಲಾ ಪ್ರದೇಶದ ಪ್ರಾತಿನಿಧ್ಯವಿರುವ ಸುಮಾರು 20 ಸದಸ್ಯರನ್ನು ಆರಿಸಲಾಯಿತು. ಸ್ಥಾನೀಯ ಸಂಚಾಲಕರಾಗಿ ಸುಕುಮಾರ್ ಭಟ್, ಕಾರ್ಯದರ್ಶಿಯಾಗಿ ಎ.ಹೆಚ್. ಮಹಮೂದ್ ಹಾಗೂ ಉಪಸಂಚಾಲಕರಾಗಿ ಆಲ್ವಿನ್ ಡಿ ಪನೀರ್ ಅವರನ್ನು ಚುನಾಯಿಸಲಾಯಿತು.

ಕೋಟೆಕಾರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರಗಿದ ಈ ಕಾರ್ಯಕ್ರಮದಲ್ಲಿ ಜ| ಮುಹಮ್ಮದ್ ಕುಂಞಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಪ್ರಧಾನ ಕಾರ್ಯದರ್ಶಿ ಜ| ಕೆ.ಎಂ. ಶರೀಫ್ ಉಪಸ್ಥಿತರಿದ್ದರು. ಕೆ. ಸುಕುಮಾರ್ ಭಟ್ ಕಾರ್ಯಕ್ರಮವನ್ನು ನಿರೂಪಿಸಿದರು. ಕೃಷ್ಣ ಗಟ್ಟಿ ಧನ್ಯವಾದ ಸಲ್ಲಿಸಿದರು.

**2010ರ ಹಜ್ಜ್ ಬುಕ್ಕಿಂಗ್ ಪ್ರಾರಂಭಗೊಂಡಿದೆ**

ದರ ರೂ. 1,95,000/- ಡಿಲಕ್ಸ್ ಕ್ಲಾಸ್
ದರ ರೂ. 1,60,000/- ಬಜೆಟ್ ಕ್ಲಾಸ್
(ಮಂಗಳೂರಿನಿಂದ ಮಂಗಳೂರಿಗೆ)

**ರಂಝಾನ್ ಉಮ್ರಾ ಪ್ಯಾಕೇಜ್ ಪ್ರಾರಂಭಗೊಂಡಿದೆ**

ದರ ರೂ. 72,000/- 1 ತಿಂಗಳಿಗೆ
ದರ ರೂ. 58,000/- 17 ದಿನಗಳಿಗೆ
(ಮಂಗಳೂರಿನಿಂದ ಮಂಗಳೂರಿಗೆ)



ಮಕ್ಕಾದಲ್ಲಿ ಕಳೆದ ಸುಮಾರು 22 ವರ್ಷಗಳಿಂದ ಹಾಜಿಗಳ ಸೇವೆ ಸಲ್ಲಿಸುತ್ತಾ ಬಂದಿರುವ
ಹಾಜಿ ಜಿ.ಎಚ್. ಹಮೀದ್, ಉಪ್ಪಿನಂಗಡಿ ಮಠ
+966 506573284



ಬುಕ್ಕಿಂಗ್‌ಗಾಗಿ ಕೂಡಲೇ ಸಂಪರ್ಕಿಸಿರಿ:
ಹಾಜಿ ಝಾಕಿರ್ ಹುಸೈನ್, ಕೃಷ್ಣಾಪುರ 9886132465

**AL- MUNAWARA INTERNATIONAL**
HAJJ, UMRAH & ZIYARAH
Shop No. 2, IInd Floor, Singala Chambers Maidan 4th Cross,
Mangalore - 575001 Ph: 4272465 E-mail: almunawara10@gmail.com

ಅಲ್ಲಾಹನ ಸಂತುಷ್ಟಿಗಾಗಿ 'ಹಜ್ಜ್' ಮತ್ತು 'ಉಮ್ರಾ'ಗಳ ಸಂಕಲ್ಪ ಮಾಡಿದಾಗ ಅದನ್ನು ಪೂರ್ತಿಗೊಳಿಸಿರಿ. (ಪವಿತ್ರ ಕುರ್‌ಆನ್: 2:196)

K.M. Haris, Abdul Samad
AIT
**Aysha INTERNATIONAL TRAVELS**
ಆಯಿಶಾ ಇಂಟರ್‌ನ್ಯಾಷನಲ್ ಟ್ರಾವೆಲ್ಸ್

**RAMZAN UMRAH PACKAGE**
1 to 15 DAYS - 65,000/-
LAST 15 DAYS - 75,000/-
1 MONTH - 85,000/-

**HAJ & UMRAH**
BOOKING NOW
SPECIAL DISCOUNT

**HAJ PACKAGE**
First Class 1,95,000/-
Second Class 1,75,000/-

• Domestic & International Air Tickets • Passport Service • Emigration • Visit Visa • Visa Clearence
Sadananda Towers Annex, 1st Floor, D-No. 2-2-62B7, City Bus Stand, Udupi-576101.
Ph: 0820-4294313 Fax: 0820-4294313 Mob: 9844970812, 9880172472, 9620441544
E-mail : haris_yachi@yahoo.com




To. ______________________

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ಆಗಸ್ಟ್ 01 – 07 / 1431 ಶಅಬಾನ್ 18 – 24



Shop No. C-3 & 4, HMS Shopping Complex,
M.G. Road, Tumkur-572101. Karnataka.
e-mail: taj_sharco@rediffmail.com

'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 27-07-2010 (Tuesday) & 29-07-2010 (Thursday)

# ಧೋರಣೆಯ ಬದಲಾವಣೆಯಿಂದ ಸಿದ್ಧಾಂತ ಬದಲಾಗುವುದಿಲ್ಲ

**ಮಂಗಳೂರು:** "ಜಮಾಅತೆ ಇಸ್ಲಾಮಿ ಹಿಂದ್ ಮೂಲಭೂತ ಸಿದ್ಧಾಂತ ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದು ರ್ರಸೂಲುಲ್ಲಾಹ್ ಆಗಿದೆ. ತನ್ನ ಮೂಲ ಸಿದ್ಧಾಂತದಿಂದ ಎಳ್ಳಷ್ಟೂ ವ್ಯತಿಚಲಿಸದೆ 'ಧರ್ಮ ಸಂಸ್ಥಾಪನೆ'ಗಾಗಿ ಅದು ಕಾಲಕ್ಕೆ ತಕ್ಕಂತೆ ಧೋರಣೆಗಳನ್ನು ರೂಪಿಸುತ್ತಾ ಬಂದಿದೆ. ಜೀವನದ ಎಲ್ಲ ರಂಗ ಗಳಲ್ಲೂ ಇಸ್ಲಾಮನ್ನು ಸಂಸ್ಥಾಪಿಸುವುದೇ ಅದರ ಗುರಿಯಾಗಿದೆ. ಫ್ಯಾಸಿಸ್ಟ್ ಸಿದ್ಧಾಂತವು ಮುಂದುವರಿಯುತ್ತಾ ಇರುವಾಗ ಜಾತ್ಯತೀತ ಪ್ರಜಾಪ್ರಭುತ್ವವನ್ನು ಉಳಿಸಲಿಕ್ಕಾಗಿ ರಾಜಕೀಯ ರಂಗಕ್ಕೆ ಜ.ಇ. ಧುಮುಕಿದೆ. ರಾಜಕೀಯವು ಇಸ್ಲಾಮಿನ ಅವಿಭಾಜ್ಯ ಅಂಗವಾಗಿದೆ. ಆದ್ದರಿಂದ ಜಮಾಅತೆ ಇಸ್ಲಾಮಿಯನ್ನು ತಿಳಿಯಲು ಪ್ರಯತ್ನಿಸ ಬೇಕು" ಎಂದು ಶಾಂತಿ ಪ್ರಕಾಶನದ ವ್ಯವಸ್ಥಾಪಕ ಮುಹಮ್ಮದ್ ಕುಂಞಿ ಹೇಳಿದರು.

ಅವರು ಜ.ಇ. ಹಿಂದ್ ನಗರ ಶಾಖೆಯು ಜುಲೈ 25ರಂದು ಬಂದರದ ಕಚ್ಚೀ ಮೇಮನ್ ಮಸೀದಿಯಲ್ಲಿ ಹಮ್ಮಿಕೊಂಡಿದ್ದ ಧಾರ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

'ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಮುಸ್ಲಿಮರ ಹೊಣೆಗಾರಿಕೆ ಗಳು' ಎಂಬ ವಿಷಯದಲ್ಲಿ ಮಾತನಾಡಿದ ಕುಂಬ್ಳೆ ಮಸ್ಜಿದು ನ್ನೂರ್‌ನ ಖತೀಬರಾದ ಅಶ್ರಫ್ ಬಾಯಾರ್, "ಇಸ್ಲಾಮ್ ಕೇವಲ ಕೆಲವು ವಿಶ್ವಾಸ ಮತ್ತು ಆರಾಧನೆಗಳ ಹೆಸರಲ್ಲ. ಕೇವಲ ಆರಾಧನೆಗಳಿಂದ ಸಮಾಜದಲ್ಲಿ ಬದಲಾವಣೆಯುಂಟಾಗಲು ಸಾಧ್ಯ ವಿಲ್ಲ. ಜೀವನದ ಎಲ್ಲ ರಂಗಗಳಲ್ಲೂ ಇಸ್ಲಾಮನ್ನು ಪಾಲಿಸಿ ಕೊಂಡು ರೋಲ್ ಮಾಡೆಲ್‌ಗಳಾಗುವ ಮೂಲಕ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆ ತರಬಹುದು" ಎಂದರು.

ಜ.ಇ.ಹಿಂದ್ ಹಾಸನ ಮತ್ತು ಮೈಸೂರು ವಿಭಾಗ ಸಂಚಾ ಲಕರಾದ ಮುಲ್ಲಾ ಲಿಯಾಕತ್ ಅಹ್ಮದ್‌ರವರು, "ಅಲ್ಲಾಹನ ಕ್ಷಮೆಯ ಕಡೆಗೆ ಧಾವಿಸಿ. ಅವನ ಸಂಪ್ರೀತಿಯನ್ನು ಗಳಿಸಲು ಪ್ರಯತ್ನಿಸಬೇಕು" ಎಂದರು.

ಆರಂಭದಲ್ಲಿ ಬೋಳಂಗಡಿ ಹವ್ವಾ ಜುಮಾ ಮಸ್ಜಿದ್‌ನ ಖತೀಬ್ ಮೌ। ಯಹ್ಯಾ ತಂಙಳ್ ಮದನಿಯವರು 'ಶಫಾಅತ್‌ನ ಇಸ್ಲಾಮಿ ಕಲ್ಪನೆ'ಯೆಂಬ ವಿಷಯದಲ್ಲಿ ಕುರ್‌ಆನ್ ಪ್ರವಚನ ನೀಡಿದರು. ಜ.ಇ. ನಗರಶಾಖೆಯ ಉಪಾಧ್ಯಕ್ಷ ಮುಹಮ್ಮದ್ ಇಸ್ಹಾಕ್ ಪುತ್ತೂರು ಪ್ರಾಸ್ತಾವಿಕ ಭಾಷಣ ಮಾಡಿದರು. ಯೂಸುಫ್ ಪಕ್ಕಲಡ್ಕ ಮತ್ತು ಸಿದ್ದೀಕ್ ಜಕ್ರಿಬೆಟ್ಟು ಕಾರ್ಯಕ್ರಮ ನಿರೂಪಿಸಿದರು.

## ಇಸ್ಲಾಮಿಕ್ ಬ್ಯಾಂಕಿಂಗ್: ಪೂರ್ವಭಾವಿ ಸಭೆ

**ಕೊಚ್ಚಿ:** "ಇಸ್ಲಾಮಿಕ್ ಬ್ಯಾಂಕಿಂಗ್ ವ್ಯವಸ್ಥೆಯು ಬಡತನ ನಿರ್ಮೂಲನದಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಇದು ಅಮೇರಿಕ ಸೇರಿದಂತೆ ಹಲವು ಪಾಶ್ಚಾತ್ಯ ರಾಷ್ಟ್ರಗಳಲ್ಲೂ ವ್ಯಾಪಕವಾಗಿ ಬೆಳೆಯುತ್ತಿದೆ. ಭಾರತದಂತಹ ಬಡಜನರೇ ಅಧಿಕವಿರುವ ದೇಶದಲ್ಲಿ ಈ ವ್ಯವಸ್ಥೆ ಜಾರಿಯಾಗಬೇಕಾದ ಅತಿ ಅಗತ್ಯವಿದೆ. ಮಾನವೀಯತೆಯನ್ನು ಇಷ್ಟಪಡುವವರೆಲ್ಲರೂ ನಮ್ಮ ದೇಶದಲ್ಲಿ ಇಸ್ಲಾಮಿ ವಿತ್ತ ವ್ಯವಸ್ಥೆ ಮತ್ತು ಬ್ಯಾಂಕಿಂಗನ್ನು ಪ್ರೋತ್ಸಾಹಿಸ ಬೇಕು" ಎಂದು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಜಸ್ಟಿಸ್ ಕೃಷ್ಣ ಅಯ್ಯರ್ ಅಭಿಪ್ರಾಯಪಟ್ಟರು.

ಅವರು ಇಲ್ಲಿ ಶಾಂತಪುರಮ್‌ನ ಇಸ್ಲಾಮಿಕ್ ವಿಶ್ವವಿದ್ಯಾ ಲಯವು ಜಿದ್ದಾ ಮೂಲದ ಇಸ್ಲಾಮಿಕ್ ಡೆವಲಪ್‌ಮೆಂಟ್ ಬ್ಯಾಂಕಿನ 'ಇಸ್ಲಾಮಿ ಸಂಶೋಧನೆ ಮತ್ತು ತರಬೇತಿ ಸಂಸ್ಥೆ'(IRTI)ಯ ಸಹಯೋಗದೊಂದಿಗೆ 2010 ಅಕ್ಟೋಬರ್ 3–4ರಂದು ನಡೆಯಲಿರುವ ಅಂತಾರಾಷ್ಟ್ರೀಯ ಸಮಾವೇಶಕ್ಕೆ ಪೂರ್ವಭಾವಿಯಾಗಿ ನಡೆದ ಸಭೆಯಲ್ಲಿ ಮಾತನಾಡುತ್ತಿದ್ದರು.

ಇಸ್ಲಾಮಿಕ್ ಯುನಿವರ್ಸಿಟಿ ಕೌನ್ಸಿಲ್ ಚೇರ್ಮನ್ ಟಿ. ಆರಿಫ್ ಅಲಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇದರಲ್ಲಿ ಅಂತಾ ರಾಷ್ಟ್ರೀಯ ಭಾಷಣಗಾರರಾದ ಸೌದಿಯ ಉಮರ್ ಚಾಪ್ರ, IRTIಯ ಮುಹಮ್ಮದ್ ಉಬೈದುಲ್ಲಾ, ಅಮೇರಿಕದ ಮುಂದಿರ್ ಕಹ್ಫ್, ಹಾರ್ವರ್ಡ್ ವಿ.ವಿ.ಯ ನಾಝಿಮ್ ಅಲಿ, ಕತಾರ್‌ನ ಅಲಿ ಕುರಾದಗಿ, ಯು.ಎ.ಇ.ಯ ಹುಸೈನ್ ಹಾಮಿದ್ ಹಸನ್ ಮತ್ತು ಬಹ್ರೈನಿನ ನಿಝಾಮ್ ಯಾಕೂಬಿ ಭಾಗವಹಿಸಿದ್ದರು.

## ದುರ್ನಾತಕ್ಕೆ ಎಚ್ಚೆತ್ತ ಸರಕಾರ

(ಮುಖಪುಟದಿಂದ)

ಸ್ಥಿತಿ ಮಾತ್ರ ಬಹಿರಂಗವಾಗಿದೆ. ರಾಜ್ಯದಲ್ಲಿ ಈ ಪದ್ಧತಿ ಖಂಡಿತ ನಿರ್ಮೂಲನವಾಗಿಲ್ಲ. ಇನ್ನು ಅನೇಕ ಸವಣೂರುಗಳು ಈ ರಾಜ್ಯ ದಲ್ಲಿರಬಹುದು. ಸ್ವತಂತ್ರಗೊಂಡು ದೇಶಕ್ಕೆ 63 ವರ್ಷ ಸಂದರೂ ಈ ಹೀನ ಪದ್ಧತಿ ಇನ್ನೂ ನಿರ್ಮೂಲನಗೊಂಡಿಲ್ಲ ಎಂಬುದು ವಾಸ್ತವ. ಇಲ್ಲಿ ಜನರು ತಮ್ಮ ಹಕ್ಕಿಗಾಗಿ ಮಲ ಸುರಿದು ಪ್ರತಿ ಭಟನೆ ನಡೆಸುತ್ತಿರುವಾಗ ಅತ್ತ ವಿಧಾನಸೌಧದಲ್ಲಿ ವಿರೋಧ ಪಕ್ಷಗಳು ಬಿರಿಯಾನಿ ಉಂಡು ಚಪ್ಪರಿಸುತ್ತಿದ್ದರೆ, ಮುಖ್ಯಮಂತ್ರಿ ಪರಿವಾರ ಗಣಿ ದೂಳಿನಿಂದ ಕಂಗೆಟ್ಟು ಕಣ್ಣು ಒರೆಸಿಕೊಳ್ಳುತ್ತಿದ್ದರು. ಗಣಿಯೊಳಗೆ ಸಿಲುಕಿರುವ ಈ ಮುಖ್ಯಮಂತ್ರಿಗಳಿಗೆ ಈ ನಾಡಿನ ಬಡವರ, ಮರ್ದಿತರ ಸಮಸ್ಯೆ ಕಾಣಿಸುತ್ತಿಲ್ಲ.

ಇಲ್ಲಿ ಕೇಳಬೇಕಾದ ಪ್ರಶ್ನೆ ಏನೆಂದರೆ, ಮರ್ದಿತರು, ತುಳಿತ ಕ್ಕೊಳಗಾದವರು ಹೀಗೆ ಅಮಾನವೀಯ ರೀತಿಯ ಪ್ರತಿಭಟನೆ ನಡೆಸಿದರೆ ಮಾತ್ರ ಸರಕಾರ ಎಚ್ಚರಗೊಳ್ಳುವುದೇ? ಇದೇ ರೀತಿ ಇಲ್ಲಿ ಉದ್ಯಮಿಗಳ ಕಡತಗಳಿಗೆ ಸಹಿ ಹಾಕಲು ಅವರಿಗೆ ಪ್ರತಿ ಭಟನೆಗಳ ಅವಶ್ಯಕತೆ ಇರುವುದಿಲ್ಲ. ಇಲ್ಲಿ ದಲಿತರು ತಮ್ಮ ಹಕ್ಕಿಗಾಗಿ ಹೋರಾಡುತ್ತಲೇ ಇದ್ದಾರೆ. ಅವರ ಆಹಾರ ಸ್ವಾತಂತ್ರ್ಯ ವನ್ನೂ ಇಲ್ಲಿ ಗೋಹತ್ಯಾ ನಿಷೇಧದ ನೆಪದಲ್ಲಿ ಕಸಿಯಲಾಗುತ್ತಿದೆ. ದಲಿತರ ಬಗ್ಗೆ ಸರಕಾರಕ್ಕಿರುವ ಅನಾದರ ಬಹಿರಂಗವಾಗಿದೆ. ಅವರು ಮಲ ಹೊರುತ್ತಾ ಜೀತದಾಳುಗಳಾಗಿಯೇ ಇರಬೇಕೆಂದು ಇಲ್ಲಿ ಒಂದು ವರ್ಗ ಬಯಸಿದೆ. ಈ ಅಸ್ಪೃಶ್ಯತೆಯ ನಿವಾರಣೆ, ಮಲ ಹೊರುವ ಪದ್ಧತಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಡಾ। ಅಂಬೇಡ್ಕರ್‌ರವರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿ ಕೊನೆಗೆ ಬೌದ್ಧ ಧರ್ಮವನ್ನು ಸ್ವೀಕರಿಸುತ್ತಾ, "ನನ್ನ ಜನರನ್ನು ಮಲ ಹೊರುವ ಪದ್ಧತಿಯಿಂದ ತಪ್ಪಿಸಿದ್ದೇನೆ. ಆದರೆ ಅವರಿಗೆ ಮಲ ತಿನ್ನಿಸಬೇಡಿ" ಎಂದು ಮಾರ್ಮಿಕವಾಗಿ ನುಡಿದ ಮಾತು ಉಲ್ಲೇಖನೀಯ.

ಆದ್ದರಿಂದ ಅವರು ಮಲ ಸುರಿದದ್ದು ತಮ್ಮ ಮೇಲಲ್ಲ. ಬದಲಾಗಿ ಈ ಭ್ರಷ್ಟ ವ್ಯವಸ್ಥೆಯ ಮುಖದ ಮೇಲೆಯೇ ಆಗಿದೆ. ರಾಜ್ಯದಲ್ಲಿ ಈ ಹೀನ ಪದ್ಧತಿಯನ್ನು ಹೋಗಲಾಡಿಸಬೇಕಾಗಿದೆ. ದಲಿತರು ತಮ್ಮ ಹಕ್ಕುಗಳಿಗಾಗಿ ಜಾಗೃತರಾಗುವ ಅನಿವಾರ್ಯತೆ ಇದೆ. ಈ ಪ್ರತಿಭಟನೆಯು ಈ ಪದ್ಧತಿಯ ನಿರ್ಮೂಲನೆಗೆ ನಾಂದಿಯಾಗಬೇಕಾಗಿದೆ. ಭಂಗಿ ಕುಟುಂಬಗಳಿಗೆ ಕೇವಲ ನಿವೇಶನದ ಹಕ್ಕು ಪತ್ರ ವಿತರಿಸಿ ಪೋಸು ನೀಡಿದರೆ ಸಾಲದು. ಈ ಪ್ರಕರಣದ ತನಿಖೆಯನ್ನೂ ಮಾಡಬೇಕು. ಪುರಸಭೆಯ ದೌರ್ಜನ್ಯದ ವಿರುದ್ಧ ಕ್ರಮವನ್ನು ಕೈಗೊಳ್ಳಬೇಕು. ರಾಜ್ಯದಲ್ಲಿ ಈ ಸಮಸ್ಯೆ ಮತ್ತೆ ತಲೆ ಎತ್ತದಂತೆ ಮಾಡಬೇಕಾಗಿದೆ.

## ಗುಜರಾತ್ ಅಭಿವೃದ್ಧಿಯ ಅಸಲಿ ಮುಖ

(ಮುಖಪುಟದಿಂದ)

ತನಿಖೆಗೆ ನೇಮಿಸಿತು. ಗೀತಾ ಜೌಹರಿ ಈ ಎನ್‌ಕೌಂಟರ್ ನಕಲಿಯೆಂದು ಪತ್ತೆ ಮಾಡುವುದರೊಂದಿಗೆ ಪ್ರಕರಣಕ್ಕೆ ಹೊಸ ತಿರುವು ಬಂದಿತ್ತು.

ಗುಜರಾತಿನಲ್ಲಿ ಅಪರಾಧ ಎಂಬುದು ನೀರು ಕುಡಿದಷ್ಟೇ ಸಲೀಸಾಗಿದೆ. ಅಮಿತ್ ಶಾರ ಮನೆಯಿಂದಲೇ ಸೊಹ್ರಾಬುದ್ದೀನ್ ಹತ್ಯೆಗೆ ಸಂಚು ರೂಪಿಸಲಾಗಿದೆ. ಎ.ಸಿ.ಪಿ. ವಂಜಾರರಿಗೆ ಅಮಿತ್‌ಶಾರೇ ನೇರವಾಗಿ ನಿರ್ದೇಶನ ನೀಡಿದ್ದಾನೆಂದು ಸಿಬಿಐ ಹೇಳುತ್ತಿದೆ. ಇಷ್ಟಾಗಿಯೂ ಇಂತಹ ಘಾಟಿ ವ್ಯಕ್ತಿಯನ್ನು ಮೋದಿ ಸಮರ್ಥಿಸಿಕೊಳ್ಳುತ್ತಿದ್ದಾರೆ! ಅವರು ನಿರಪರಾಧಿ ಎಂದಿದ್ದಾರೆ.

ಈ ದೇಶದ ಕೋರ್ಟನ್ನು ಮೀರಿದ ವ್ಯಕ್ತಿಯಂತೆ ಮೋದಿ ಮಾತಾಡುತ್ತಿದ್ದಾರೆ. ಬಹುಶಃ ಅವರು ಕಾನೂನಿನ ಮುಂದೆ ತನ್ನ ಪತನಕ್ಕೂ ರಂಗ ಸಿದ್ಧಪಡಿಸುತ್ತಿದ್ದಾರೆ ಎಂಬ ಸೂಚನೆಯನ್ನೇ ಇದು ನೀಡುತ್ತಿದೆ ಎನ್ನಬಹುದು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಾಖಲೆ ಸಂಖ್ಯೆಯಲ್ಲಿ ಮತ ಪಡೆದು ಗೆದ್ದು ಬಂದ ವ್ಯಕ್ತಿ ಅಮಿತ್ ಶಾ ಆಗಿದ್ದಾರೆ. ವ್ಯಾಪಾರಿಗಳಿಗೆ ಅಡ್ಡಿ ಪಡಿಸುವ, ವ್ಯಕ್ತಿಗಳನ್ನು ನಿವಾರಿಸಿ ಲಕ್ಷಾಂತರ ಸಂಪಾದಿಸುವುದು ಅವರ ಕಸುಬು ಎಂಬುದು ಸಿಬಿಐ ವಿವರಣೆಯಾಗಿದೆ. ಸೊಹ್ರಾಬುದ್ದೀನ್ ಕೂಡಾ ಹಫ್ತಾ ವಸೂಲು ಮಾಡುವ ರೌಡಿಯಾಗಿದ್ದನಂತೆ. ಅವನ ಕಿರುಕುಳವನ್ನು ನಿವಾರಿಸಲು ಗುಜರಾತ್‌ನ ಮಾರ್ಬಲ್ ವ್ಯಾಪಾರಿಗಳು ಅಮಿತ್ ಶಾರಿಗೆ ಹಫ್ತಾ ನೀಡಿದ್ದರು. ಅದರಂತೆ ಪೋಲೀಸರನ್ನು ಬಳಸಿ ಸೊಹ್ರಾಬುದ್ದೀನ್‌ನ ಎನ್‌ಕೌಂಟರ್ ನಡೆಸಿತ್ತು. ವಂಜಾರಾ, ಅಭಯ ಚೂಡಾಸಮರೇ ಇದಕ್ಕೆ ನೇತೃತ್ವ ವಹಿಸಿದ್ದರು. ಆನಂತರ ಈ ವಿಚಾರ ಅರಿತಿರುವರೆಂಬ ಕಾರಣಕ್ಕೆ ಕೌಸರ್‌ಬೀ ಮತ್ತು ಸೊಹ್ರಾಬುದ್ದೀನ್‌ನ ಇನ್ನೋರ್ವ ಸಹಚರ ಪ್ರಜಾಪತಿಯನ್ನು ಪೊಲೀಸರು ಕೊಂದು ಹಾಕಿದರು. ನಕಲಿ ಎನ್‌ಕೌಂಟರ್ ಕುರಿತು ಸಿಬಿಐ ಹೊರಿಸಿದ ಆರೋಪವಿದು. ಆದರೆ ಮೋದಿಯ ಲೆಕ್ಕದಲ್ಲಿ ಇದ್ಯಾವುದೂ ಅಪರಾಧವೇ ಅಲ್ಲ. ಬಿಜೆಪಿಯೂ ಕೂಡಾ ಅಮಿತ್ ಶಾರ ವಿರುದ್ಧ ಸಿಬಿಐ ಸಂಚು ಹೆಣೆದಿದೆ ಎಂದು ಗದ್ದಲ ಎಬ್ಬಿಸುತ್ತಿದೆ. ಅದು ಗುಜರಾತ್‌ನ ಬೀದಿಗಳಲ್ಲಿ ಮೌನ ಮೆರವಣಿಗೆ ಹೊರಡಿಸುತ್ತದಂತೆ! ಆದರೆ ಇಡೀ ರಾಷ್ಟ್ರದಲ್ಲಿ ರಾಜಕಾರಣ ನಡೆಸುವ ಪಕ್ಷವೊಂದು ಸುಪ್ರೀಮ್ ಕೋರ್ಟಿಂದ ತನಿಖೆಗೆ ಆದೇಶಿಸಲ್ಪಟ್ಟಿರುವ ಪ್ರಕರಣದ ಕುರಿತು, ತಾನು ಗದ್ದಲ ಎಬ್ಬಿಸುವುದು ಸರಿಯೇ ಎಂದು ಯೋಚಿಸ ಬೇಕಿತ್ತು. ಬಹುಶಃ ಮೋದಿ ಸಾಮ್ರಾಜ್ಯದಿಂದಲೇ ತನ್ನ ಅಸ್ತಿತ್ವ ಉಳಿಯಬಹು ದೆಂದು ಅದು ಭಾವಿಸಿದಂತಿದೆ. ಪ್ರಧಾನಿ ಸಿಬಿಐಯನ್ನು ದುರ್ಬಳಕೆ ಮಾಡುತ್ತಿದ್ದಾರೆ ಎಂದು ಅದಕ್ಕೆ ಅನಿಸಿದೆ. ಸಿಬಿಐಯ ಕುರಿತು ಅಮಿತ್ ಶಾ ಪ್ರಕರಣದಲ್ಲಿ ಬೀದಿ ರಂಪ ಮಾಡಿದರೆ, ಕರ್ನಾಟಕದಲ್ಲಿ ಗಣಿ ವಿಚಾರವನ್ನು ಸಿಬಿಐಗೊಪ್ಪಿಸುವ ಬೇಡಿಕೆಯಿಂದ ಕಾಂಗ್ರೆಸ್ ಹಿಂದೆ ಸರಿಯಬಹುದೆಂದು ಸುಶ್ಮಾ ಯೋಚಿಸಿರುವ ಸಾಧ್ಯತೆಯಿದೆ ಎಂಬುದು ಇನ್ನೊಂದು ವಿಚಾರ. ಎರಡು ತಿಂಗಳಲ್ಲಿ ಅಮಿತ್ ಶಾ ಸಿಬಿಐ ಅಧಿಕಾರಿ ಗಳಿಗೆ ಸಿಕ್ಕದಂತೆ ಸ್ವತಃ ಮೋದಿಯೇ ಬಚ್ಚಿಟ್ಟಿದ್ದರೇ ಎಂಬ ಸಂದೇಹ ಕೂಡಾ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

ಗುಜರಾತ್ ಕ್ರಿಕೆಟ್ ಮಂಡಳಿಗೆ ಮೋದಿ ಅಧ್ಯಕ್ಷರಾದರೆ ಇದೇ ಅಮಿತ್ ಉಪಾಧ್ಯಕ್ಷರಾಗಿದ್ದಾರೆ. ಮಾತ್ರವಲ್ಲ ಈ ಅಮಿತ್ ಚೆಸ್ ಮಂಡಳಿಗೂ ಅಧ್ಯಕ್ಷ ರಾಗಿದ್ದಾರೆ. ಅಂದರೆ ಎಲ್ಲ ಮಂಡಳಿ ಇಲಾಖೆಗಳನ್ನು ಮೋದಿ ತನ್ನ ನಿಯಂತ್ರಣ ದಲ್ಲಿಟ್ಟುಕೊಂಡಿದ್ದಾರೆ ಅಥವಾ ತನ್ನ ಜನರನ್ನೇ ನೇಮಿಸಿದ್ದಾರೆ.

ಗುಜರಾತ್ ಗೂಂಡಾರಾಜ್ ಆಗಿದೆ. ಮಾಹಿತಿ ಹಕ್ಕು ಕಾರ್ಯಕರ್ತ ಅಮಿತ್ ಚೇತ್ವಾರನ್ನು ಬಿಜೆಪಿ ಎಂ.ಪಿ. ದೀನೂ ಸೋಳಂಕಿ ಕೊಲ್ಲಿಸಿದರೆಂಬ ಆರೋಪವಿದೆ. ಈ ಕೃತ್ಯದ ಆರೋಪದಲ್ಲಿ ಪೊಲೀಸರು ಈ ವರೆಗೂ ಯಾರನ್ನೂ ಬಂಧಿಸಿಲ್ಲ. 2002ರ ಕೋಮುದಂಗೆಯಲ್ಲಿ ಗುಲ್ಬರ್ಗ್ ಸೊಸೈಟಿ ಹತ್ಯಾಕಾಂಡಕ್ಕೆ ಪ್ರೇರೇಪಿಸಿದರೆಂದು ಮೋದಿ ಸರಕಾರದ ಸಚಿವೆ ಮಾಯಾಬೆನ್ ವಿರುದ್ಧವೂ ವಾರಂಟ್ ಜಾರಿಯಾಗಿತ್ತು. ಬಹುಶಃ 2002ರ ನಂತರ ತಾವೇನು ಮಾಡಿದರೂ ನಡೆಯುತ್ತದೆ ಎಂದು ಅಲ್ಲಿನ ಆಡಳಿತ ಪಕ್ಷದವರು ನಿರ್ಧರಿಸಿದಂತಿದೆ. ಅಪರಾಧಿಗಳನ್ನು ರಕ್ಷಿಸುವ ಮೋದಿಯ ಸಾಮ್ರಾಜ್ಯವು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದುದು. ತನ್ನ ಹಂತಕ ವರ್ಚಸ್ಸನ್ನು ಅಭಿವೃದ್ಧಿಯಾಗಿ ಬದಲಾಯಿಸಲು ತಿಪ್ಪರಲಾಗ ಹೊಡೆಯುವ ಮೋದಿಯಿಂದ ತನ್ನ ಇಂಥ ಪರಿವಾರಕ್ಕೆ ಅಭಿವೃದ್ಧಿಯೆಂದು ಬಣ್ಣ ಹಚ್ಚಲು ಯಾವಾಗಲೂ ಸಾಧ್ಯವಾಗದು. ಒಂದು ದಿವಸ ಕೋರ್ಟು ಕಾನೂನಿನ ಸುಳಿಗೆ ಸಿಕ್ಕಿ ಬೀಳುವುದರೊಂದಿಗೇ ಜನರ ತೀರ್ಪಿನಲ್ಲಿಯೂ ಅವರ ಪರಿವಾರ ಮೂಲೆಗೆಸೆಯಲ್ಪಡಬಹುದು. ಈಗ ಅಮಿತ್ ಶಾರ ವಿರುದ್ಧ ಸಿಬಿಐ ಸಲ್ಲಿಸಿದ ಆರೋಪ ಓದಿದರೆ ಅಮಿತ್‌ಶಾ ಒಬ್ಬ ಅಪ್ಪಟ ಗೂಂಡಾ ಎಂಬುದನ್ನು ವಿವರಿಸುವ ಅಗತ್ಯವೇ ಎದುರಾಗುವುದಿಲ್ಲ.

Volume: 33, Issue: 20, Printed & Published by M. Sadullah on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. Editor: Abdul Kader Kukkila, Chief Editor: P. NOOR MUHAMMED
Ph: 2422786. Fax: 91-0824-2426846. E-mail: sanmargamatter@gmail.com Website: www.sanmarga.com (Regd. with RNI No. 29903/78)